dhura-kânti-guṇadin end in- ǀ
t ire pêḷvudan aṟidu koḷge hêtûpameyaṃ ‖ 85

1 A & B kara.
2 A & B s'rîṣaṃ.
3 C pôlguṃ.
4 C ântaṃ.
5 C tati.

Kan ‖ hînâdhika-guṇa-dôsha-vi- ǀ
tânamumaṃ liṅga-vachana-bhêdaṅgaḷumaṃ ‖
mâna-dhanar[1] aṟidu pêḷg anu- ǀ
mânakk a-viruddham âge lakshyâgamadoḷ ‖ 86

ninn ante surêśvaran u- ǀ
tpanna-mahaiśvaryyan embuduṃ jala-nidhi tâṃ ‖
san-nuta-gabhîran embudu- ǀ
m inn adu hînâdhika-prasan(śaṃ)nâ(sâ)nuguṇaṃ ‖ 87

koḷad ant ambaram ati-ni- ǀ
rmmaḷam ìtaṃ svâmi-bhaktan enduṃ nây-vô- ‖
l iḷeyaṃ karam embud id a- ǀ
ggaḷam â hînâdhika-praśaṃśâ-dôshaṃ ‖ 88

purusham-bôl îke karaṃ ǀ
purushâkṛitiy embud intu nânâ-liṅgaṃ ‖
nirutaṃ prâṇaṅgaḷa vôl ǀ
ne(na)rapaṃ priyan embud intu nânâ-vachanaṃ ‖ 89

int upamâ-kramaman a-pa- ǀ
ryyantaṃ guṇa-gaṇaman aṟidu pêḷge kavîśar ‖
santatam int akkuṃ kân- ǀ
tântikam atiśayada lakshya-lakshaṇa-yugadiṃ ‖ 90

mêre-gaḷed ire viśêsha-vi- ǀ
châraman adhikôktiyoḷ taguḷchuvud akkuṃ[2] ‖
sâra-taram atiśayâlaṅ- ǀ
kâraṃ matt adaṟa lakshyam î taṟan akkuṃ ‖ 91

gairika-rasârdramaṃ sin- ǀ
dûrade[3] tale-vaṟidudaṃ karaṃ kaṇḍ âṃ san- ‖
dhyâ-râgadoḷ aṟiyade mada- ǀ
vâraṇamaṃ sôṅki keladoḷ oyyane pôdeṃ ‖ 92

malayaja-charchchiteyaṃ kê- ǀ
vala-dhavaḷâbharaṇeyaṃ dukûlâmbareyaṃ ‖
keladoḷ nileyuṃ jyôtsnâ- ǀ
vilâsadoḷ bageden illa nallaḷan inisaṃ ‖ 93

1 B. varan.
2 C enduṃ.
3 B dhûrade.

Kan || âśâ-vaḷayita-lôkâ- |
kâśam id ên ati-viśâlamô ninna yaśô- ||
râśiyan indu-dyutiya ni- |
kâśaman oḷa-koḷgum aḷavingaḷid irddudumaṃ || 94

stuti-nindegaḷiṃ sa-viva- |
kshita-guṇadoḷ sadṛiśam âgi pôḷvudu peṛataṃ ||
nuta-sadṛiśa-yôgitâlaṅ- |
kṛiti-lakshaṇam akkum intu tad-udâharaṇaṃ || 95

Amarâdhirâja-Hutavaha- |
Yama-Nairṛita-Varuṇa-Vâyu-Yakshêśâna- ||
kramadin avar eṇbar ant u- |
ttamanai nîṃ navama-lôkapâḷane avaroḷ || 96

jaladada neḷaluṃ paramaṃ[1] |
vilâsamuṃ beḷaguv udita-vidyul-lateyuṃ ||
nelasavu chalaṅgaḷ âdaṃ |
vilâsinî-janada nalmeyuṃ saṅgamamuṃ || 97

upamita-bhêdôkti-krama- |
m a-parimitâkhyâ-kṛiti-prayôgânugataṃ ||
Nṛipatuṅga-dêva-matadin- |
d upamâ-bhêdaṅgaḷinde taṛi-salg aṛivaṃ || 98

viditârttha-viparyyâsâ- |
spadame dal âkshêpam emb aḷaṅkâraṃ ma- ||
tt adaṟa viśêsha-vibhâgama- |
n udâharaṇa-mârggadiṃ prayôgisi tôrppeṃ || 99

mṛidu-tara-mârggade kennaṃ |
madana-śarânîkam oykan olavaṃ paḍeguṃ ||
hṛidayaman aḷavaḷavind uṟe |
vidârisuvud intu kusuma-mayam alt adaṟiṃ || 100

dhanamaṃ nerapade vidyâ- |
dhanamaṃ mâḍade taguḷdu negaḷade tapadoḷ ||
manujatvam a-phalam âyt en- |
t enag embudan aṛivud ati(nu)śayâkshêpakamaṃ || 101

1 A & B para-puṃ.

Kan || sarasija-virôdhi-kântyâ- |
karam amṛita-mayaṃ tvadîya-mukha-śaśiy uṇṭ â- ||
g ire śaśiy ad êvud embudu |
nirutaṃ ślêshânuviddhaṃ app âkshêpaṃ || 102

vara-haṃsa-kadambakam adu |
śarad-ambudam altu mukhara-nûpura-saṃvâ- ||
di-ravaṃ negaḷd appudu ban- |
dhuram adaṟind idaṟoḷ embud upamâkshêpaṃ || 103

mada-kariyô ghana-samayâm- |
budamô ghanam altu negaḷvud[1] adaṟoḷ sapta- ||
chchhada-gandha-surabhi paduḷaṃ |
mada-kariyane nenege saṃśayâkshêpamaṃ || 104

mâna-dhanâ pogaḷisal ên- |
dâniye ninn ante ninna kasavaram enduṃ ||
dînânâthara keyy adu |
dâniy ad ent embud intu hêtvâkshêpaṃ || 105

vyatirêka-vikalpam id in- |
d Atiśayadhavaḷôpadêśa-mârgga-kramadin- ||
d ati-nipuṇar aṛidu koḷg anu- |
matiyind âkshêpam emb aḷaṅkâramumaṃ || 106

Gitike || prati-padârttha-tattva-bhêdadoḷ |
pratishêdhamaṃ negaḷguṃ anite mâḷkeyin- ||
d atiśayâkshêpa-gaṇanâ-vyati- |
gati Nṛipatuṅga-dêva-mârggadoḷ || 107

Kan || nânârttham êka-rûpâ- |
dhîna-vachô-rachitam appoḍ akkuṃ ślêshaṃ ||
mânitam aḷaṅkriyânuvi- |
dhânaṃ matt intu tad-upalakshya-vikalpaṃ || 108

udayârûḍhaṃ kântyâ- |
spadan anuraktâtma-maṇḍalaṃ kumuda-karaṃ ||
mṛidu-tara-karaṅgaḷind ati- |
mudamaṃ lôkakke paḍeguṃ int î râjaṃ || 109

1 A & B negaḷchad.

Kan || vipuḷa-tara-kaṭakan udya- |
d-dvipa-haḷe(ri)-mahishî-nishêvyan unnata-pâdaṃ ||
vyupanîta[1]-śrî-phala-daṃ |
viparîtakan appan antu bhûbhṛin-nâthaṃ || 110

nereda visaṃvâdaṃ pañ- |
jara-śuka-tatiyoḷ kulâla-gêhaṅgaḷoḷaṃ ||
para-chakra-bhrântigaḷ a- |
dhvaradoḷe negaḻgûṃ mahâhava-dhvani-niyataṃ || 111

ari-gôtra-bhêdi vibudhê- |
śvaran allaṃ dhṛita-kaḷâ-kaḷâpaṃ dôshâ- ||
karan allaṃ viditômâ- |
varan âtta-bhujaṅgan allan î bhûpâḷaṃ || 112

vara-rûpakâdy-aḷaṅkâ- |
ra-rachaneyoḷ munne pêḻdu bandem kelavaṃ ||
dore-koḷe bageg î teṟadiṃ |
nirantara-viruddha-niyamita-ślêshegaḷaṃ || 113

taṟi-sandu palavu teṟadiṃ |
teṟed[2] ire negaḻd irddud ondu vastu-sthitiyaṃ ||
maṟasi peṟat ondu mâḻkeyi- |
n aṟipuvud utprêkshey embud int adaṟa teṟaṃ || 114

naḍu-vagala bisil tannaṃ |
suḍe vana-kari kamaḷa-bandhuvoḷ dina-karanoḷ ||
kaḍu-gâyp ene sarasijamaṃ |
kiḍisal[3] tâṃ pokkud âga bageg â koḷanaṃ || 115

nelasi kiviyoḷ mad-âyata- |
vilôka(pa)doḷ poḷevud oḷpan end î karṇṇô- ||
tpalamuman âkramisuvud idu |
vilâsinî ninna lôla-lôchana-yugaḷaṃ || 116

baged iṅgita-chêshṭâkâ-
ra-gataṅgaḷin antaraṅgadoḷ maṟasidudaṃ ||
mige sûchisuvudu sûkshmâ- |
nugatâḷaṅkâram intu tad-udâharaṇaṃ || 117

1 C vyapanîta.
2 B nered.
3 A & B keḍisal.

Kan || tiḷipal aḍig eṟagid ôpana |
taḷaṅgaḷâ tiṭadiṃ padaṅgaḷoḷ oged â ||
puḷaka-chayaṅgaḷ kaḷeduvu |
muḷisaṃ nallaḷge beḷ-mogaṃ geyd ireyuṃ || 118

parushâḷâpamum ati-ni- |
shṭhura-vîkshaṇa-mukha-vikâramuṃ maṟas ireyuṃ ||
taraḷâpâṅgamum âkeya |
dara-hasitamum aṟiye pêḻgud(m) eṟakaman erdeyoḷ || 119

guṇa-jâtyâdigaḷoḷag anu- |
guṇam âg ire pêḻad avaṟa vikaḷateyaṃ sa- ||
yt enisi viśêshaman aṟipuva |
gaṇane viśêshânubhâva-sad-aḷaṅkâraṃ || 120

alar-ambu karbbu-vil kô- |
mala-sarasija-nâḷa-tantu tiru matt ivaṟâ ||
baladin agaldaran echch â |
tri-lôkamaṃ Kantu basake barisuvan entuṃ || 121

sphuriyisade daśana-vasanân- |
taram âraktaṅgaḷ âgad enasuṃ kaṅgaḷ ||
bharita-bhrûkuṭi-kalam â- |
g irade mukhaṃ geldan intuv ari-nṛipa-balamaṃ || 122

para-pa(va)sada bageyoḷ ondaṃ |
dore-koḷisuvud aṟig a-tarkkitôpasthânaṃ ||
nirutaṃ samâhitâḷaṅ- |
karaṇântaram akkum intu tad-udâharaṇaṃ || 123

muḷid irdda nallaḷ allige |
tiḷipal pôp enna bagege dore-koḷe matt in- ||
t eḷa-veṟe gaganântarado- |
ḷ poḷedatt ettaṃ vasanta-samayôttaṃsaṃ || 124

taḍe-taḍedu kântan allige |
naḍeyal baged-enage kâra-kâr-iruḷoḷ sa- ||
yt aḍavaḍikegaḷaṃ toḍed- |
tt eḍe-vaṟiyade poḷeva miñchu mugil eḍey-eḍeyoḷ || 125

Kan || taṟi-sandu manadoḷ ondaṃ |
peṟataṃ matt adane pôlvudaṃ kuṟipugaḷaṃ ||
kuṟi mâḍi mâḍi pêḷvudu |
neṟeye samâsôktiy embud int adaṟa teṟaṃ || 126

tâmarey araloḷ sarasa-ni- |
jâmôdadoḷ ondi nalidu makaranda-rajô- ||
vyâmugdhadoḷ î muguḷoḷa- |
m â mâḷkeyan aṟasi suḷivud aḷi kela-keladoḷ || 127

nered ati-viru(da)ddha(gdha)-gaṇikâ- |
suratâsava-sêvanâ-kritô(tau)danan âg i- ||
rdd irade taruṇî-ratântara- |
sa-râgamaṃ pêḷvud alli tumbiya nevadiṃ || 128

dâna-paranaṃ nijônnata- |
mânanan ârûḍha-vipuḷa-vaṃśaman ant on- ||
d âneyan apâya-paṅkado- |
ḷ ênuṃ tav illad irddudaṃ kâṇisidaṃ || 129

tyâgâdi-guṇa-gaṇôdaya- |
bhâgiyan ênânum ond upâyântaramaṃ ||
nîgal neṟeyadey anupama- |
n î gaṇidadin âne mâḍi nuḍidaṃ bageyaṃ || 130

baged arthaman aṟipade me- |
llage tirdduva bageyan adaṟa nevadiṃ peṟataṃ ||
nigadisuvudu paryyâyô- |
kti-gatâlaṅkâram adaṟa pâṅg int akkuṃ || 131

nîm irbb(rvv)arum annegam in- |
t î mâḷkeyoḷ inisu poltu nuḍivu(yu)tt irim â- ||
n âmôda-kusuma-samitiya- |
n â maragaḷoḷ âydu koydum illige barppeṃ || 132

keḷadiyam abhimatamuman o- |
rbhuḷi gûḍe vidagdhe[1] surata-sêvanamaṃ mo- ||
kkaḷaṃ avarge mâḍal end â- |
gaḷe pôgal bagedu nuḍidaḷ int î mâtaṃ || 133

1 B vidagdha.

Kan || ond-ondaṟoḷ ondaduvaṃ |
tand orbbuḷi mâḍi tad-viśêshântaramaṃ ||
sandêham illad aṟipuvu- |
d onde virôdhâbhidhânam adum int akkuṃ || 134

sarad-âgamadoḷ kaḷa-haṃ- |
sa-ravaṃ perchchittu kivige sogayisi pînaṃ ||
viraḷa-taram âytu barhiṇa |
virâvam uru-muda-virâma-virasa-virâgaṃ || 135

malayânilan esakadin udi- |
rv alargaḷa makaranda-mâlegaḷ pared ettaṃ ||
neladoḷ biḷduṃ paḍeduvu |
vilôchanâmbugaḷan aggaḷaṃ virahigaḷâ[1] || 136

dore-koḷvant ire munnaṃ |
virôdhi-gata-mârgga-bhêdamaṃ tôriden â- ||
daradin upamâdigaḷoḷaṃ |
nirutam an-uktamuman aṟige lakshyântaradoḷ || 137

prastutam alladudene mige |
vistârisi negaḷe pêḷdoḍ akkuṃ matt a- ||
prastutam embud alaṅkriti- |
vistaraṃ int akkum adaṟa lakshya-vibhâgaṃ || 138

mriga-gaṇame sukhaṃ bâḷguṃ |
sogayisuva vanântarâḷadoḷ bahu-triṇadoḷ ||
baged aḷipi suḷidu nôḍade |
mogamaṃ vasu-mada-virâma-kalushâya(yi)tarâ || 139

santaṃ mriga-gaṇa-vrittiya- |
n int aprastutaman aṟipidaṃ para-sêvâ- ||
chintâ-vishâditânta- |
s-svântaṃ santaisal endu tannaṃ tânê || 140

guṇa-dôshâdigaḷind anu- |
guṇam âg ire pêḷdu tad-anu-sadriśadin ondaṃ ||
praṇihita-nidarśśana-krama- |
d enisuvud akkuṃ nidarśśanâlaṅkâraṃ || 141

1 A & B gaḷoḷ.

Kan || a-maḷina-guṇa-vṛittigaḷiṃ |
samupasthita-sakaḷa-jana-gatôchita-guṇamaṃ ||
saman âgisuvar kkannaḍi- |
kamanîyâkâra-bimbamaṃ taḷduva vol || 142

janam aṟiyad annegam mun- |
naṃ nayam aṟid aṟipal ârppoḍ adu mantri-guṇaṃ ||
jana-vâdaṃ[1] negaḷe naga- |
dhvani-vôl anukaraṇa-vârte mantriya guṇamê || 143

tale sûḍi munne kajjada |
phalamaṃ besa-goṇḍu me.. van allim baḷiyam ||
taleyaṃ kiriyisi divasama- |
r..lasade besa-goḷvan antu gâvilan akkuṃ || 144

pratikûlan âgi nile vidhi |
mata-nayam anukûlam âgi nileyuṃ kâryya- ||
sthitiyaṃ sâdhisal âgadu |
mṛitaka-kṛitôpakṛitiya vol anartthâyâsaṃ || 145

paded udayisal endum kâ- |
ladoḷ allad udâra-têjan arkkanum allaṃ ||
sad-udita-guṇan adaṟiṃ naya- |
vidan appaṃ kâlamaṃ neraṃ tôrkke nṛipaṃ || 146

paḍey aṟiyal âdoḍ aṟiyaṃ |
kiḍisugum antaḥ-kaḷaṅka-nṛipa-maṇḍalamam ||
taḍeyade tamas-svabhâvaṃ |
kiḍisuva vôl aṟidu râhu śaśi-maṇḍalamaṃ || 147

kiṟid end êḷisi pageyaṃ |
paṟi paḍe kiḍisadoḍe pettu kâlada balamaṃ ||
neṟad irigum neṟed anuvaṃ |
maṟasuva vol divasa-karanan ambuda-nivahaṃ || 148

oḷag irdda vairigaḷ mo- |
kkaḷam îyar pperchchal adhika-vibhavarkkaḷanuṃ ||
taḷa..doḍan irddu baḍavâ- |
naḷan enduṃ perchchal îya[d an]t ambudhiyaṃ || 149

1 B vâdâ.

Kan || para-paksham uḷḷinaṃ tana- |
g irav ubbasam adaṟin aṟivud adan ê-geyduṃ ||
paredu puḍiy ellamaṃ nî- |
r nneredu kesar mmâḷad annegaṃ nelasugumê || 150

kuṟi-goṇḍu negaḷdan ichchheya- |
n aṟiyade tann ichchheyinde kajjaṃ bêḷvaṃ ||
daṟi-salisal âṟan[1] ârttana |
taṟan aṟiyade marddu vêḷva bejjana teṟadiṃ || 151

pariṇâma-pathyamaṃ sukha- |
parikaramaṃ mechchadannar âr î mâtaṃ ||
niratiśaya-rasa-samêtama- |
n arôchakaṃ mechchad ante sogayisuv unisaṃ || 152

int udita-bhêdamaṃ dṛi- |
shṭântâḷaṅkâra-mârggamaṃ Kannaḍadoḷ ||
santata-guṇamaṃ kai-ko- |
ḷv ant âg ire bagedu pêḷge parama-kavîśar || 153

guṇa-jâtyâdigaḷind ore- |
y enisuvudu sahôktiy embud akkuṃ nânâ- ||
gaṇanâ-viśêsham âg î |
gaṇidadin âraidu koḷge lakshyaman adaṟâ || 154

ati-dhavaḷam âytu guṇa-san- |
tatiy oḍane yaśô-vitânam âśâdhînaṃ ||
satataṃ perchchittu nijâ- |
yatiy oḍane mahâ-vibhûti paramôdayanâ || 155

saṅkîrṇṇam embud uktâ- |
ḷaṅkâra-samûha-saṅkara-kramam akkuṃ ||
śaṅkâ-vi ahita-chittar a- |
daṃ kâvyadoḷ intu pêḷge kavi-vṛishabharkkaḷ || 156

apa-râgaṃ muni-pati-vô- |
l apagata-guṇan âgiyuṃ nijâyata-dôshaṃ ||
vipuḷa-yaśô-dhana-lôbham |
nṛipa-vṛishabhan arâti-nikara-taru-dava-dahanaṃ || 157

1 B salisan âran.

Kan || parivṛittiy embud akkum |
nirupamam arttha-svarûpa-vinimaya-vachanam ||
parama-guṇôdayam adaṟâ |
svarûpamam bagedu koḷge matt î teṟadim || 158

arige durâvaha-raṅgân- |
taradoḷ abhîtam nijâri-samiti-gaḷindam ||
nereda jayam-goṇḍ âgad : |
surâṅganâ surata-vishaya-sukhamam koṭṭam || 159

atiśayam âg ire guṇa-san- |
tatiyam dôshamane pêḷdavol pêḷvudu ni- ||
śchita-śabdârtthaṃ vyâja- |
stutiy embudum adaṟa mâḷke matt int akkum || 160

jala-râśi-prabhaveyan a-vi- |
kala-kṛishṇa-guṇânurakteyam mige Lakshmî- ||
lalaneyan ântum vaksha- |
sthaladoḷ pêḷ ent udâra-charitane appai || 161

satatam bhujaṅga-bhôgâ- |
śrite ninna kaḷatram î dharâ-vadhu matt in- ||
t atiśayade mahâ-purusha- |
bratamam tâḷduvaḷ udâra-charita-kramadim || 162

kâraṇam âg irppud aḷaṅ- |
kâram hêtûktiy embud adu tâm nânâ- ||
kâram jñâpaka-sad[1]-aḷaṅ- |
kâra-su-mârgga-prayôgam î teṟan adaṟâ || 163

indu-kiraṇaṅgaḷindam |
chandana-rasadinde mâgiyâ nîrindam ||
nandadu paritâpânaḷa- |
n ind aṟidem ninna meyya kâma-jvaramam || 164

aṟiv uḷḷavaroḷ berasu(sa)vu(du)- |
daṟindam aṟiyadaroḷ appa parichayadindam ||
nerey indriyamam gelladu- |
daṟindam akkum janakke pînam besanam || 165

[1] B i vikasad.

Kaṅ || beḷed oṟagida kaḷamegaḷum |
tiḷi-goḷadoḷag alarda sarasija-pratatigaḷum ||
kaḷahaṃsegaḷge kômaḷa- |
viḷâsa-vatigaḷge paḍegum osageyan âgaḷ || 166

tiḷi-goḷagaḷum amaḷâśâ- |
vaḷayamum ati-dhavaḷa-jaḷada-jaḷadhara-pathamum ||
toḷap eḷa-vereyum kaḷeduvu |
muḷisam kâmigaḷa chittadoḷ nelasidudam || 167

kâraṇaman uḻipe nija-sam- |
skâra-guṇâtiśayadoḷ taguḷchuvud akkum ||
sâram vibhâvanâḷaṅ- |
kâram matt adaṟa lakshyam î teṟan akkum || 168

samaṟigey illada maṟukamu- |
m amard ire kai-geyyad appuv andamum avaḷâ ||
nevam illada dara-ra(ha)samum |
sa-madâlasa-lalita-gamanamum sogayisugum || 169

guṇadoḷam aṟipuvud inis ava- |
guṇamam dôshadoḷam inisu guṇamam tand i- ||
rdd enisuvudu lêśam embudu |
gaṇidadin int akkum ava(da)ṟa lakshya-vibhâgam || 170

mâniyum udâra-charitanu- |
m ânata-ripu-nikaranum manasviyum ant â ||
mânasaran ârumam mana- |
k ênum muṭṭ allad antu bagevudu dôsham || 171

kulajanum allam nanpina |
balamum tanag illa kaṅgam êḷidan ârô- |
ḷ nelas iran elliyum anavam |
chalav endum pattu viḍad ad ond uṇṭu guṇam || 172

mige manada pempumam kai- |
mige vibhavada pempumam viśêshisi pêḷa- ||
l bagevud udâttâḷaṅkâ- |
ra-guṇôdayam adaṟad intu sad-udâharaṇam || 173

Kan || chalad eḍege piridu rajamuṃ ।
nelanuṃ priyad eḍege kiṟidu koḷaluṃ kaḍaluṃ ||
chalamuṃ priyamuṃ baḻi sama- ।
balam âg ire negaḷva[1] bagege kiṟid êṃ pirid êṃ || 174

aḻid aḻipi baḻiyan uḻiyadê ।
paḻivarumaṃ tavisi kaḷiyad uḷivaḷan âdaṃ ||
paḻi keydu toḷtan uḻidaṃ ।
tuḻida mahâ-purushar aṟiyad uḻidare siriyaṃ || 175

kasavaraṃ embudu neṟe sai- ।
risal ârppoḍe para-vichâ[2]ramuṃ dharmmamumaṃ ||
kasav êṃ kasavaram ên u- ।
bbasamaṃ basam allad irddu mâḍuvar ellaṃ || 176

pâḻi nile negaḻi bâḷvudu ।
bâḷ embudu nikkuvaṃ guṇa-grâmiṇigaḷ ||
pâḷ âge tegaḷe bâḷv â ।
bâḷ ên â chandra-târamô[3] mânasarâ || 177

poliameyuṃ guṇamuṃ tama- ।
g allade puduvalla matte tanaguṃ peṟargaṃ ||
nillade jana munt âgiyu- ।
m ellaṃ munis osage-verasu paḻiguṃ pogaḻguṃ || 178

mige paḻivar ennan ennade ।
pogaḻvar nnered ellar ennan ennade tanno- ||
ḷ baged ubhaya-lôka-hitado- ।
ḷ negaḷe javaṃ paḻige pogaḻge tanag ên adaṟoḷ || 179

praṇatâri-tṛiṭita-muktâ- ।
ga(gu)ṇa-gaṇanô(nu)ttaṃsadiṃ kaḷald udure sabhâṅ- ||
gaṇam oppe Vira-Nârâ- ।
yaṇanâ târakita-nabhada vol sogayisuguṃ || 180

para-chakra-bhûpar aṭṭida ।
karigaḷ biḍu tappa madada ponalind ettaṃ ||
Naralôkachandranâ man- ।
dirada olag oḷag ella-kâlamuṃ kesaṟ akkuṃ || 181

1 B negalda.
2 B vibhâra.
3 B târamê.

Kan || atiśayita-vastu-vishaya- ।
pratîtiyaṃ maṟasi niṟisi pêḷvudu peṟataṃ ||
satatam apahnuti sad- aḷaṅ- ।
kṛiti matt int akkuṃ adaṟa lakshya-vikalpaṃ || 182

amṛita-maya-kiraṇan embudu- ।
m amaradu śiśirâṃśuv embuduṃ śaśig enduṃ ||
samanisi visha-kiraṇanum ana- ।
la-marîchiyum end enalke môhâpôhaṃ || 183

kusumaṅgaḷ emba mât adu ।
pusi dahana-mayaṅgaḷ ambugaḷ manasijanâ ||
jasam aḻiye suḍuvud(v) erdeyaṃ ।
bisiyav iv end inte pêḻe dharmmâpôhaṃ || 184

Smaran astra-samitiy adu ni- ।
rbbharam aṅgaman urchchi pôgeyuṃ pô baḻiyaṃ ||
dore-koḷisal âgad adaṟiṃ ।
śara-tatiy alt embud intu dharmmâpôhaṃ || 185

Smaran aid ambugaḷ all ivu ।
śara-kôṭigaḷ illad âgaḷ int î lôkân- ||
tara-vartti-virahi-gaṇamaṃ ।
nirutaṃ marddisu[vu]v au(v)ene suguṇâpôhaṃ || 186

nava-vidha-rasaṅgaḷaṃ mana- ।
ke vare nirûpisuva vachana-virachane rasava- ||
tya(d-vi)vidhâḷaṅkâraṃ kuṟi- ।
tu vikalpisi tôrppen adaṟa lakshya-kramamaṃ || 187

vîrâdbhuta-karuṇâ-śṛiṅ- ।
gâra-bhayânaka-sa-raudra-bîbhatsa-mahâ- ||
sâra-tara-hâsya-śântâ- ।
dhâraṃ nava-vidha-vikalpam â rasa-mârggaṃ || 188

Râvaṇanaṃ kondu jaya- ।
śrî-vadhuvaṃ tâḷdi muyvinoḷ vara-Sîtâ- ||
dêvateyaṃ tarpp annega- ।
m ôvade purusha-bra(vra)tôchitaṃ vîra-rasaṃ || 189

Kan || jala-nidhiyaṃ pâyd orvvane |
nilisi Daśânanana poḷalan â Laṅkeyan â- ||
kuḷam illad irida(du) nindaṃ |
kaliy âvaṃ bagedu nôḻpoḍ adbhutam âdaṃ || 190

kare karedu manô-dhṛitiyaṃ |
nerev âseyoḷ irddaḷ allad uḷidoḍe ninnâ ||
virahânaḷanâ tâpade |
karagugum inn âkeg inisu karuṇisu manadoḷ || 191

puḷakita-kapôla-phaḷakaṃ |
viḷasita-madirâruṇêkshaṇaṃ sphuritôshṭhaṃ ||
keḷadi ninna mukhaṃ taḷa- |
maḷe goḷisuguṃ intu nibhṛita-śṛiṅgâra-rasaṃ || 192

tâḷa-taru-vitatiyoḷ bê- |
tâḷaṅgaḷ moṟedu teṟedu bâygaḷan â pâ- ||
tâḷa-bilaṅgaḷa vol taḷa- |
tâḷa-laya-kramade kuṇiye bhaya-mayan âdem || 193

kondu Jaṭâyuvan âtaṃ |
mund iṭṭ â Janaka-suteyan oyduṃ(aṃ) matt â ||
pandeyan antaka-mukhadoḷ[ḷ] |
tand iṭṭ and allad uḷigumê raudra-rasaṃ || 194

nava-vivarâvṛita-pûta- |
drava-tvag-âvṛita-vimiśra-mâṃsôpachitaṃ ||
dri (dhru)vam asu-chitra-bhramita- |
krivahaṃ mai bagevoḍ intu kisuguḷam âdaṃ || 195

para-purusha-sêvanâ-kṛita- |
surata-vikâraṅgaḷ ellamaṃ nija-patiyoḷ ||
nered âgaḷe maṟeyal bage- |
d irav âdu nagisittu pînaṃ abhisârikeyâ || 196

. . . ṇadoḷ parichitamaṃ |
dviguṇam ad ôrante maṭṭam irddudu mattaṃ ||
vigata-vikârâkâraṃ |
sogayisuguṃ ninna rûpu śântâdhâraṃ || 197

Kan || ârûḍha-nija-manô-haṅ- |
kârôtkarshsha-prakâśaṃ ûrjjita-sad-aḷaṅ- ||
kâraṃ tadi . . . . vi- |
châraman î teṟadin aṟidu koḷge kavîśar || 198

kollem bisuḍ âyudhamaṃ |
pullaṃ karchch êṟu puttan aḍig eṟag ennâ ||
nillade tolag idirind an- |
t alladoḍ eḷd ârddu kaidu gey nîn îgaḷ || 199

maguḷduṃ ma . . . . mâtaṃ |
negaḷd ire pêḷd âgaḷ akkum â vyâvṛitti- ||
sva(tva)-gatâḷaṅkâraṃ bage- |
g agâdha-manar adaṟa teṟanan î kṛtipugaḷiṃ || 200

virahaṃ paritâpaman â |
paritâpamum aḷipan aḷipu .. vallabhanoḷ ||
bage(ri)d irppa bageyan â nera- ! |
d iravuṃ suratânurâgamaṃ perchchisuguṃ || 201

nuḍiyaṃ taguḷchi nôṭaṃ |
nuḍi-parichayamaṃ taguḷchi parichayam aḷipaṃ ||
taḍeyade taguḷchi manad aḷi- |
p oḍagû . . . . . daṃ taguḷchuguṃ kâmigaḷâ || 202

priya-kuśala-pûrvvakôchita- |
naya-vinayôdâra-ruchita(ra)-vachana-prâyaṃ ||
priyataram embudu sakaḷa- |
kriyânugamitârttham intuṭ ad udâharaṇaṃ || 203

gu. . . . da-parakeyaṃ baṅ- |
dhura-puṇya-phaḷânubandhamaṃ nered enno- ||
ḷ paramânubhâva-bharamaṃ |
dore-koṇḍa(ḍu)v ad indu baravinoḷ nimm aḍiyâ || 204

dore-koṇḍu manada bageyaṃ |
pirid âg ire piriyar osageyaṃ . . . . . duṃ |
paramâśîr-artthâḷaṅ- |
karaṇântaram adaṟa lakshyam î teṟan akkuṃ || 205

Kan ‖ âyuṃ śrîyuṃ vijayamu- ।
m âyatiyuṃ nṛipati ninage nija-santatiyuṃ ‖
nvâyade perchchuvud akk î ।
tôyadhi-dhara[ṇî-dha]râdhara-sthiti-varegaṃ ‖ 206

Gitike ‖ bhâvam embud akkuṃ kavigaḷâ ।
bhâvisi manada bagey ondid arttham ‖
kêvalam adaro[ḷ a]ḷaṅkṛiti ।
rabhâvakam embud akkuṃ Nṛipatuṅga-dêva-matadiṃ ‖ 207

Kan ‖ dhvaniy embud aḷaṅkâraṃ ।
dhvaniyisuguṃ śabdadindam artthade dûshyaṃ ‖
nenevud idan intu kamaḷado- ।
ḷ animisha-yugam oppi tôrppud int idu chôdyaṃ ‖ 208

vṛi ‖ atiśayam itihâsôpâśrayaṃ mên kathâ-vi- ।
śruta-chatura-vi[kâ]śôtpâditârtthôtkaraṃ mê- ‖
n ati-kuśala-ba(?)lîlâchâra-lôkôpakârô- ।
dita-parama-guṇaikôdâra-dhîrâdhikâraṃ ‖ 209

parama-sukha-pada-śrî-dharmma-kâmârttha-môksha- ।
sthira-vishaya-viśêshâkhyâna-vikhyâta-tattvaṃ ‖
pura-janapada-śailâditya-chandrôdayâstân- ।
tara-sa-mṛiga-gaṇâbyâvarṇṇanâ-nirṇṇayârtthaṃ ‖ 210

samudita-kusumâmôdôdayôdyâna-lîlâ- ।
krama-vihita-jala-krîḍâ-vinôdâdi(dya)nîkaṃ ‖
pramada-madana-mâdyad-yauvanôdyâna-râmaṃ ।
ramaṇa-raṇi .. gôshṭhî-bandha-sandhi-prabandhaṃ ‖ 211

vividha-vibhava-śôbhârambha-lambha-pralambhô- ।
dbhava-vihita-vivâhôtsâha-sâkalya-kalpaṃ ‖
pravara-nṛipa-kumârâttôdayâvipramôdâ- ।
sava-samudita-sêvâ-râśi-vṛittânta-vṛittaṃ ‖ 212

naya-vinimaya-nânâ-mantra-dûta-prayâṇâ- ।
kshaya-samaya-viḷâsôllâsi-saṅgrâmitâṅgaṃ ‖
bhaya-virahita-vîryyaudâryya-gambhîra-kâryyâ- ।
śraya-viśada-guṇa-śrî-nâyakôtkarshsha-vêdyaṃ ‖ 213

vṛi ‖ vilasita-sad-aḷaṅkârâdi-saṃsâdhitârtthaṃ ।
kula-vidita-padôdyat-kômaḷâḷâpa-śîlaṃ ‖
su-lalita-guṇa-nânâ-vṛitta-jâti-pravṛitta- ।
skhalita-rasa-viśêshôpâśraya-śrî-nivêśaṃ ‖ 214

naya-vid-udita-yukti-vyakti-lôka-pratîty-â- ।
śraya-sakaḷa-kaḷâ-lîlâkarâlpôpajalpaṃ ‖
niyata-samaya-sârâsâdhanîyâdi-târâ- ।
nvaya-parama-tapônushṭhânan ishṭârttha-siddhaṃ ‖ 215

vigata-maḷam upâttarâti-râ(sâ)rtthârttha-vîraṃ ।
sthagitam amita-nânâ-śabda-vîchi-prasa(pa)ñchaṃ ‖
nigadita-guṇa-ratnaikâkarâ(raṃ) sâgaraṃ-bol ।
sogayisi dharaṇî .... charâkrântam akkuṃ ‖ 216

Gitike ‖ intu mikka varṇṇanegaḷ ।
santatam ond âgi pêḷda kâvyaṃ dhareyoḷ ‖
santati keḍade nilkum â-ka- ।
lpântam-baram Amôghavarshsha-yaśaṃ-bol ‖ 217

vṛi ‖ sakaḷa-laukika-sâmayikôru-vai- ।
dika-viśêsha-vivêka-parâyaṇaṃ ‖
prakaṭitôkti-vivikti-kaḷâ-kaḷâ- ।
pakam upahita-sâhita-vidyeyoḷ ‖ 218

atiśaya-pravi(ti)bhâ-vibhavaṃ mahâ- ।
chatura-vṛitti-nitântam anâkuḷaṃ ‖
prati-vitarkkita-lakshaṇa-lakshyam â- ।
śrita-mahâ-Nṛipatuṅga-sabhâsadaṃ ‖ 219

bhâvisal bagedavaṃ mige jâṇan aśêsha-bhâ- ।
shâ-viśêsha-vishayâtiśayâmaḷa-kauśaḷaṃ ‖
dêvatâ-guru-guṇôdaya-vṛiddha-janôpasaṃ- ।
sêvanâ-paran apâkṛita-vaikṛita-châpaḷaṃ ‖ 220

parama-kâra(ru)ṇikan appan apâkṛita-dôshan â- ।
daraman âgisuvan appan aśêsha-janaṅgaḷoḷ ‖
para-guṇâsta(sa)hanan alladan âtma-guṇôdayan- ।
ta-rasa-rûpan a .... pâra-parâyaṇaṃ ‖ 221

vṛi || bagedu mêṇ parama-dharmmaman artthiyin anvaya- |
pragaṇitâbhyudaya-môksha-sukhâśraya-hêtuvaṃ ||
negaḷe mêṇ udita-nirmmaḷa-kîrtti-vitânamaṃ |
jagad agâdha-vivarôdara-dîpa-vikalpamaṃ || 222

Gîtike || kûḍe pêḷda nuta-kâvyaman int abhimâni tân ira- |
g îḍita-mahâ-purusha-vrata-niśchitaṃ ||
kûḍad ante peṛaṟo[ḷ]mechchinoḷe teṟan appoḍaṃ |
nôḍadaṃ kuṟit âvanam ênumaṃ || 223

vṛi || antu biḷda teṟadiṃ vara-gîta-guṇôdayai |
kânta . . . . vishayâśayar âgi nirâkuḷaṃ ||
santataṃ nuḍigaḷoḷ bage perchch ire pêḷdavar |
santasaṃ-badisuvar Nṛipatuṅga-sabhâ[sadar] || 224

Gîtike || pâртthiva-lôkan appan enduṃ kavi varṇṇikuṃ |
svârtthâ-chayaṃ nuta-Sarasvatî- ||
tîrtthâvatâra-mârggan esakaṃ |
. . . . || 225

vṛi || kula-jâti-dêśa-viśadaṃ vinayôpachâraṃ |
nilayaika-vṛitti . . . . ||
vilasad-guṇâguṇa-vivartti-gurûpadêśâ- |
malinâvabôdha-viditâkhiḷa-chôdyav i[n]d êṃ || 226

mada-mâna-mâya-bhaya-lôbha-vishâda-harshâ- |
bhyuditântaraṅga-ripu-vargga-jayâvatâraṃ ||
vidita . . . . vibhava-bhâvita-viśva-lôkaṃ |
budharg ôtu kâvan anunîta-gṛihîta-vâkyaṃ || 227

paramânubhâvan abhimâni-vinôda-śîlaṃ |
paran aty-udâra-charitôdayan êka-rû[pa]ṃ ||
sarasâśraya-pragara-mûrtti-parô . . . . ṃ |
nirutaṃ guṇôdayan a-kâraṇa-dhuryya-mitraṃ | 228

a-sahâya-sâhasa-vinôdi-vivikta-chitra- |
prasaha-prakâśita-mahôdaya-tattva-sattva- ||
vyasana-vyapêtam apanîta-kalâ-kalâpaṃ |
saśi(si)-khaṇḍa-nirmmala-yaśô-vividhâvataṃsaṃ || 229

ನೃಪತುಂಗದೇವ ವಿರಚಿತ

ಕವಿರಾಜಮಾರ್ಗ

ಕಂ || ಶ್ರೀ ತಳ್ತುರದೊಳ್ಕೌಸ್ತುಭ |
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ ||
ಪ್ರೀತಿಯಿನಾ[1]ವಸನಗಲ |
ಲ್ನೀತಿನಿರಂತರನುದಾರನಾ ನೃಪತುಂಗಂ || 1

ಕೃತಕೃತ್ಯಮಲ್ಲನಪ್ರತಿ |
ಹತವಿಕ್ರಮನೊಸೆದು ವೀರನಾರಾಯಣನ ||
ಪ್ಪತಿಶಯಧವಳಂ ನಮಗೀ |
ಗತರ್ಕ್ಕತೋಪಸ್ಥಿತಪ್ರತಾಪೋದಯಮಂ || 2

ಶ್ರೀವಿಶದವರ್ಣ್ಣ ಮಧುರಾ |
ರಾವೋಚಿತೆ ಚತುರರುಚಿರಪದರಚನೆ ಚಿರಂ ||
ದೇವಿ ಸರಸ್ವತಿ ಹಂಸವಿ |
ಭಾವದೆ ನೆಲೆಗೊಳ್ಗೆ ಕೂರ್ತ್ತು ಮನ್ಮಾನಸದೊಳ್ || 3

ಪರಮಾಲಂಕಾರೋಚಿತ |
ವಿರಚನೆಗಳ್ನೆಗಳ್ಗೆ ಮಾರ ವದನೋದರದೊ ||
ಳ್ನಿರಮುಕ್ಕಾ ಪರಮಕವೀ |
ಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ || 4

ಶ್ರುತದೊಳ್ಭಾವಿಸಿ ನೋಡಿವೊಡೆ |
ಸತತಂ ಕವಿವೃಷಭರಾ ಪ್ರಯೋಗಂಗಳೊಳಂ ||
ಕೃ[2]ತಪರಿಚಯಬಲನಪ್ಪನ |
ತಿಶಯಧವಳನ ಸಭಾಸದರ್ಮ್ಮೆನಿಸುವರ್ || 5

---

1 A & C ನಾವಗ. | 2 C ಕೃತಿ.

ಕಂ ॥ ವ್ಯಾಕರಣಕಾವ್ಯನಾಟಕ ।
ಲೋಕಕಳಾಸಮಯಮಾದಳಂಕೃತಿಗಳೊಳಂ ॥
ವ್ಯಾಕುಳನಲ್ಲದನೇಕವಿ ।
ವೇಕಬೃಹಸ್ಪತಿಯ ನಗರಮಂ ಪುಗಱಿ[1]ಪ್ಪಂ ॥ 6

ಮೃ[2]ಗಪಶುಶಕುನಿಗಣಂಗಳೊ ।
ಳಗಣಿತನಿಜಜಾತಿಜನಿತಭಾಷೆಗಳಿಂದಂ ॥
ನೆಗೞ್ದಂತಿರೆ ನರರೊಳಮ ।
ಪ್ರಗಲ್ಭವಚನಪ್ರವೃತ್ತಿ ನೆಗೞ್ಗುಂ ಸಹಜಂ ॥ 7

ಗುಣಮಿದು ದೋಷಮಿದೆಂಬೀ ।
ಗಣಿದಮನೆತ್ತಱಿಗುಮಶ್ರುತಪ್ರಕೃತಿಜನಂ ॥
ತೃಣಸಸ್ಯಘಾಸವಿಷಯ ।
ಪ್ರಣಯಂ ಸಮವೃತ್ತಿಯಪ್ಪವೊಲ್ಮೃಗಗಣದೊಳ್ ॥ 8

ಅದಱಿಂ ಪರಮಾಗಮಕೋ ।
ವಿದನಪ್ಪುದು ಪೂರ್ವ್ವಕಾವ್ಯರಚನೆಗಳಂ ತಾಂ ॥
ಮೊದಲೊಳ್ಕಲ್ತಂಗಲ್ಲದೆ ।
ಪದದೊಳ್ಜಾಣುಂ ಬೆಡಂಗುಮಕ್ಕುಮೆ ಕೃತಿಯೊಳ್ ॥ 9

ಜಡಜನಮುಮೆಲ್ಲಮೋದಂ ।
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ ॥
ನುಡಿ[3]ವಲ್ಮೆಯುಲ್ತದೇಂಕ ।
ಲ್ತೊಡನೋದುವುದಲ್ತೆ[4] ಗಿೞಿಗಳುಂ ಪುರುೞಿಗಳುಂ ॥ 10

ಪ್ರತಿ[5]ಭಾವತ್ತ್ವಮುಮಕೃತಕ ।
ಚತುರತೆಯುಂ ಪರಮಬುಧಜನೋಪಾಸನಮುಂ ॥
ಕೃ[6]ತಿಪರಿಚಯಮುಂ ತರ್ಕ್ಕಂ ।
ಪ್ರತೀತಿಯಿ(ಯು)ಂ ವಾಗ್ವಿದಗ್ಧತಾನಿಪುಣತೆಯೊಳ್ ॥ 11

---

1 B ಪುಗುತಪ್ಪಂ.
2 A & B ಮೃಗಗಣ.
3 A ನುಡಿಯುಲ್ಮೆ. ಯುತು
4 A ವಲ್ತೆ; B ಬಲ್ಮೆ.
5 A ಮತಿಭಾವ.
6 A & B ಶ್ರುತ

ಕಂ ॥ ಪಸರಿಸಿದಾ ಬಗೆಮನ[1]ಮಂ ।
ಪೊಸತಾಗಿ ನೆಗೞ್ಚಲಱಿಯನಾ ರಚನೆಯೊಳೇಂ ॥
ಬಸನಂತ[2]ನಗಿನಿತಱ ಬೇ ।
ವಸಮೇಂಕವರ್ದವರುಮೊಳರೆ ಕವಿಯಲ್ಲದರಂ ॥ 12

ಬಗೆಬಗೆದು ಕೇಳ್ದ ಬುಧರೊಲ ।
ವೊಗೆದಿರೆ ಹೃದಯದೊಳೆ ತಾಳ್ದ ಮಣಿಹಾರಂಬೋಲ್ ॥
ಸೊಗಯಿಸುವ ವಚನವಿರಚನೆ ।
ನೆಗೞ್ಗುಂ ಭಾವಿಸುವೊಡದಱ ಪೆಂಪತಿಸುಲಭಂ ॥ 13

ನೆನೆನೆನೆದು ಪೆಱರ ಮಾತುಗ ।
ಳನೆ ನೆಗೞ್ದಿರೆ ಕೃತಿಯೊಳಿಡು[3]ವನ(ವ)ಂ ನಗದ ಗು[4]ಹಾ ॥
ಧ್ವನಿಯು ವೊಲನರ್ತ್ಥವಚನಂ ।
ತನಗಾಗಿಸಲಱಿಯನುಚಿತವಾಕ್ಚತುರತೆಯಂ ॥ 14

ಕುಱಿ[5]ವಂತು ಪೆಱರ ಬಗೆಯಂ ।
ತೆಱೆ[6]ದಿರೆ ಪೆಱರ್ಗ್ಗಱಿಪಲಾರ್ಪ್ಪವಂ ಮಾತಱಿವಂ ॥
ಕಿಱಿದಱೊಳೆ ಪಿರಿದುಮರ್ತ್ಥಮ ।
ನಱಿಪಲ್ಕೆಱೆವಾತನಾತನಿಂದಂ ನಿಪುಣಂ ॥ 15

ನುಡಿಯಂ ಛಂದದೊಳೊಂದಿರೆ ।
ತೊಡರ್ಚ್ಚಲಱಿವಾತನಾತನಿಂದಂ ಜಾಣಂ ॥
ತಡೆಯದೆ ಮಹಾಧ್ಯಕೃತಿಗಳ ।
ನೊಡರಿಸಲಾರ್ಪ್ಪಾತನೆಲ್ಲರಿಂದಂ ಬಲ್ಲಂ ॥ 16

ಮಾತಱಿವರ್ಕ್ಕೆಲಬರ್ಜ್ಜಗ ।
ತೀತಳಗತಮನುಜರೊಳಗೆ ಮಾತಱಿವವರೊಳ್ ॥
ನೀತಿವಿದರಮಳಕವಿತಾ ।
ನೀತಿಯುತರ್ಕ್ಕೆಲರೆ ಪರಮಕವಿವೃಷಭರ್ಕ್ಕಳ್ ॥ 17

ಪಾಪಮಿದು ಪುಣ್ಯಮಿದು ಹಿತ ।
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ ॥
ಖೋಪಾತ್ತಮಿದೆಂದಱಿಪುಗು ।
ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ ॥ 18

---

1 C ಮನದೊಳ್.
2 B ಬಸನಲತನ.
3 C ಡುವರಂ.
4 A & B ಗೃಹಾ.
5 C ಕುರಿತಂತು.
6 B ಬರದಿರೆ.

ಕಂ ॥ ಲೌಕಿಕಸಾಮಯಿಕೋರುವಿ ।
ವೇಕಮುಮಭ್ಯುದಯಪರಮನಿಃಶ್ರೇಯಸಮುಂ ॥
ಪ್ರಾಕಟಮಕ್ಕುಂ ವಿದಿತಾ ।
ನೇಕಕವೀಶಪ್ರಯೋಗಪದಪದ್ಧತಿಯೊಳ್ ॥ 19

ಅಧಿಕೃತಸತ್ಪುರುಷಾರ್ತ್ಥ ।
ಪ್ರಧಾನಧರ್ಮ್ಮಾರ್ತ್ಥಕಾಮಮೋಕ್ಷಂಗಳವಾ ॥
ಬುಧಜನವಿವಿಕ್ತ ಕಾವ್ಯ ।
ಪ್ರಧಾರಿತಾರ್ತ್ಥಂಗಳಖಿಳಭುವನಹಿತಂಗಳ್ ॥ 20

ಲೋಕದೊಳದಱಿಂ ಕಾವ್ಯ ।
ಶ್ರೀ[1]ಕರಣೋದ್ಯುಕ್ತನಕ್ಕೆ ಕವಿ ತಂನಱಿವಂ ॥
ತಾಕಲ್ಪಾಂತಸ್ಥಾಯಿ ।
ಶ್ರೀಕೀರ್ತ್ತಿವಧೂಪ್ರಧಾನವಲ್ಲಭನಕ್ಕುಂ ॥ 21

ಕವಿಭಾವಕೃತಾನೇಕ ।
ಪ್ರವಿಭಾಗವಿವಿಕ್ತಸೂಕ್ತಮಾರ್ಗ್ಗಂ ಕಾವ್ಯಂ ॥
ಸವಿಶೇಷಶಬ್ದರಚನಂ ।
ವಿವಿಧಾರ್ತ್ಥವ್ಯಕ್ತಿವರ್ತ್ತಿತಾಲಂಕಾರಂ ॥ 22

ನರಲೋಕಚಂದ್ರಮತದಿಂ ।
ಪರಮಾಲಂಕಾರಮುಂ ಶರೀರಮುಮೆಂದಿಂ ॥
ತೆಱದಕ್ಕುಂ ಭೇದಂ ಬಹು ।
ಪರಿಕರಮಾ ಕಾವ್ಯವಸ್ತುಪುರುಷಂಗೆಂದುಂ ॥ 23

ಅವಱೊಳ್ ಶರೀರಮೆಂಬುದು ।
ಕವಿಪ್ರಧಾನಪ್ರಯೋಗಪದಪದ್ಧತಿಯೊಳ್ ॥
ದ್ವಿ[2]ವಿಧಮೆನಿಕ್ಕುಮದತಿಶಯ ।
ಧವಳೋಕ್ತಕ್ರಮದೆ ಗದ್ಯಪದ್ಯಾಖ್ಯಾತಂ ॥ 24

ಪದಪಾದವಿಯುತನಿಯಮಾ ।
ಸ್ಪದಮಲ್ಲದಳಂಕೃತಂ ಕ್ರಿಯಾಕಾರಕದೊಳ್ ॥
ಪುದಿದರ್ತ್ಥವ್ಯಕ್ತಿಯನೀ ।
ವುದು ಗದ್ಯಮನೇಕರೂಪಭೇದವಿವಿಕ್ತಂ ॥ 25

1 C ಸ್ತ್ರೀಕರಣೋದ್ಯುಕ್ತರಕ್ಕೆ. | 2 A & B ವಿವಿಧ.

ಕಂ ॥ ಸದಮಲಸಮಸಂಸ್ಕೃತಮಾ ।
ಕ್ಯದ ಹೃದಯಂ ಹ[1]ರ್ಷ್ಷಚರಿತಕಾದಂಬರಿಗಳ್ ॥
ಮೊದಲಾಗಿ ನೆಗೞ್ದವಿದಱೊಳ್ ।
ಸದಳಂಕಾರಂಗಳಖಿಳಕವಿವಿದಿತಂಗಳ್ ॥ 26

ಮಿಗೆ ಕನ್ನಡಗಬ್ಬಂಗಳೊ ।
ಳಗಣಿತಗುಣಗದ್ಯಪದ್ಯಸಂಮಿಶ್ರಿತಮಂ ॥
ನಿಗದಿಸುವರ್ಗ್ಗದ್ಯಕಥಾ ।
ಪ್ರಗೀತಿಯಿಂ ತಚ್ಚಿರಂತನಾಚಾರ್ಯ್ಯರ್ಕ್ಕಳ್ ॥ 27

ಸಕಲಕಲಾಭಾಷಾಲೌ ।
ಕಿಕಸಾಮಯಿಕಾದಿವರ್ಣ್ಣನಾನಿರ್ಣ್ಣಿಕ್ತ ॥
ಪ್ರಕಟತರವಸ್ತುವಿಸ್ತರ ।
ವಿಕಲ್ಪವಿದನಲ್ಲದಾಗದಾಗದು ಪೇೞಲ್ ॥ 28

ವಿಮಳೋದಯನಾಗಾರ್ಜ್ಜುನ ।
ಸಮೇತಜಯಬಂಧುದುರ್ವ್ವಿನೀತಾದಿಗಳೀ ॥
ಕ್ರಮದೊಳ್[2]ನೆಗೞ್ಚಿ ಗದ್ಯಾ ।
ಶ್ರಮಪದಗುರುತಾಪ್ರತೀತಿಯಂ ಕೈಕೊಂಡರ್ ॥ 29

ಪದ್ಯಂ ಸಮಸ್ತಜನತಾ ।
ಹೃದ್ಯಂ ಪದವಿದಿತಪಾದನಿಯಮನಿವೇದ್ಯಂ ॥
ವಿದ್ಯಾ[3]ಪಾರಪರಾಯಣ ।
ಮಾದ್ಯಂ ಸದ್ವೃತ್ತಿವೃತ್ತಜಾತ್ಯಾಯ[4]ತ್ತಂ ॥ 30

ಪ್ರಣುತಗುಣಸೂರಿನಾರಾ ।
ಯಣಭಾರವಿಕಾಳಿದಾಸಮಾಘಾದಿಗಳೀ ॥
ಗಣಿದದೊಳೆ ಮಹಾಕಾವ್ಯ ।
ಪ್ರಣಯಮನಾಗಿಸಿದರಮಳಕವಿವೃಷಭರ್ಕ್ಕಳ್ ॥ 31

ನು[5]ಡಿಗೆಲ್ಲಂ ಸ[6]ಲ್ಲದ ಕ ।
ನ್ನಡದೊಳ್ಚತ್ತಾಣಮುಂ ಬೆದಂಡೆಯುಮೆಂದೀ ॥

1 A & B ಹರುಷ,
2 A & B ನೆಗೞ್ತೆ,
3 A & B ಪಾದ,
4 B ಯುಕ್ತಂ,
5 This verse is not in A but is quoted in the S'abdamanidarpana, p. 121, Mr. Kittel's edition
6 C ಸಲ್ಲ

ಗಡಿನ ನೆಗೞ್ತೆಯ ಕಬ್ಬದೊ ।
ಳೊಡಂಬ[1]ಡಂ ಮಾಡಿದಪ್ಪುರಾತನಕವಿಗಳ್ ॥ 32

ಕಂ ॥ ಪರಮಶ್ರೀವಿಜಯಕವೀ ।
ಶ್ವರಪಂಡಿತಚಂದ್ರಲೋಕಪಾಲಾದಿಗಳಾ ॥
ನಿರತಿಶಯವಸ್ತುವಿಸ್ತರ ।
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ॥ 33

ಕಂದಮುಮಮಳಿನವೃತ್ತಮು ।
ಮೊಂದೊಂದೆಡೆಗೊಂದು ಜಾತಿಜಾ[2]ಣೆಸೆಯೆ ಬೆಡಂ ।
ಗೊಂದಿವಱೊಳಮರೆ ಪೇೞ ।
ಲ್ಸುಂದರರೂಪಿಂ ಬೆದಂಡೆಗಬ್ಬಮದಕ್ಕುಂ ॥ 34

ಕಂದಂಗಳ್ಪಲವಾಗಿರೆ ।
ಸುಂದರವೃತ್ತಂಗಳಕ್ಕರಂ ಚವುಪದಿ ಮ ॥
ತ್ತಂ[3]ದಲ್ಲಿ(ಳ್ಗೀ)ತಿಕೆತಿವದಿಗ ।
ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ ॥ 35

ಕಾವೇರಿಯಿಂದಮಾ ಗೋ ।
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು ।
ಧಾವಳಯವಿಲೀನವಿಶದವಿಷಯವಿಶೇಷಂ ॥ 36

ಅದಱೊಳಗಂ ಕಿಸುವೊೞಲಾ ।
ವಿದಿತಮಹಾಕೊಪಣನಗರದಾ ಪುರಿ[4]ಗೆಱೆಯಾ ॥
ಸದಭಿಸ್ತುತಮಪ್ಪೊಂಕುಂ ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ 37

ಪದನಱಿದು ನುಡಿಯಲುಂ ನುಡಿ ।
ದುದನಱಿದಾರಯಲುಮಾರ್ಪ್ಪರಾ ನಾಡವರ್ಗಳ್ ॥
ಚದುರರ್ನ್ನಿಜದಿಂ ಕುಱಿತೋ ।
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥ 38

1 C ಬಡಲ್ಕಾ
2 C ಜಾಣ್ಣೆಸೆಗೆ.
3 C ದ್ವಿರ್ಕೆ; B ದಲಿಲೆಕೆ; A ದಲ್ಲಿತಿಕೆ.
4 B ಪುಲಿಗರಿ; C ಪುಲಿಗೆಳೆ,

ಕಂ ॥ ಕುಱಿತವರಲ್ಲದೆ ಮತ್ತಂ ।
ಪೆಱರುಂ ತಂತಂಮ ನುಡಿಯೊಳೆಲ್ಲಂ ಜಾಣರ್ ॥
ಕಿಱುವಕ್ಕಳ್ಮಾಮೂಗರು ।
ಮಱಿಪಲ್ಕಱಿವರ್ವ್ವಿವೇಕಮಂ ಮಾತುಗಳಂ ॥ 39

ಜಾಣರ್ಕ್ಕಳಲ್ಲದವರುಂ ।
ಪೂಣಿಗರಱಿಯದೆಯುಮಱಿವವೋಲವಗುಣದಾ ॥
ತಾಣಮನಿನಿಸಡೆ ಪೆತ್ತೊಡೆ ।
ಮಾಣದೆ ಪಿ[1]ಡಿದದನೆ ಕೃತಿಗಳಂ ಕೆಡೆ ನುಡಿವರ್ ॥ 40

ಸಕ್ಕದಮುಂ ಪಾಗದಮುಮ ।
ದಕ್ಕುಂ ಬಗೆದಂತೆ ಸಮಱಿ ಪೇೞಲ್ಮನಂ ॥
ನಿಕ್ಕುವನೊಳವಪ್ಪುದಱಿಂ ।
ತಕ್ಕಂತವಱವಱ ಲಕ್ಷ್ಯಮುಂ ಲಕ್ಷಣಮುಂ ॥ 41

ಅಱಿದಾದಂ ಕನ್ನಡದೊ ।
ಳ್ತಿರಿಕೊಱೆಗೊಂಡಱಿಯೆ ಪೇೞ್ವೆನೆಂಬುದಿದಾರ್ಗ್ಗಂ ॥
ಪರಮಾಚಾರ್ಯ್ಯರ ಪೊಲ್ಸ ।
ಯ್ತಿರಲಱಿಯರ್ಕ್ಕನ್ನಡಕ್ಕೆ ನಾಡವರೋಜರ್ ॥ 42

ಅವಗುಣಮಿನಿತಾದೊಡಮಾ ।
ಕವಿತಾಬಂಧಮನಶೇಷಮಂ ದೂಷಿಸುಗುಂ ॥
ಸವಿಳಾಸಲೋಲಲೋಚನ ।
ವಿವರಮನೆ[2]ಡೆ ಪೆತ್ತ ಕಸದ ಪೋಲನವರತಂ ॥ 43

ಅದಱಿಂದಲಸದೆ ಪೀನಂ ।
ಪದೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತ ॥
ಪ್ಪದೆ ಬಗೆದು ಪೇೞ್ವುದಾಗಮ ।
ಮುದಾರನೃಪತುಂಗದೇವವಿದಿತಕ್ರಮದಿಂ ॥ 44

ಗೀತಿಕೆ ॥ ಕಾ[3]ಣೆಗೆಯ್ದುಂ ತಂನ ದೋಷಮಂ ।
ಕಾಣದಂತೆಂದುಂ ಕಣ್ಗಳ್ತಂಮ ಕಾಡಿಗೆಯುಂ ॥

1 C ಜಡಿದದನೆ.
2 B ನೆರ್ಗೆ.
3 C ಕಾಣೆನೆಗೆಯ್ದುಂ.

ಪೂಣಿಗನಾದುದಱಿಂ ಫಣಿರಿಂ ।
ಜಾಣರಿಂ ನೋ[1]ಡಿಸಿ ಪೇೞ್ವುದು ಕಬ್ಬಮಂ ॥ 45

ಕಂ॥ ದೋಸಮಿನಿತೆಂದು ಬಗೆದು ।
ದ್ಭ್ಯಾಸಿಸಿ ತಱಿಸಂದು ಕನ್ನಡಂಗಳೊಳೆಂದುಂ ॥
ವಾಸುಗಿಯುಮಱಿಯಲಾಱದೆ ।
ಬೇ[2]ಸಱುಗುಂ ದೇಶಿ ಪೇೞೆಬೇೞ್ಪುದಱಿಂ ॥ 46

ಅಂತುಂ ಪುರಾಣಕವಿಗಳ ।
ಸಂತತಿಗತಮಾರ್ಗಗದಿತದೋಷಂಗಳುಮಂ ॥
ಚಿಂತಿಸಿ ಮತ್ತಂನಱಿವುದು ।
ಮಂ[3]ತರಿಸದೆ ಬುಧಜನಕ್ಕೆ ಕೆಲವಂ ಪೇೞ್ವೆಂ ॥ 47

ಕಂ॥ ನೆಲಸಿದ ಕಾವ್ಯಂ ಕಾವ್ಯ ।
ಕ್ಕೆ ಲಕ್ಷಣಂ ಸತತಮೆಂದೆ ಪೞಗನ್ನಡಮಂ ॥
ಪೊಲಗೆಡಿಸಿ ನುಡಿವರಾಗಮ ।
ಬಲಹೀನದ್ದೇಸಿಯಲ್ಲದೆಂದಱಿದಿರ್ದುಂ ॥ 48

ಪೊಡವಿಪತ್ರಿಗೊರೆವೆನೆನೆ ಬೇ[4] ।
ೞ್ಪಡೆಯದುವದೆಕರಿಸಿ ಕಬ್ಬಿಗದ್ರೂರ್ಗಱೆನೆಯುಂ ॥
ಹಸುವ[5]ಸುಮಱೆಸೆಟ್ಟಸುಗೆಂ ।
ಮುಡಿಯೊಳಮಾರ್ಗಂದು ನುಡಿವ ಪೞಗನ್ನಡಮಂ ॥ 49

ದೊರೆಕೊಂಡಿರೆ ಸೊಗಯಿಸುಗುಂ ।
ಪುರಾಣಕಾ[6]ವ್ಯಪ್ರಯೋಗದೊಳ್ತತ್ಕಾಲಂ ॥
ವಿರಸಂ ಕರಮವು ದೇಸಿಗೆ ।
ಜರದ್ವಧೂವಿಷಯಸುರತರಸರಸಿಕತೆವೊ[7]ಲ್ ॥ 50

ಸಮಸಂಸ್ಕೃತಂಗಳೊಳ್ಸ ।
ಯುತ್ತಮಿರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ ॥
ಗಮಕೋವಿದನಿಗದಿತಮಾ ।
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ॥ 51

1 C ಜಾಣರಿ ಮೋದಿಸಿ.
2 A & B ಬೇಸ್ಸರುವಂ.
3 A & C ಅಂತಱಿಸಲೆ.
4 C ಪೇಳ್ವಡೆ.
5 C ಹಡವಸಮರಸಿಟ್ಟ.
6 A ವಾಕ್ಯ.
7 A & B ದೊಳ್.

ಕಂ॥ ಬೆರಸಿರೆ ಕನ್ನಡದೊಳ್ಬಂ ।
ಧುರಮಾಗದು ಕಾವ್ಯರಚನೆ ಪೇೞ್ವೊಡೆ ಪೀನಂ ॥
ಪರುಷತರಮಕ್ಕು ಮೋದುಂ ।
ಕರಡೆಯ ಮದ್ದಳೆಯ ಜರ್ಝರಧ್ವನಿಗಳ ಪೊಲ್ ॥ 52

ಬಹಿರಂತರುಪವನಂಗಳೊ ।
ಳಹರಹಮಾ ಪರಭೃತಂಗಳುಲಿವ ರವಂಗಳ್ ॥
ಸಹಸಾ ತಳಮಳಗುಳಿಸಿದ ।
ವಹೋ ಮನಂಗಳನಿತಸ್ತ್ರಂ ವಿರಹಿಗಳಾ ॥ 53

ವಿದಿತಸಮಸಂಸ್ಕೃತೋದಿತ ।
ಪದಂಗಳೊಳ್ಪುದಿದು ಬೆರಸಿ ಬರೆ ಕನ್ನಡದೊಳ್ ॥
ಮುದಮನವು ತರ್ಕ್ಕಮತಿಶಯ ।
ಮೃದಂಗಸಂಗೀತಕಾದಿಮಧುರರವಂಬೊಲ್ ॥ 54

ಬಹಿರುದ್ಯಾನಾಂತರದೊಳ್ ।
ಸಹಸೋದಿತಮತ್ತಕೋಕಿಲೋಚ್ಚೈರ್ಧ್ವಾನಂ ॥
ಮುಹುರತಿಕರ್ಣ್ಣಸೆ ಪಡೆದ ।
ತ್ತಹರ್ನ್ನಿಶಂ ಪೆರ್ಚ್ಚನಂತರಂಗಕ್ಕೆಂನಾ ॥ 55

ನೆಗೞ್ದಿರ್ದ್ದ ಕನ್ನಡಂಗಳೊ ।
ಳಗಣಿತಗುಣವಿದಿತಸಂಸ್ಕೃತೋಕ್ತಕ್ರಮಮಂ ॥
ಬಗೆದೊಂದು ಮಾಡಿ ಪೇೞ್ವೊಡೆ ।
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ॥ 56

ತಱಿಸಂದಾ ಸಕ್ಕದಮುಮ ।
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ ॥
ಕುಱಿತು ಬೆರಸಿದೊಡೆ ವಿರಸಂ ।
ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೊಲ್ ॥ 57

ಅ[1]ರಸುಕುಮಾರನನಾಯತ ।
ತರಕಡೆಗಂಣಿಂದೆ ನೋಡಿ ಕೆಳದಿಸಮೇತಂ ॥
ಪರಿಗತನಗೆಯಿಂದಿರ್ದ್ದಂ ।
ಗುರುನಾ[2]ಭ್ಯರದಿಂದಮೆಱಗಿ ಮುಖತಾಮರೆಯಂ ॥ 58

1 Quoted in the S. M. Darpaṇa, p, 98. | 2 B ನಾಣಾಭರದಿನೆ.

ಕಂ॥ ನರಪತಿತನಯನನಾಯತ ।
ತರಳಾಪಾಂಗದೊಳ್ ನೋಡಿ ಕೆಳದಿಯರೊಡನಾಂ ॥
ಪರಿಗತಹಾಸ್ಯದೊಳಿರ್ದೆಂ ।
ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ ॥ 59

ಎಂದಿಂತು ಸಮಾಸೋಕ್ತಿಯೊ ।
ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ ॥
ಸುಂದರಮಕ್ಕುಂ ಕವಿಪದ ।
ಮೊಂದಿದ ಪೊಲ್ಕನಕರಚನೆಯೊಳ್ಮಣಿನಿಕರಂ ॥ 60

ಶ್ರುತದುಷ್ಟಮರ್ತ್ಥದುಷ್ಟಂ ।
ಶ್ರುತಿಕಷ್ಟಂ ಕಲ್ಪನೋಕ್ತಿಕಷ್ಟಮುಮೆಂದೀ ॥
ಕೃತಕೃತ್ಯವಲ್ಲಿವಲ್ಲಭ ।
ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ॥ 61

ನಿಲ್ತೋಳಂ ಬರ್ಪ್ಪುದು ಸ ।
ಯ್ತುಲ್ತೂರುಂದೂಡಂರಮೆಡೆತುನ[1]ಮಪೂರ್ರಂ ॥
ಕಲ್ತುಲ್ಲಿಂದೋಡುವವೆಂ ।
ಬಲ್ತುಂಣಿಂತಂದ ಕೂಱನೂ ಸಂಗಮದೊಳ್ ॥ 62

ನೆರೆದೂರ್ಧ್ವರೇತನೊಳ್ಪ[2]ರು ।
ಹಿರಂಣ್ಯರೇತೋತಿತೀವ್ರನೊಳ್ಮುನಿವರನೊ ॥
ಳ್ಪರಮುಭಗಸಹಿತೆ ಮುದದಿರೆ ।
ಪರಿಶ್ರಮಕ್ಕೊಂನ ನಿರ್ವ್ವಿಶೇಷನೊಳಾಗಳ್ ॥ 63

ಪರದಗ್ಗಪಾ[3]ರ್ಬ್ಬಗ್ಗ ।
ದ[4]ರಸಗ್ಗಕುಡಿಯರಪ್ಪ ನಾಲ್ವಗ್ಗಗಳ್ ॥
ಸ್ಥಿ[5]ರಗೋಪಾಧ್ಯಾಯಕ್ಷ್ಮಾ ।
ಪರಿಪಾಲ್ಯಕ್ಷೇತ್ರಕರ್ಷಣಂಗಳ್ಕ್ರಿಯೆಗಳ್ ॥ 64

1 C ನೆಗಪ್ಪೂರ್ರಂ.
2 C ಪುರ.
3 C ಪಾರ್ವ್ವ.
4 C ಯ್ತುರಸ.
5 C ಸ್ಥಿರನೊ.

ಕಂ॥ ಮಸಗಿ ಬೆಸದಿದ್ದವಿವರಮ ।
ನಸಿಱುದಱೆಡೆವೊ[1]ತ್ತಿ ಪೊಕ್ಕು ಕಲಿನಂಕೊರ್ಬ್ಬಿ ॥
ತ್ತೆಸೆದುವಿ[2]ದಿದಾರ್ದ್ದಮೆ[3]ಳ್ದಿ ।
ಳ್ದಿಸಮಂಜಸನಿಕ್ಕಿ ಮಿಕ್ಕ ನರಿವಾಹಿನಿಯಿ ॥ 65

ಕಾಱಿತಂತೆ ಪೇೞ್ದ ನಾಲ್ಕುಂ ।
ಕಾಱುವುಗಳಿಂದಱಿದು ಪರರ ದೋಷಂಗಳುಮಂ ॥
ಪೇೞುವುಮನೀ ಮಾೞ್ಕೆಯೊಳಂ ।
ತೊಱೆವುದು ತೊಱೆವಂತಸಾಧುಜನಸಂಗತಿಯಂ ॥ 66

ಮಿಗೆ ದುಷ್ಕರಕಾವ್ಯಂಗಳೊ ।
ಳಗರ್ಹಿತಪ್ರಾಯಮಕ್ಕುಮಾ ಶ್ರುತಿಕಷ್ಟಂ ॥
ಪಗರಣದೊಳುೞಿದ ಮಾಱುಂ ।
ನಗಿಸುಗುಮಪ್ಪುದಱಿನಲ್ಲಿಗಂತವು ದೋಷಂ ॥ 67

ಯತಿಭಂಗಮರ್ತ್ಥಶೂನ್ಯಂ ।
ಸತತವಿರುದ್ಧಾರ್ತ್ಥಮುಕ್ತಪುನರುಕ್ತಾರ್ತ್ಥಂ ॥
ಚ್ಯುತಯಾಥಾಸಂಖ್ಯಂ ವ್ಯವ ।
ಹಿತಮಚ್ಛಂದಂ ವಿಸಂಧಿಕಂ ನೇಯಾರ್ತ್ಥಂ ॥ 68

ಆಗಮಸಮಯನ್ಯಾಯವಿ ।
ಭಾಗಕಳಾಕಾಲಲೋಕದೇಶವಿರುದ್ಧಂ ॥
ಭೋಗಿವಿಷಂಬೊಲ್ಪ್ರಾಣ ।
ತ್ಯಾಗಮನಾಗಿಸುಗುಮುಮಳಕೃತಿವಧುಗಿನಿತುಂ ॥ 69

ಯತಿಯೆಂಬುದುಸಿರ್ವತಾಣಂ ।
ಕೃತಾಸ್ಪದಂ ವೃತ್ತಜಾತಿಪದಪದ್ಧತಿಯೊ ॥
ಳ್ಸತತಂ ಛಂದೋವಿದಿತ ।
ಪ್ರತೀತಶಾ[4]ಸ್ತ್ರೋಕ್ತಮಾರ್ಗ್ಗದಿಂದಱಿವುದ[5]ದಂ ॥ 70

ಕೇಡಡಸಿ ತಂ[6]ದು ಬಗೆಯಂ ।
ಕೂ[7]ಡದು ಕೂಡಿದುದುಮುೞಿದು ವಿಪರೀತಮುಮಂ ॥
ಮಾಡುಗುಮದಱಿಂ ಕರ್ಮ್ಮ ।
ಕ್ಕೋಡಿ ಬರ್ದುಂಕಲ್ಕಮ[8]ಱಿವರಾರ್ಬ್ಭೂತಳದೊಳ್ ॥ 71

1 C ಯೊತ್ತಿ.
2 B & C ಬಿದಿದ್ದಾರ್ದ್ದ.
3 C ಮೆಳ್ಗೆಳ್ಗೆ.
4 A & B ಶಾಸ್ತ್ರಾರ್ತ್ಥ.
5 C ದಿದಂ.
6 C ದಂದು.
7 C ಮಾಡದು.
8 C ಮರಿದ.

ಕಂ॥ ತ[1]ಡವಡಿಸಿ ಯತಿಯನಿಂತಿರೆ ।
ತೊಡರ್ಚ್ಚಿ ಕೆಡಿಪೇ[2]ೞ್ದೊಡಕ್ಕುಮದು ಯತಿಭಂಗಂ ॥
ಸಡಲಿಸದಲಸದರಂ ಪೇ ।
ೞ್ವೆಡೆಯೊಳ್ನಿಲೆ ಪೇೞಲಾರ್ಪ್ಪೊಡಂತದು ದೋಷಂ ॥ 72

ಕೇಡಡಸಿದೊಡಂ ಬಗೆಯಂ ।
ಕೂಡದು ಕೂಡಿದುದುಮಱಿದು ವಿಪರೀತಮುಮಂ ॥
ಮಾಡುಗುಮದಱಿಂ ಕರ್ಮ್ಮ ।
ಕ್ಕೋಡಿ ಬರ್ದುಂಕಲ್ಕೆ ಕಲ್ತರಾರ್ಬ್ಬಿಂನಣಮಂ ॥ 73

ದೋಸಮನೆ ಗುಣದ ಪೋಲು ।
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವ್ವಾಚಾರ್ಯ್ಯ ॥
ರ್ದ್ದೇಸಿಯನೆ ನಿಱಿಸಿ ಖಂಡ ।
ಪ್ರಾಸಮನತಿಶಯ್ಯಮಿದೆಂದು ಯತಿಯಂ ಮಿಕ್ಕರ್ ॥ 74

ನಿರತಿಶಯಮಕ್ಕುಮದು ಬಂ ।
ಧುರಕವಿಜನತಾಪ್ರಯೋಗಸಂಬಂಧನದಿಂ ॥
ಗುರುಜಘನಸ್ತನಭರಮಂ ।
ಥರಲೀಲಾಲಸವಿಲಾಸಿನೀಚ[3]ಳಿತಂಬೊಲ್ ॥ 75

ಅಂತುಂ ಯತಿಯಂ ಪೇೞ್ಗ ।
ಪ್ಪಂತಾದ್ಯದೊಳಲಸದಾರ್ಯ್ಯೆಯೊಳ್ಕಂದದೊಳಂ ॥
ಸಂತಂ ದ್ವಿತೀಯಪಾದಗ ।
ತಾಂತದೊಳಕ್ಕದು ಚತುಷ್ಪದೀಪದವಿಗಳೊಳ್ ॥ 76

ಸಮುದಾಯಾರ್ತ್ಥಮನಾರಯೆ ।
ಸಮನಿಸುವರ್ತ್ಥಪ್ರತೀತಿ ತೋಱದೊಡೆಲ್ಲಂ ॥
ಕ್ರಮಮಕ್ಕುಮರ್ತ್ಥಶೂನ್ಯಂ ।
ಸಮಸ್ತಕವಿವೃಷಭದೂರದೂಷಿತಮಾರ್ಗ್ಗಂ ॥ 77

ಮುನಿವೀತರಾಗನೆಂದುಂ ।
ಜ[4]ನಮುಂ ಸಾರ್ತ್ತಕ್ಕುಮಾವ ತೆಱದಿಂ ಪೋಪಂ ॥
ಮನಮಂ[5]ಬುಗುಮಱಿಯದವಂ ।
ಮುನಿಗುಂ ಪಗೆವಂಗೆ ಪಾಪಕರ್ಮ್ಮಂ ಪೊಲ್ಲಂ ॥ 78

1 C ತಡತಡಿಸಿ.
2 A & B ಪೊಳ್ದಡೆ.
3 C ಚರಿತಂ.
4 C ಬನಷಂ.
5 C ಮಂಜುಗು.

ಕಂ॥ ಸ್ಥಿರಮರ್ತ್ಥಶೂನ್ಯಮೆಂಬುದು ।
ದುರುಕ್ತಮಿದನಿಂತು ಪೇೞ್ದೊಡೆಲ್ಲಂ ಹೀನಂ ॥
ಮರುಳುಂ ಮದಿರಾಪರವಶ ।
ಶರೀರನುಂ ಪೇೞ್ಗುಮ[1]ಱಿವನಾವಂ ಪೇೞ್ಗುಂ ॥ 79

ಪ[2]ರಿಗೀತಾರ್ತ್ಥಂ ಪೂರ್ವ್ವಾ ।
ಪರದೊಳ್ಬಗೆವಾಗಳೆಂದುಮೊಂದಱೊಳೊಂದುಂ ॥
ದೊರೆಕೊಂಡೊಂದದೊಡದು ದು ।
ಷ್ಕರಮೆ ವಿರುದ್ಧಾರ್ತ್ಥಮೆಂಬುದಾದಂ ದೋಷಂ ॥ 80

ಅರಿನೃಪಬಲಮಂ ಗೆಲ್ದರ್ ।
ಪರಾಕ್ರಮಕ್ರಮದೆ ಶೌರ್ಯ್ಯಮಂ ಪ್ರಕಟಸು ನೀಂ ॥
ನರಮ[3]ಹಿತಾ ನಿನಗೇನಹಿ ।
ತರುಮೊಳರೇ ಸತತಪರಹಿತಾಚಾರಪರಾ ॥ 81

ಇದು ವಿದಿತವಿರುದ್ಧಾರ್ತ್ಥ ।
ಕ್ಕುದಾಹೃತಂ ಹರಣಮಾತ್ರಮಿಂನಪ್ಪುವನುಂ ॥
ಸದಭಿಮತಕಾವ್ಯಪದವಿಧಿ ।
ವಿದೂರಗತಮಾಗೆ ಪರಿಹರಿಕ್ಕೆ ಬುಧರ್ಕ್ಕಳ್ ॥ 82

ಪುನರುಕ್ತಮೆಂಬುದಕ್ಕುಂ ।
ನೆನೆಯದೆ ಪೂರ್ವ್ವೋದಿತಾರ್ತ್ಥಪದಪದ್ಧತಿಗೊಂ ॥
ದಿನಿಸುಂ ವಿಶೇಷಮಿಲ್ಲದೆ ।
ಜನಿಯಿಸಿದ ಪದಾರ್ತ್ಥಮದಱಿದೀ ದೃಷ್ಟಾಂತಂ ॥ 83

ತ್ರಿದಶಸುರಲೋಕವಾಸಾ ।
ಸ್ಪದಮಂ ಪೆಱಗುಂ ಮನುಷ್ಯಮನುಜಂ ನಿಂನಾ ॥
ಪದಚರಣಯುಗದ್ವಯಮಂ ।
ಮುದದೞ್ತಿಯೆ ಬಗೆದು ನೆನೆವನನುದಿನಮೆಂದುಂ ॥ 84

ನಿಯತೋದ್ದೇಶಿಯುಮನುದೇ ।
ಶಿಯುಮನನುಮದೆಂತುಂ ಪೇೞೆ ಯಥಾಸಂಖ್ಯ ॥
ಖ್ಯಯಮಕ್ಕುಮಾಗಮೋಕ್ತ್ಯಾ ।
ಶ್ರಯದಿಂ ವ್ಯತಿರೇಕಮಕ್ಕುಮ[4]ಲ್ಲದುವೆಲ್ಲಂ ॥ 85

1 C ಮಾವನರಿವಂ.
2 B ಪರ.
3 C ಮಹಿಪಾ.
4 C ಮಲ್ಲಿದು.

ಕಂ ॥ ಚ್ಯುತಯಥಾಸಂಖ್ಯಾರ್ತ್ಥ ।
ಪ್ರತೀತದೋಷಾನುವಸಥಮೆಂದಱಿಗೆ ಬುಧರ್ ॥
ಸತತಮದಱಿಯೆ ನಿದರ್ಶನ ।
ಗತಮಿಂತಕ್ಕುಂ ಪ್ರಮೋದದಿಂ ಕವಿಜನದೊಳ್ ॥ 86

ಅಳಿನಳಿನೋತ್ಪಳರುಚಿಗಳ ।
ನಳಕಾನನನಯನಯುಗಳದಿಂ ಗೆಲ್ದಿರ್ದ್ದಂ ॥
ಕೊಳದೊಳಗೆಂನಂನೊ[1]ಳ್ಪಿಗೆ ।
ವಿಳಾಸಿನೀ ನಿಂನ ಪೋಲದೇನತಿಶಯಮೋ ॥ 87

ಅಳಕಾನನನಯನಂಗಳೊ ।
ಳಳಿನಳಿನೋತ್ಪಳವಿಕಾಶಮಂ ಗೆಲ್ವುದಱಿಂ ॥
ತಿಳಿಗೊಳನಂ ಪೋಲ್ತಿರ್ದ್ದಂ ।
ತಿಳಿಯದಿದೇನೆಂಬುದುಂ ತದನ್ವಯಮದ[2]ಱೊಳ್ ॥ 88

ಸವಿಶೇಷಾಲಂಕಾರೋ ।
ದ್ಭವಮಾಗಿಯುಮೊಂದುಮ[3]ರ್ತ್ಥದೊಳ್ಸಂಬಂಧ ॥
ವ್ಯವಧಾನಮಾದೊಡಕ್ಕುಂ ।
ವ್ಯವಹಿತದೋಷಂ ಪ್ರಯೋಗಮೀ ತೆಱನದಱಾ ॥ 89

ಮನದೆ [4]ನೆನೆದವರ ಕಿ[5]ಡುಗುಂ ।
ಜಿನಾಧಿಪಾ ನಿಂನ ಪಾಪನಿಚಯಂ ಗುಣಮಂ ॥
ಮುನಿಗಳುಮದಱಿಂ ತ್ವತ್ಸೇ ।
ವನೆಯಿಂ ಕಿ[6]ಡಿಪಲ್ಕೆ ಪತ್ತಿದರ್ಸ್ಸಂಸ್ತುತಿಯುಂ ॥ 90

ಗುರುಲಘುವಿನ್ಯಾಸಕ್ರಮ ।
ವಿರಚನೆ ಯೂನಾತಿರಿಕ್ತಮಾದೊಡೆ ಕೃತಿಯೊಳ್ ॥
ನಿರುತಂ ಛಂದೋಭಂಗಂ ।
ದುರುಕ್ತತರದೋಷಮದಱ ಪಾಂಗಿಂತಕ್ಕುಂ ॥ 91

ಮೊದಲಪದನ್ಯೂನಾಕ್ಷರ ।
ಮದಱಿಂದ ಬಳಿಕ್ಕಮರ್ತ್ಥಮಧಿಕಾಕ್ಷರಮಿಂ ॥
ತಿ[7]ದಱಿಂ ಛಂದೋಭಂಗಂ ।
ಪದನಱಿದದನಿಂತು ಸಮಱಿ [8]ಪೇೞ್ದೊಡೆ ಚೆಲ್ವಂ ॥ 92

1 B ನೊಳ್ಪಿಗ.
2 C ಮದರಿಂ.
3 C ಮರ್ತ್ಥ.
4 C ನೆನೆವವರ,
5 C ತೆಡುಗುಂ.
6 C ಕೆಡಿಸಲ್ಕೆ.
7 C ತಿವರಿಂ.
8 C ಪೇಳ್ವೊಡೆ.

ಕಂ ॥ ವನರುಹದಳನಯನೇ ನಿಂ ।
ನನೆ ನೆನೆನೆನೆದಿರುಳೊಳೊಱಗದಿರೆ ಕಡೆಗಣ್ಗ ॥
ಳ್ಮನಿಸನಭಿನಯಿಪಮೊಲ್ಕೆಂ ।
ಮನೆ ರಕ್ತಾಂಭೋಜರುಚಿಯನಿೞ್ಕುಳಿಗೊಳ್ಗುಂ ॥ 93

ಛಂದಕ್ಕೆ ಬಾರದೆಂದಱಿ ।
ದೊಂದೊಂದಱೊಳೊಂದಿ ಬಂದು ನಿಂದಕ್ಕರಮಂ ॥
ಸಂದಿಸದೆ ಪೇಳ್ದೊಡದು ಕೃತಿ ।
ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ ॥ 94

ಜನಪತಿಗೆಪೊ[1]ಸಗೆಯುಂ ಪುರ ।
ಜನಮೆಲ್ಲಂ ಬೀಱುತಿರ್ಪ್ಪರಾಗಳ್ತಾಮುಂ ॥
ಮನದುತ್ಸವದಿಂ ಕುಣಿವಂ ।
ತನಿಲಾಹತಕೇತನಾಳಿ ಸೊಗಯಿಸಿ ತೋ[2]ರ್ಕ್ಕುಂ ॥ 95

ಮುನ್ನಂ ಪೇಱಿರ್ದ್ದರ್ತ್ಥಂ ।
ಭಿನ್ನಪ್ರಸ್ತಾರಭಿತ್ತಿದೋಷಾನುಗತಂ ॥
ಸನ್ನುತಮಪ[3]ರಾರ್ದ್ಧಂ ಸಂ ।
ಪನ್ನಶ್ಲಿಷ್ಟಾಕ್ಷರೋಪರಚಿತಮದೋಷಂ ॥ 96

ಸಂಧಿಗಳುಂ ಕೆಲವೆಡೆಯೊಳ್ ।
ಬಂದು ವಿರೂಪಂಗಳಾಗಿ ಸಮನಿಸೆ ಕವಿತಾ ॥
ಬಂಧನದೊಳಾಗೆ ದೋಷಾ ।
ಬಂಧುಗೆ ಶಶಿಲಕ್ಷ್ಮದಂತೆ ಕಱೆಯಂತಕ್ಕುಂ ॥ 97

ಅರಮರಸಂ ಕೃತಕಾದ್ರಿಯೊ ।
ಳರಮರಮನೆಯೊಳಗೆ ಕಂದುಕಕ್ರೀಡೆಗಳೊಳ್ ॥
ಅರಮುದ್ಯಾನವನಂಗಳೊ ।
ಳರಮಂತಃಪುರದೊಳರಮದೆಂದುಂ ನಿ[4]ಲ್ವಂ ॥ 98

ದೋಷಂಗಳಿಂತು ಮಿಗೆ ಸಂ ।
ಶ್ಲೇಷದೊಳಾದಂದು ಸಕಲವಿದ್ವತ್ಸಭೆಯೊ ॥
ಳ್ದೂಷಿಸುಗುಂ ಕೃತಿವಧುವಂ ।
ಭಾಷಾವಿದರದಱ ತೆ[5]ಱನನುೞಿಗೀ ದೆ[6]ಸೆಯಿಂ ॥ 99

1 C ಯೊಸಗೆ.
2 B ತಿರ್ಕ್ಕುಂ.
3 C ಪಾರಾರ್ತ್ಥಂ.
4 C ನಿಲ್ವಂ.
5 C ದೆಸೆಯ.
6 C ತೆರದಿಂ.

ಕಂ॥ ಕುಱಿತಂತೆ ಪೇೞ್ದ ಪದದೊ।
ಳ್ಮಱೆಯದೊಡೆಲ್ಲಂ ವಿವಕ್ಷಿತಾರ್ತ್ಥವಿಶೇಷಂ॥
ಪೆಱತೊಂದಲ್ಲಿಲ್ಲದುಮುವು।
ನಱಿವವರಿಟ್ಟಱಿಯೆ ಪೇ[1]ೞ್ದೊಡದು ನೇಯಾರ್ತ್ಥಂ॥ 100

ಪರೆದಿರೆ ರಾಗಂ ತಂನೊ।
ಳ್ನಿರಂತರಂ ಗಗನವಿವರಮೊಪ್ಪಿತ್ತಾದಂ॥
ವರಪಾರಿಜಾತಕುಸುಮೋ।
ತ್ಕರಸಾಂದ್ರಸರಾಗವಿಸರಪಿಂಜರಿತಂಬೊಲ್॥ 101

ಪರೆದಿರೆ ಸಂಧ್ಯಾರಾಗಂ।
ನಿರಂತರಂ ಗಗನವಿವರಮೊಪ್ಪಿತ್ತೆಂದಾ॥
ದರದಿಂ ಪೇೞಲ್ಬಗೆದಂ।
ತ್ತಿರೆ ಸಂಧ್ಯಾಪದಮುನಿಡದೆ ಪೇೞ್ದುದು ದೋಷಂ॥ 102

ರಾಗಾದಿದೋಷವಿರಹಿತ।
ವಾಗತಿಶಯಮಖಿಳವಸ್ತುವಿಸ್ತರವಿಷಯಂ॥
ಯೋಗಿಗುಣಾನುಗತಂ ಮ।
ತ್ತಾಗಮಮೇತದ್ವಿರುದ್ಧವಚನಂ ದೋಷಂ॥ 103

ಆ ಕಪಿಲಸುಗತಕಣಚರ।
ಲೋಕಾಯತಿಕಾದಿಮಾರ್ಗ್ಗಭೇದಂ ಸಮಯಂ॥
ಪ್ರಾಕಟಮದಂ ವಿರುದ್ಧವಿ।
ವೇಕದಿನಱಿಪುವೊಡೆ ನಾಡೆ ಸಮಯವಿರುದ್ಧಂ॥ 104

ಉ[2]ಕ್ತವಿಚಾರಂ ನ್ಯಾಯವಿ[3]।
ಮುಕ್ತಂ ಕ್ರಮವಿನ್ನದಕ್ಕೆ ಬಾರದುವೆಲ್ಲಂ॥
ವ್ಯಕ್ತಂ ನ್ಯಾಯವಿರುದ್ಧಂ।
ಪ್ರೋಕ್ತಮಹಾದೋಷಮಂತು ಪೇೞಲ್ಕಿಂತುಂ॥ 105

ನಿರುಪಮಗಂಧರ್ವ್ವಗತಿ।
ಸ್ವರಾದಿಕಕಳಾಗುಣಂ ಚತುಃಷಷ್ಟಿವಿಧಂ॥
ದೊರೆಕೊಳ್ಳದುದೆಲ್ಲಿ ಕಳಾ।
ವಿರುದ್ಧದೋಷಂ ವಿಶಿಷ್ಟಜನತಾದೂಷ್ಯಂ॥ 106

1 A & B ಪೇಳ್ವತ.
2 B & C ಉಕ್ತಿ.
3 B & C ನಿಯುಕ್ತ.

ಕಂ॥ ಕಾಲಮಹೋರಾತ್ರಾದಿಕ।
ಮಾ ಲಕ್ಷಿತಭೇದಮದಱೊಳೊಂದೊಂದಕ್ಕಂ॥
ಕಾಲವಿರುದ್ಧಂ ದೋಷ।
ಕ್ಕಾಲಯಮಮದನಱಿದು ಕೃತಿಯೊಳಿಡದಿರ್ಕ್ಕೆ ಬುಧರ್॥ 107

ಲೋಕಮದೂರ್ಧ್ವಾಧೋಮ।
ಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕಂ॥
ಲೋಕವಿರುದ್ಧಂ ತದ್ವ್ಯತಿ।
ರೇಕೋಕ್ತಿ ವಿವೇಕಿಲೋಕಗರ್ಹಿತಮಾರ್ಗ್ಗಂ॥ 108

ದೇಶಂ ವರರಾಷ್ಟ್ರಾದಿನಿ।
ವೇಶಾಂತಂ ತದ್ವಿರುದ್ಧವಚನಂ ಮಿಗೆ ಸಂ॥
ಕ್ಲೇಶಕರಂ ಕೃತಿಕರ್ತ್ತೃಗೆ।
ಕೌಶಲಮಂ ಪಡೆಯದುಕ್ತದೇಶವಿರುದ್ಧಂ॥ 109

ಇಂತಿಂತೆ ಪೇೞ್ವೊಡೆಲ್ಲಮ।
ನಂತಾತ್ಮಕಮಕ್ಕುಮಾ ವಿರುದ್ಧದ ಭೇದಂ॥
ಸಂತಯಿಸಿ ಬಲಿದು ಮನಮನ।
ದಂ ತಱಿಸಲೆ ಪೇೞಲಾರ್ಪ್ಪೆನೆಂಬವನೊಳನೇ॥ 110

ಗೀತಿಕೆ॥ ದೋಷಮೇನಾನುಂ ಸ್ವಲ್ಪಮಾದೊಡಂ।
ಮಾಸಿಸಿಕ್ಕುರ್ಗಮು[1]ಣಂ ಕೃತಿವಧುವಂ॥
ಪೇಸದೆ ದುರ್ಜ್ಜನದೊಳಾದ ಪ[2]ರಿಚಯಂ।
ಮಾಸಿಸಿ ಕಿ[3]ಡಿಸುವ ನ್ರೊಲೊಪ್ಪುವ ಕುಲವಧುವಂ॥ 111

ವೃ॥ ಕಾರಕದೋಷಮುಂ ವಚನದೋಷಮುಮಾ ಗುರುದೋಷಮುಂ ಲಘೂ।
ಚ್ಚಾರಿತಶಬ್ದದೋಷಮುಮದಂತೆ ಸಮುಚ್ಚಯಜಾತದೋಷಮುಂ॥
ಭೂರಿವಿಕಲ್ಪದೋಷಮುಮದಿಂನವಧಾರಣದೋಷಮುಂ ವಿಶಂ।
ಕಾರಚಿತೋರುದೋಷಮುಮನೀ ತೆಱದಿಂ ತಱಿಸಲ್ಗೆ ಪಂಡಿತರ್॥ 112

ಕಾರಕಮಾಱು ಕರ್ಮ್ಮಕರಣಾದಿಕದಿಂ ಪ್ರಥಮಾದಿಭೇದನಿ।
ರ್ದ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞೆನಿಕ್ಕುಮಾ॥
ಚಾರುಗುಣೋದಯಂ ವಚನಮೇಕಬಹುಕ್ರಮದಿಂದೆ[4]ರೞ್ತೆಱ।
ಕ್ಕಾರಯೆ ಪೇೞ್ವೆನಿಂತಿವಱ ಜಾತಿವಿಭಾಗಗುಣಾಗುಣಂಗಳಂ॥ 113

1 B ಮಾಣಂ.
2 C ಪರಿಚರಿಯಂ.
3 A & B ಕೆಡಿಸುವ.
4 B ದದಕ್ಕೆಮತ್ತಾರಯೆ.

ವೃ ॥ ನರಪತಿ ಬಂದನಾ ನೃಪನನೞ್ತಿಯೆ ಕಾಣ್ಬುದು ತನ್ನರೇಂದ್ರನಿಂ ।
ಧರಣಿ ಸನಾಥ ಭೂಪತಿಗೆ ಕಪ್ಪವನಿತ್ತನೀಶನತ್ತಣಿಂ ॥
ಪರಿಭವಮಂ ಕೞಲ್ಚುವುದಧೀಶ್ವರನಾ ಧರೆ ಸಾಲ್ಗುಮಾ ಮಹೀ ।
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತವಿಭಕ್ತ್ಯನುಕ್ರಮಂ ॥ 114

ಮ[1]ರವೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ ।
ಧುರಗುಣ ಬಂಧುಸಂತತಿಯುಮೆಂಬುದು ಕಾರಕದೋಷಮಾಗಳುಂ ॥
ಬರವನಮೋಘಮಿಾಗೆಮಗೆ ದೇವತೆಗಳ್ಕರುಣಿಪ್ಪುದಕ್ಕೆ ಬಂ ।
ಧುರಗುಣ ಬಂಧುಸಂತತಿಗೆ ನಿಕ್ಕುವಮೆಂಬುದದುಷ್ಟಕಾರಣ(ಕ)ಂ ॥ 115

ನಿಕ್ಕುವಮಿಂತುಮಲ್ಲದದಱ ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸ ।
ಯ್ತಕ್ಕುಮನುಕ್ರಮಾನುಗ[2]ತದಿಂ ಬರಮಿಾಗೆಮಗೆಂಬ ಕಾರಕಂ ॥
ಸಕ್ಕದವೇನೊ ಕಾ[3]ರಕವಿಭಕ್ತಿಯೊಳೊಂದೆ ಸಮಾಸಯುಕ್ತಿ ಲೇ ।
ಸಕ್ಕಮಭೇದರೂಪಗುಣಮಾಗಿ ತಗುಳ್ದಿರೆ ಮೇಣ್ಕ್ರಿಯಾಪದಂ ॥ 116

ಬಂದುವು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊ ।
ಳ್ನಿಂದುದಿದೆಂಬುದುಂ ವಚನದೋಷವಿ[4]ಶೇಷಮನೈಪುಣೋಕ್ತಿಯಿಂ ॥
ಬಂದುದು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊ ।
ಳ್ನಿಂದುವಿವೆಂಬುದುಂ ಬಗೆದು ನೋಡಿ ಗುಣಂ ವಚನಕ್ಕೆ ನಿಕ್ಕುವಂ ॥ 117

ಜಾತಿವಿ[5]ಭಾಗಮಂ ಬಗೆದು ಪೇೞೆ ಬಹುತ್ವಮನೇಕವಾಕ್ಯಸಂ ।
ಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ ॥
ಮಾ[6]ತಿನೊಳೇನೊ ಸಂಖ್ಯೆಗಳೊಳೇಕಬಹುತ್ವವಿಪರ್ಯಯಕ್ಕೆ ಸಂ ।
ಖ್ಯಾತಗುಣಂ ವಿಕಲ್ಪಮದು ಕನ್ನಡದೊಳ್ಗುಣಮಂ ತಗುಳ್ಚುಗುಂ ॥ 118

ಕುದುರೆ ತಗುಳ್ದುವಾದೆಸೆಯ ಬಿಲ್ಲವರಂ ಸು[7]ೞಿದಾನೆ ನಿಂದು ಮೆ ।
ಟ್ಟಿದುವೆಲೆ ನೋಡಿಮೆಂಬುದಿದು ಜಾತಿಕೃತೈಕಬಹುತ್ವಮೊಂ[8]ದುಗುಂ ॥
ಕುದಿಕುದಿದತ್ತಣಿಂ ಕುದುರೆ ನೂಱೞೊಳಾ ಬಲದಾನೆ ಪತ್ತು ತಾ ।
ಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕಬಹುತ್ವಸಂಗದಿಂ ॥ 119

---

1 C ಬರ.
2 A & C ಗತರಿಂ.
3 A & B ಕಾರಣ.
4 C ವಿಶೇಷಿಸಿ.
5 A & B ವಿಭಾಗಮುಂ.
6 B ಮಾತುಗಳೇನೊ.
7 B ಸುಳಿವಾನೆ.
8 C ದೊಂದುಗುಂ.

ವೃ ॥ ಪರಸಿರೆ ಮುಂ ಸಮುಚ್ಚಯಪದದ್ವಿತಯೋಕ್ತಿವಿಭಕ್ತಿ ಕೂ[1]ಡೆ ಬಂ ।
ದಿರದೆಯುಮೇಕಕಾವ್ಯದೊಳೆ ಕಾರಕಸಂಪದಮಂ ತಗುಳ್ಚುಗುಂ ॥
ನರಪತಿಯುಂ ನೃಪಾಂಗನೆಯರುಂ ನೆರೆದೞ್ತಿಯಿನಾಡಿ ಪೋದರಾ ।
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪದೂಷಿತಂ ॥ 120

ಗಣಿತದೊಳೊಂದಿ ಬರ್ಪ್ಪ ಪದಮೊಂದೆಡೆಗೊಂದು ವಿಶೇಷ್ಯಮುಂ ವಿಶೇ ।
ಷಣಮುಮನೊಂದಲೀಯದಿರೆಯುಂ ಮಿಗೆ ಕಾರಕದೋಷಕಲ್ತಿದಂ ॥
ಪ್ರಣುತಪದಾಂತರೀಕರಣಮಂತ[2]ಧೆ ತಾಣದೊಳಾದೊ[3]ಡಂ ಮಹಾ ।
ಗುಣಮನೆ ತರ್ಕ್ಕಮೇಕಬಹುಭೇದವಿಕಲ್ಪಮನಲ್ಲಿ ನೋಡಲಿಂ ॥ 121

ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ ।
ಪ್ರಣು(ಣ)ತಸಮಸ್ತವೈರಿಗಣನಪ್ಪನನುಜ್ಜ್ವಲಕೀರ್ತಿಯಪ್ಪನಂ ॥
ಗಣಿದಮನೇನುಮಂ ಬಗೆಯದಾಗದು(ಡು)ಮಂತೆ ಪರೋಪಕಾರಕಾ ।
ರಣಪರನಪ್ಪನಂ ಮನದೆ ಮೆಚ್ಚದರಾರಭಿಮಾನಿಯಪ್ಪನಂ ॥ 122

ನೆಗೆದ ಮುಗಿಲ್ಗಳುಂ ಸುರಿವ ಪೆರ್ಮ್ಮೞೆಯುಂ ಮಿಗೆ ನುಣ್ಣನಪ್ಪ ಕೇ ।
ಕಿಗಳ ಸರಂಗಳುಂ ಪೊಳೆವ ಮಿಂಚುಗಳುಂ ಕರಮುಚ್ಚಮಪ್ಪ ಬೆ ॥
ಟ್ಟುಗಳ ತಟಂಗಳಿಂ ಸುರಿವ ನಿರ್ಝರಮುಂ ಪೊಸಗಾ[4]ರೊಳಿಂತು ಬೆ ।
ಳ್ಪಗೆ ಪಥಿಕಾಂಗನಾಜನಮನಂಜಿಸುವಂತಿರೆ ತೋಱೆ ಸುತ್ತಲುಂ ॥ 123

ಗೀತಿಕೆ॥ ಇಂತು ಕಾರಕಂಗಳೊ ।
ಳ್ಸಂತವೞಿಯೆ ಪೇೞ್ದ ಗುಣಮುಂ ದೋ[5]ಷಮುಮಂ ॥
ಚಿಂತಿಸಿ ಪೞವುಮಿಂನಪ್ಪವಂ ।
ಭ್ರಾಂ[6]ತಿಲ್ಲದಱಿದು ಕೊಳ್ಗೆ ಕವಿಗಳ್ಕೃತಿಗಳೊಳ್ ॥ 124

ವೃ ॥ ಆರುಮಿಾ ಗುರುಲಘೂದಿತದೋಷವಿಶೇಷಮಂ ।
ಧೀರಸತ್ವರಱಿದುಂ ಕುಱಿಗೊಂಡು ವಿಭಾಗಿಸರ್ ॥
ಕಾರಣಾಂತರಮನಂತ[7]ಮೞೊಳ್ತಱಿಸಂದು ನಿ ।
ರ್ದ್ಧಾರಿತಕ್ರಮದೆ ಪೇೞ್ವೆನುದಾಹರಣಂಗಳಂ ॥ 125

---

1 A & B ಮಾಡಿ.
2 A & B ತರೆ.
3 B ದುಡಂ.
4 C ಕಾರೊ.
5 C ದೋಷಮುಂ.
6 B ಭ್ರಾಂತಿಯಿಲ್ಲ.
7 C ತದ.

ವೃ ॥ ಆಗಳುಂ ಗುರುಗಳಲ್ಲದ ತಾಣದೊಳಂ ಗುರೂ ।
ದ್ಯೋಗದಿಂ ಬಗೆಗೆ ಗೌರವದೋಷಮಿದೆಂಬುದಂ ॥
ಬೇಗಮಾ ಲಘುಗಳಲ್ಲದ ತಾಣದೊಳಂ ಲಘೂ ।
ಪಾಗಮಕ್ರಮದೆ ನಂಬುಗೆ ಲಾಘವದೋಷಮಂ ॥ 126

ಸೂದುಗೆತ್ತು ಬಗೆಯಾದವನಾನೋ[1]ಡಲ[2]ಟ್ಟಿದೇ ।
ನಾದಮಾನುಮಱಿಮಾನಸನಾಗದೆ ಮಾಳದೊಳ್ ॥
ಮೋದದಾನುಡುವ ಸೀರೆಗಮೆಂನನ...ಪ್ಪಿಬಾ ।
ರದೆ ಪೋದೆಡೆಯೊಳೆ ತಡೆದಾನವನೆಂದಪಂ ॥ 127

ಇಂತು ಪೇೞ್ದೊಡಿದು ಗೌರವದೋಷದ ಮಾೞ್ಕೆ ನಿ ।
ಶ್ಚಿಂತಮೀ ತೆಱಿದವಂ ಕಳೆಗಾ ಕೃತಿಯುತ್ತಣಿಂ ॥
ಮುಂತೆ ಪೇೞ್ವಿಕ್ಕುಱಿಪಂ ಕುಱಿಗೊಂಡು ಕವೀಶರಾ ।
ಪ್ಪಿಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷಮಂ ॥ 128

ನೆರೆದು ಬಂಧಪರವರ್ ಸಯುಲೋಬಲಮೊಲ್ಲಮೆ ।
ತ್ತಿರಲೆಕೊಂದಪನಿವಂದಿರನೀಗಳೆ ನಿಕ್ಕುವಂ ॥
ಪರಿದು ಬೀೞ್ವಿವೊಲಿವಂದಿರ ಪಾಡಱಿವಂದವಂ ।
ತಿರವೆಳೊಡ್ಡಱಿಯದಂತಿರೆ ನಂಮವರೆಲ್ಲರುಂ ॥ 129

ಬೇಱೆವೇಱೆ ವಿಕಲ್ಪಸಮುಚ್ಚಯಯುಗ್ಮದಾ ।
ತೋಱುಮೆಂ ಕ್ರಮವಿಕಲ್ಪನೆಯಿಂ ಗುಣದೋಷಮಂ ॥
ಕೀಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ ।
ತೋಱಿ ಪಿಂಗಿಸುವವೊಲ್ ಸ[3]ಲೆ ನೆಲ್ಲಿರೆ ಪೊಳ್ಗಳಂ ॥ 130

ದೇವರುಂ ಗೊರವರುಂ ಗುಣವೃದ್ಧರನಾರತಂ ।
ಕಾವರಕ್ಕರಸನಂ ಪ್ರಜೆಯುಂ ಪರಿವಾರಮುಂ ॥
ಏನುಮಂ ಬಗೆಯದಂತಿರೆ ಪೇೞ್ದಿ ಸಮುಚ್ಚಯೋ ।
ದ್ಭ[4]ವಕಕ್ರಮವಿಚಾರದೆ ದೋಷಮಿದಗ್ಗಳಂ ॥ 131

ನೃಪನುಮಂ ಪ್ರಜೆಯುಮಿಂ ಪರಿವಾರಮುಮಂ ಮಹಾ ।
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ ॥
ವಿಪುಳರಾಗಪರರಾಗಿಸುಗೆಂದು ಸಮುಚ್ಚಯ ।
ಕ್ಕುಪಚಿತೋರುಗುಣಮಂ ಮಿಗೆ ಪೇೞ್ಗೆ ಕವೀಶ್ವರರ್ ॥ 132

1 A ನೊಡ.
2 A & C ನಟ್ಟಿದ.
3 C ಪೂಸ.
4 B ದ್ಭವಿತ.

ವೃ ॥ ಬೇಱೆವೇಱೆ ನಿಲೆ ಕಾರಕದೊಳ್ಕ್ರಿಯೆ ತಳ್ತುಮುಂ ।
ತೋ[1]ಱಿ ಪೇೞ್ದವಗುಣಂ ಗುಣರೂಪದಿ ಪೊರ್ದುಗುಂ ॥
ಸಾಱುಗಾನೆಯುವರ್ಗೆಲ್ಲರುಮಂ ನೃಪನಾ[2]ನೆ ಮ ।
ತ್ತೇಱುಮೆಂ ಪಣಿದೊಡಾನೆಯನೆಂಬುದು ದೂಷಿತಂ । 133

ಬಸಗೆ ಮೇಣ್ಮನಿಗೆ ಮೇಣವರೆಲ್ಲರುಮಂತೆ ಬ ।
ಗ್ಗಿಸುಗೆ ಮತ್ತಱಿಯಲಾಗದು ನೆಟ್ಟನೆ ಪೂಣ್ದಿದಂ ॥
ಪುಸಿವರಾಗಿರದೆ ಮಾ[3]ನಸರೆಂಬುದನಿಂತೆ ಶಂ ।
ಕಿಸದೆ ನಂಬುವುದು ಮಿಕ್ಕ ವಿಕಲ್ಪದ ದೋಷಮಂ ॥ 134

ಪೆಱಗೆ ಮೇಣ್ಪೊಗೞ್ಗೆ ಮೇಣ್ ನೆವಮಿಲ್ಲದೊಡಿಂತು ಕೈ ।
ಗೆಱಿಯೆ ಬಗ್ಗಿಸುಗೆ ಮೇಣವರೆಲ್ಲರುಮಂತುಮಾ ॥
ನುಱಿಪನಲ್ಲೆನಿತಾದೊಡಮೆಂಬುದು ಜಲ್ಪಮಾಂ ।
ಗೞಿಯದಿಂತಿದ...ನಿಂತಿರೆ ಪೇೞ್ಗೆ ವಿಕಲ್ಪಮಂ ॥ 135

ಗೀತಿಕೆ॥ಕುಱಿತು ಸಮುಚ್ಚಯದಾ ಬೞಿ ವಿಕಲ್ಪದಾ ।
ತೆಱದೊಳೆ ದೋಷಮುಮನಂತೆ ಗುಣಮುಮಂ ॥
ಕಿಱಿದಱೊಳಱಿಯೆ ಪೇೞ್ದೆನಿಂತೆ ಪೆಱವುಮನೀ ।
ಕುಱಿಪನೆ ಕುಱಿ ಮಾಡಿ ಪೇೞ್ಗೆ ಕಬ್ಬಮಂ ॥ 136

ವೃ ॥ ನಿಯಮಿತಾನ್ವಿತಜಾತಿಗುಣಕ್ರಿಯಾ ।
ಶ್ರಯಮಿದಾಯ್ತುವಧಾರಣಲಕ್ಷಣಂ ॥
ನಯನಿಯೋಗವಿಕಲ್ಪನೆಯೊಳ್ವಿಶಂ ।
ಕೆಯ ವಿಶೇಷಗುಣಕ್ಕುಪಲಕ್ಷಣಂ ॥ 137

ಕುಲಜನೀತನೆ ಪಂಡಿತನೀತನು ।
ಜ್ಜ್ವಲಯಶೋಧಿಕನೀತನೆ ಕಿಬ್ಬಮೆಂ ॥
ದಲಸಿ ಪೇ[4]ೞ್ವವಧಾರಣದೋಷಮಂ ।
ನೆಲಸಲೀಯದಿರಿಂ ಕೃತಿನಾರಿಯೊಳ್ ॥ 138

ಶೂರನೀತನೆ ಪಂಡಿತನೀತನೇ ।
ಕ್ಷೀರಗೌರಯಶೋಧಿಕನೀತನೇ ॥
ಧಾ[5]ರುಣೀತಳದೊಳ್ಧ್ರುವಮೆಂಬುದಾ ।
ಧಾರಮಿಂತವಧಾರಣದೊಳ್ಗುಣಂ ॥ 139

1 B & C ತೋಱೆ.
2 C ತಾನೆ.
3 C ಮಾನಿಸರ.
4 C ಪೇಳ್ದ.
5 C ಧಾರಿಣೀ.

ವೃ ॥ ದಿವಿಜನೋ ಫಣಿನಾಯಕನೋ ಮನೋ ।
ಭವನಿವಂ ಕರಮೊಪ್ಪಿದನೆಂಬುದಂ ॥
ಕಡಿಗಳಿಟ್ಟು ವಿಶಂಕೆಯ ಪಾೞಿಯಂ ।
ತವಿಸಿ ನಿಲ್ಕೆ ಮನೋಹರಕಾವ್ಯದೊಳ್ ॥ 140

ಸುರಗಣಾಧಿಪನೋ ಫಣಿನಾಥನೋ ।
ನಿರುತಮಾ ಸ್ಮರನೋ ಸೊಗಯಿಪ್ಪರೀ ॥
ದೊರೆಯರಿ[1]ಲ್ಲ ನರರ್ಪ್ಪಿರೆಂಬುದಾ ।
ದರದಿನಕ್ಕೆ ಗುಣೋದಯಕಾರಣಂ ॥ 141

ಅಪರಿಮೇಯಮೆ ದೋಷಗುಣೌಘಮಿಂ ।
ತುಪಚಿತಕ್ರಮದಾರಯೆ ಕಾವ್ಯದೊಳ್ ॥
ವಿಪುಳವೃತ್ತಿಯೊಳೊಂದಿರೆ ಪೇೞ್ವೆನ ।
ಭ್ಯುಪಗಮೋಕ್ತಿಗುಣಾವಗುಣಂಗಳಂ ॥ 142

ಪೊಳೆವ ಮಿಂಚುಗಳಂತಿರೆ ಕೇತುಗಳ್ ।
ಜಳದವೃಂದದ ವೋಲಿರೆ ಹಸ್ತಿಗಳ್ ॥
ಗಳಿತದಾರೆಗಳಂತಿರೆ ಪತ್ತಿಗಳ್ ।
ಬಳಸಿ ಕಾರ್ಗ್ಗಣೆಯಾಯ್ತು ಮಹಾಹವಂ ॥ 143

ನಿಯಮಿತಾಕ್ಷರದಿಂದುಪಮಾಪ್ರತಿ ।
ಜ್ಞೆಯನೆ ತಿರ್ದ್ದುವುದೞ್ತಿಯಿನಿರ್ದ್ದುಮಾ ॥
ಬಯಕೆ ತೀರದ ಕಾರಣದಿಂ ವಿಪ ।
ರ್ಯ್ಯಯಮಿದಭ್ಯುಪಮೋಕ್ತ್ಯುಪದೂಷಣಂ ॥ 144

ಉಪಮಿತಾಕ್ಷರಮೆಲ್ಲಿಯುಮೇಕರೂ ।
ಪಪರಿವೃತ್ತಿಯೊಳೊಂದಿದ ಮಾೞ್ಕೆಯಿಂ ॥
ದುಪಚಿತಕ್ರಮಮ[2]ಕ್ಕುಮಿದೆಂದುಮ ।
ಭ್ಯುಪಗಮಕ್ಕೆ ಗುಣೋದಯಕಾರಣಂ ॥ 145

ಸಮುಚಿತನೃಪತುಂಗದೇವಮಾರ್ಗ್ಗ ।
ಕ್ರಮನಮನಾಭಿಮುಖರ್ಕ್ಕಳಪ್ಪ.... ॥
ಕ್ರಮಸಹಿತಮಗಮ್ಯರೂಪಕಾವ್ಯ ।
ಶ್ರಮಪದಮಂ ನಿರಪಾಯಮೆಯ್ದಲಾರ್ಪ್ಪರ್ ॥ 146

1 C ಲಿಲ್ಲ. | 2 A & B ದಕ್ಕುಂ.

ವೃ ॥ ಅತಿಶಯಧವಳೋರ್ವ್ವೀಪೋದಿತಾಳಂ ।
ಕೃತಿಮತಿನೀತಿನಿರಂತರಪ್ರತೀತಂ ॥
ಶ್ರುತಿಯುವತಿಕೃತೋಪಚಾರಸಾರ ।
ಸ್ವತಗುಣದಿಂ ಕೃತಿಕೃತ್ಯಮಕ್ಕುಂ.... ॥ 147

ನುಡಿಗಳೊಡಂಬಡಲ್ಬಗೆದವೊಲ್ಬಗೆಯಂ ಮಿಗಲೀಯದೊಂದೆ ನಾ[1] ।
ಡ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊ ॥
ಳೊತ್ತರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪು ಮೆತ್ತುದಾಂ ।
ಗುಡಿವಿಡುಮಂತೆ ನೀಳ್ದು ನಿಲೆ ಪೇೞ್ವುದು ನೀತಿನಿರಂತರಕ್ರಮಂ ॥ 148

ಸಕಳಾಳಾಪಕಳಾಕಳಾಪಕಥಿತವ್ಯಾವೃತ್ತಿಯೊಳ್ಕೂಡಿ ಚಿ ।
ತ್ರಕರಂಬೊಲ್ಪರಭಾಗಭಾವವಿಲಸದ್ವರ್ಣ್ಣಕ್ರಮಾವೃತ್ತಿಯಂ ॥
ಪ್ರಕಟಂ ಮಾಡಿರೆ ಪೇೞ್ದ ಚಿತ್ರಕೃತಿಯಂ ವ್ಯಾವರ್ಣ್ಣಿಸುತ್ತುಂ ಕವಿ ।
ಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೈಕೊಳ್ವುದೀ ಮಾೞ್ಕೆಯಿಂ ॥ 149

ಗದ್ಯ ॥ ಇದು ಪರಮಶ್ರೀನೃಪತುಂಗದೇವಾನುಮತಮಪ್ಪ
ಕವಿರಾಜಮಾರ್ಗ್ಗದೊಳ್ ದೋಷಾದೋಷಾನುವ
ರ್ಣ್ಣನನಿರ್ಣ್ಣಯಂ ಪ್ರಥಮಪರಿಚ್ಛೇದಂ ॥

---

1 B & C ನಾಣ್ನುಡಿ.

ದ್ವಿತೀಯಃ ಪರಿಚ್ಛೇದ.

ಕಂ॥ ಪರಮಶ್ರೀಕೃತಿವಧುವಾ।
ಶರೀರಶೋಭಾಕರಂಗಳಪ್ಪ ಗುಣಂಗಳ್ ॥
ನಿರತಿಶಯಾಲಂಕಾರ ।
ಪ್ರರೂಪಿತಂಗಳ್ಪುರಾಣಕವಿವಿದಿತಂಗಳ್ ॥ 1

ಚಾ[1]ರುಶ್ರೀನೃಪತುಂಗವಿ ।
ಚಾರಕ್ರಮಮಾರ್ಗ್ಗಗಣನೆಯೊಳ್ಪರಮಾಲಂ ॥
ಕಾರವಿಭಾಗಂ ವಿವಿಧಾ ।
ಕಾರಂ ಶಬ್ದಾರ್ತ್ಥಭೇದದಿಂದೆರಡಕ್ಕುಂ ॥ 2

ಅಂತೆಗವುದಱೊಳಗೆ ಸಮು ।
ತ್ಪನ್ನಪ್ರಾಧಾನ್ಯಮನ್ಯಮರ್ತ್ಥಾಧಾರಂ ॥
ಮುನ್ನಂ ಶಬ್ದಾಳಂಕಾ ।
ರಂ ನಿಶ್ಚಿತಮಕ್ಕೆ ಪೇಳ್ವ ಮಾಱ್ಕೆಯೊಳಂತಾ ॥ 3

ಇಲ್ಲಿಗಿದು ತಕ್ಕುದಿಲ್ಲಿಗೆ ।
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ ॥
ನೆಲ್ಲುಂ ಮೊಸರುಂ ಗುಡಿದಂ ।
ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ ॥ 4

ಗೆಱಯಿಸಿದರ್ತ್ಥಂ ಸಲೆ ಪಾಂ ।
ಗೆಱಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ ॥
ಮೆಱಸುಂಗೋದಂತಿಕ್ಕುಗಂ ।
ಕೆಱಚ್ಚಿಕಳೆಗೊಂದಿ ಮುಂದೆ ಬಾರದ ಪದಮಂ ॥ 5

ನಿಲಿಸಿ ಲಘುಪದಮನದನ ।
ಗ್ಗಲಿಸಿರೆ ಮತ್ತೊತ್ತಿ ಬರ್ಪ್ಪ ಪದಮಂ ತುದಿಯೊಳ್ ॥
ನಿಲೆ ಪೇಳ್ವುದಗಳ್ಕೆ ಸಿನ ।
ತಲೆಯೊಳ್ಚಿ ಚೊ[2]ಱೆಯನಿಟ್ಟವೋಲಸುಖಕರಂ ॥ 6

1 C ಸಾರ. | 2 A ಗೊಚಱೆ.

ಕಂ॥ ಬರಿಸಿ ಕ್ಷಿತಿಪತಿಯಂ ಸ ।
ಯ್ತಿರಿಸಿ ಪ್ರಿಯಕುಶಲವಾರ್ತ್ತೆಯಂ ಬೆಸಗೊಂಡು ॥
ಸ್ಥಿರಮಿರ್ದ್ದ ಪ್ರಭು ನುಡಿಯಿ ।
ಪ್ರರೂಢಮುದನಾದನಾತನೆಂಬುದು ದೋಷ್ಯಂ ॥ 7

ಕ್ಷಿತಿಪತಿಯಂ ಬರಿಸಿ ಜಗ ।
ನ್ನುತನಂ ಸಂತೈಸಿ ಕುಶಲವಾರ್ತ್ತಾಂತರಮಂ ॥
ಮಿತವಚನಂ ಬೆಸಗೊಂಡತಿ ।
ವಿತೀರ್ಣ್ಣಮುದನಾದನಾತನೆಂಬುದು ಮಾರ್ಗ್ಗಂ ॥ 8

ಬಂದಂ ಕ್ರಿಯಾವಿಶೇಷಣ ।
ಮಂ ದೊರೆಕೊಳೆ ಸಯ್ತು ಪೇೞದದಱೊಳೆ ಪೇೞಿತಂ ॥
ಸಂದಿಸಿ ಪೇೞ್ದೊಡೆ ಕೃತಿಯೊಳ ।
ಗೊಂದಿರದೆರಡಕ್ಕೆ ಬಿಟ್ಟಕಱುವಂ ಪೋಲ್ಕು[1]ಂ ॥ 9

ಪರಿವಾರವಾರವನಿತಾ ।
ಪರಿವೃತನರಮನೆಯೊಳರಸನಂಬರತಳದೊಳ್ ॥
ವರತಾರಾಪರಿಗತಶಶ ।
ಧರನಂತೊಪ್ಪಿರೆ ವಿನೋದದಿಂದುರುಮುದದಿಂ ॥ 10

ಪದನಱಿದೊಂದಂ ಕ್ರಿಯೆಯೊಳ್ ।
ಪುದಿದುೞಿದುದನೊಂದಿ ಬರೆ ವಿಶೇಷ್ಯದೊಳೊಂದಂ ॥
ಸದಭಿಮತಮಾಗಿ ನಿಲೆ ಪೇ ।
ೞ್ವುದು ಮಾರ್ಗ್ಗಂ ನಿತ್ಯಮಲ್ಲವಲ್ಲಭಮತದಿಂ ॥ 11

ಇಂತಂತೆ ಮತ್ತೆ ಬೞಿ ಮಿಗೆ ।
ಮುಂ ನಿಲೆ ತಾ[2]ಂಮೋಕ್ಷ್ವೆ(ಕ್ಷ್ವೆ)ಱಂ ಗಡಂ ಗಳಮಾದಂ ॥
ಕೆಂನ್ನಂ ನಿಲ್ಲಂದಿವನೆಂ ।
ದುಂ ನಿಱಿಸಲ್ಕಲ್ಲದೆಡೆಗಳೊಳ್ಕ[3]ಲ್ಲದಿರಿಂ ॥ 12

ನೃಪಕನ್ಯಕಾಸ್ವಯಂವರ ।
ವಿಪುಳಮಹೋತ್ಸವವಿವಾಹದೊಳ್ಬಂದಿರೆ ಮುಂ ॥
ನಪವಾದವಾದುದೆನಗೇಂ ।
ಚಪಲ(ಲಾ)ಧ್ವಜನೋಕ್ತಿಯಿಂದಮಿಂಬಾರದಿರಿಂ ॥ 13

1 B & C ಲ್ಗಂ.
2 C ತಾಲ್.
3 C ಕಲ್ದದಿರಿಂ.

ಕಂ ॥ ಘನಮೆರಡನೆಯುದಱೊಳಮೀ ।
ಱನೆಯವಿಭಕ್ತಿಯೊಳಮೊಳವು ಗುರ್ವ್ವಲಘುಭೇದಂ ॥
ಅನಿಯತವೃತ್ತಿಯನಱಿದದ ।
ನನುಮಾರ್ಗ್ಗಕ್ರಮದೆ ಸಯುಕ್ತಿ ಮಾಡುಗೆ ನಿ[1]ಪುಣಂ ॥ 14

ಆದಿಸ್ವರಪದಮಂ[2]ತದೊ ।
ೞಾದೆಡೆಯೊಳ್ದೀರ್ಗ್ಘಮಕ್ಕು ಮೆರಡನೆಯ ವಿಭ ॥
ಕ್ತ್ಯಾದಾನಪದಂ ದೀರ್ಗ್ಘಂ ।
ಪಾದಾಂತದೊಳುೞಿದ ತಾಣದೊಳ್ಸ್ವೇಚ್ಛೆಂದಂ ॥ 15

ನೃಪನನಭಿಮಾನಧನನನ ।
ನುಪಮನನತಿಶಯವಿಶಾಲಕೀರ್ತ್ತಿಧ್ವಜನಾ ॥
ನುಪಚಿತಗುಣನಾನುಚಿತನ ।
ನಪೇತದೋಷನನುದಾರಚರಿತೋದಯನಂ ॥ 16

ಎಂದಿಂತು ಪೇೞ್ದು ಮಾೞ್ಕೆಯೊ ।
ೞೊಂದುವುದುಮನೊಂದಿ ಬಾರದುದುಮಂ ಪೀನಂ ॥
ಸಂದಯಮಿಲ್ಲದೆ ಸಲೆ ತಱಿ ।
ಸಂದೋಸಱಿಸುವುದು ಕಾವ್ಯರಚನಾಕ್ರಮದೊಳ್ ॥ 17

ಪಲವುಮನೊಡಗೂಡಿರೆ ಸ ।
ಯ್ತಿಲಸದೆ ಪೇೞ್ವೆಡೆಯೊಳಂ ಸ್ವಪಾದಾಂತದೊಳಂ ॥
ಪಲವಾಱನೆಯ ವಿಭಕ್ತಿಯೊ ।
ೞಲಘೂಚ್ಚಾರಣೆ ಯಥೇಷ್ಟಮುೞಿದೆಡೆಗಳೊಳಂ ॥ 18

ನೃಪನಾ ನೃಪನಂದನನಾ ।
ನೃಪವಧುವರ್ನ್ನೆರೆದು ಸುಖದೊಳಿರೆ ಕೈಕೊಂಡ ॥
ತ್ತಪರಿಮಿತರಾಗಮೆರ್ದೆಯುಂ ।
ನೃಪಬಾಂಧವರಾ ಸುಮಿತ್ರರಾ ಪರಿಜ[3]ನದಾ ॥ 19

ನೃಪನ ನರಪಾಲತನಯನ ।
ನೃಪವಧುವರ್ನ್ನೆರೆದು ಸುಖದಿನಿರೆ ಕೈಕೊಂಡ ॥
ತ್ತಪರಿಮಿತರಾಗಮೆರ್ದೆಯುಂ ।
ನೃಪತಿಸನಾಭಿಗಳ ಬಂಧುಜನದಾ ಕೆಳೆಯಾ ॥ 20

1 C ನಿಪುಣರ್
2 B & C ಮುಂಕು.
3 C ಜನಮಂ.

ಕಂ ॥ ಸಂಬೋಧನೆ ದೀರ್ಗ್ಘೋಕ್ತಿಯೊ ।
ೞಂಬಾಗಿರೆ ಬರ್ಕ್ಕುಮದನೆ ಪಲವೆಡೆಗಳೊಳಂ ॥
ದುಂ ಬಲ್ಲವರಿಡದಿ[1]ರ್ಕ್ಕೆಯ ।
ದಂ ಬಾಯುೞಿದೊಳ್ವೊಲ್ಕರಂ ವಿರಸಕ[2]ರಂ ॥ 21

ನೃಪತೀ ಪರೋಪಕಾರೀ ।
ವಿಪುಳಗುಣೀ ವಿಶದಶಶಧರಾಯತಕೀರ್ತ್ತೀ ॥
ವ್ಯಪಗತಭಯಾ ದಯಾಲೂ ।
ರಿಪುವರ್ಗ್ಗಮನಲೆದು ಗೆಲ್ವೆಯಾಗಾಹವದೊಳ್ ॥ 22

ಅಱಿಪಿದವರುಂ ವಿಭೀತರು ।
ಮ[3]ೞಿಲ್ದರುಂ ಸಲೆ ವಿಯೋಗದಿಂ ನಿಜಜನದಿಂ ॥
ಕಱಿಯ ವ[4]ರಾರ್ತ್ತಿಗಳುಂ ಬಾ ।
ಯೞಿದೂ[5]ಳ್ಗಿಂತಿದನೆಯುಕ್ತಪುನರುಕ್ತಿಕಮಂ ॥ 23

ಪುಲಿಪುಲಿ ಪರಿಪರಿ ಪೋಪೋ ।
ಗೆಲೆಯಲೆ ಪೆಱಪಿಂಗುಪಿಂಗು ನಿಲ್ ನಿಲ್ ಬಾಬಾ ॥
ಬ[6]ಲಿಮನವಮನಂಜದಂಜದೆ ।
ತೊಲತೊಲಗೀ ಮೆಳೆಗೆ ಪುಲಿಯದೆಂಬುದು ಮಾರ್ಗ್ಗಂ ॥ 24

ರೂಪಕದೊಳಂ ವಿಶೇಷಾ ।
ೞಾಪೋದ್ದೇಶದೊಳಮಲ್ಲದುೞಿದೆಡೆಗಳೊಳಂ ॥
ಚಾಪಳಮತಿಗಳ್ ವಿರಸನ ।
ಮೀಪಮನಿಡದಿರ್ಕ್ಕೆ ಬಹುವಿಶೇಷಣಗಣಮಂ ॥ 25

ಸುಭಟರ್ಕ್ಕಳ್ಕವಿಗಳ್ಸ ।
ಪ್ರಭುಗಳ್ಬಲ್ಲರ್ಕ್ಕಳ[7]ಭಿಜನರ್ಕ್ಕಳ್ಗುಣಿಗಳ್ ॥
ಅಭಿಮಾನಿಗಳತ್ಯುಗ್ರ ।
ಗ್ಗಂಭೀರಚಿತ್ತರ್ವ್ವಿವೇಕಿಗಳ್ನಾಡವರ್ಗಳ್ ॥ 26

1 C ದಿರ್ಕ್ಕಿದಂ.
2 C ಕರಂ.
3 C ಮಱಲ್ವರು.
4 C ಪರಾರ್ತ್ತಿ.
5 C ದೂೞ್ದಂ.
6 C ಪುಲಿಮನ.
7 B ಳಭಿನವ.

ಕಂ॥ ಅಂತಧಿಕವಿಶೇಷಣಗು(ಗ)ಣ ।
ಮಂ ತಡೆಯದೆ ಪೇೞ್ವೊಡಂಕ...ಚಾರಣೆಗಳಂ ॥
ಸಂತಂ ಪೇ[1]ೞ್ಗುೞಿದಾವೆಡೆ ।
ಯಂತರದೊಳಮಾಗದೆಂದನತಿಶಯಧವಳಂ ॥ 27

ನುತಶಬ್ದಾಲಂಕಾರದೊ ।
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ ॥
ಕೃತಕೃತ್ಯಮಲ್ಲವಲ್ಲಭ ।
ಮತದಿಂದದಱ ಪ್ರಪಂಚಮೀ ತೆಱನಕ್ಕುಂ ॥ 28

ವಿನುತಪ್ರಾಸಂ ಶಾಂತೋ ।
ಪನತಂ ವರ್ಗೋದಿತಂ ಸಮೀಪಗತಂ ಮ ॥
ತ್ತನುಗತಮುಂ[2]ತಗತಂ ಸಂ ।
ಜನಿತವಿಭೇದೋಕ್ತಿಯಿಂದಮಿಂತಾಱು ತೆಱಂ ॥ 29

ಪಾದದೊಳೆರಡನೆಯಕ್ಕರ ।
ಮಾದರದಿಂದಾದುದಾವುದದನಱಿದನಿತುಂ ॥
ಪಾದದೊಳಿಡುವುದದಕ್ಕುಂ ।
ಭೇದೋಕ್ತಿಕ್ರಮವಿಚಾರಿತೋರುಪ್ರಾಸಂ ॥ 30

ಮನೆಗಿಂದು ಬರ್ಕ್ಕುಮೆಂದಾ ।
ನನೇಕತರವಸ್ತುವಾಹನಾದಿಯನೊಸೆದಿಂ ॥
ಬನೆ ಪಸರಿಸಿ ಕುಡಲಿರ್ದ್ದಂ ।
ಜನೇಶನಿಂ[3]ತೇಕೆ ಕಱದು ಪೋದನೊ ಪೇೞಿಂ ॥ 31

ಎಂಬುದು ವಿನುತಪ್ರಾಸಂ ।
ಸಂಬಂಧಾಕ್ಷರದೊಳೆಲ್ಲಮಾತ್ರೆಗಳುಂ ತ ॥
ೞ್ತಂಬಾಗಿ ಬೆರಸಿ ಶೋಭಾ ।
ಡಂಬರಮಂ ಪಡೆಗುಮುಚಿತಕಾವ್ಯೋಕ್ತಿಗಳೊಳ್ ॥ 32

ಕಂ॥ ಬೆರಸಿರೆ ಮುಂ ಸಂಯೋಗಾ ।
ಕ್ಷರಂಗಳೇಕಸ್ವರಂಗಳಿಂ ಸುಪ್ರಾಸಂ ॥

1 C ಪೇಳ್ದು.
2 C ಮತ್ತಂತಗತಂ.
3 C ನಿಂದೇಕೆ.

ನೆರೆದು ವಿಪರ್ಯಾಸಕ್ರ[1]ಮ ।
ದಿರೆ ಸತತಂ ಶಾಂತಪೂರ್ವಮಕ್ಕುಂ ಪ್ರಾಸಂ ॥ 33

ಪತ್ತಿಪ್ರಮಾದಫಲಕಮ ।
ನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್ ॥
ಮತ್ತೀ ರತ್ನಾಕರದೊಳ್ ।
ಪುತ್ರಿಕೆಯೆನೆ ಬಿ[2]ೞ್ದಿಂತು ಬಾ[3]ೞ್ದುದೆ ಚೋದ್ಯಂ ॥ 34

ಶಾಂತಪ್ರಾಸದ ಭೇದಮ ।
ದಿಂತಕ್ಕುಂ ವರ್ಗದಕ್ಕರಂಗಳ್ನಾಲ್ಕುಂ ॥
ಸಂತಮಿರೆ ಪೇ[4]ೞ್ದ ತಾಣದೊ ।
ಳಂತಕ್ಕುಂ ಪ್ರಾಕ್ತನೋಕ್ತವರ್ಗಪ್ರಾಸಂ ॥ 35

ಸಕಲಜನವಿನುತನಂ ಶತ ।
ಮಖಸದೃಶವಿಶಾಲವಿವಿಧವಿಭವೋದಯನಂ ॥
ಪ್ರಗತಗುಣಗಣನನರಿಬಲ ।
ವಿಘಟನನಂ ಕಂಡನಣುವನಾ ರಾಘವನಂ ॥ 36

ಇದು ದಲ್ವರ್ಗಪ್ರಾಸ ।
ಕ್ಕುದಾಹೃತಂ ಕೂಱಿತು ಶಷಸವರ್ಣತ್ರಯಮುಂ ॥
ವಿದಿತಪ್ರಾಸವಿವಿಕ್ತಾ ।
ಸ್ಪದದೊಳ್ನೆ ಪೇ[5]ೞ್ವೊಡದು ಸಮೀಪಪ್ರಾಸಂ ॥ 37

ಶಶಧರಬಿಂಬಾನನೆಯಂ ।
ಝಷಕೇತನಕೇತನಾಭತ[6]ನುತನುವಂ ತಾಂ ॥
ಬಿಸವಿಶದವರ್ಣೆಯಂ ಕಂ ।
ಡೊಸೆದಂ ಬನದೊಳಗೆ ಜನಕತನಯಳನಣುವಂ ॥ 38

ಎಂದಿಂತು ಸಮೀಪಪ್ರಾ ।
ಸಂ ದರ್ಶಿತಭೇದಮಾಯ್ತನುಪ್ರಾಸಮುಮಂ ॥
ಸಂದಿಸಿದೆ[7]ಣೆಯಕ್ಕರಮೊಂ ।
ದೊಂದಱೊಳಳವಡಿಸಿ ಬಂದೊಡನುಗತಮಕ್ಕುಂ ॥ 39

1 C ಕ್ರಮಮಿರೆ.
2 C ಬಿಳ್ದು.
3 C ಬಾಳ್ದು.
4 C ಪೇಳ್ದ.
5 C ಪೇಳ್ವೊಡ.
6 B ಕರಲೋಚನೆಯಂ.
7 C ಯೆಣೆ.

ಕಂ॥ ಜನವಿನುತನನಘನನುಪಮ ।
ನನುನಯಪರನರಸನಿನಿಸು ನೆನೆನೆನೆದು ಮನೋ ॥
ಜನಿತಮುದನನಿಲತನಯನ ।
ನನೃತವಚನಪ್ರಪಂಚನಿಂತಿರೆ ನುಡಿದಂ ॥ 40

ಇಂತಿದನುಪ್ರಾಸಂ ಪಾ ।
ದಾಂತದೊಳೊಂದಾವುದಾನುಮಿಟ್ಟಕ್ಕರಮಂ ॥
ಮುಂತಣ ಪಾದಾಂತಂಗಳೊ ।
ಳುಂ ತಡೆಯದೆ ಪೇೞ್ದೊಡಂ ತದಂತಪ್ರಾಸಂ ॥ 41

ಅತಿವಿಶದಯಶೋವೃತ್ತಂ ।
ನತಸಕಳಾರಾತಿಜನವಿತಾನಂ ಮತ್ತಂ ॥
ವಿತತಶ್ರೀಸಂಪತ್ತಂ ।
ಸ[1]ತತಂ ನೃಪತುಂಗದೇವನೊಲವಿಂ ಪೊ[2]ತ್ತಂ ॥ 42

ಪ್ರಾಸಾನುಪ್ರಾಸಾಂತ ।
ಪ್ರಾಸಂಗಳ್ನೆಱೆಯುಮತಿಶಯಂಗಳ್ಪ್ರಾಸಾ ॥
ಭಾಸಂಗಳುೞಿದ ಮೂಱುಂ ।
ಭಾಸುರನೃಪತುಂಗದೇವವಿದಿತಕ್ರಮದಿಂ ॥ 43

ಗೀತಿಕೆ॥ ಅಱಿದು ಪೀನಂ ಮಾರ್ಗಗ[3]ತಿಯಂ ।
ತಱಿಸಲಾಗದಾರ್ಗಂ ಬಹುವಿಕಲ್ಪದೊಳ್ ॥
ಕುಱಿತು ಪೂರ್ವಶಾಸ್ತ್ರಪ[4]ದವಿಯಂ ।
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ ॥ 44

ಕಂ॥ ಕರಚರಣಶರೀರಶಿರೋ ।
ಧರವದನಾದ್ಯವಯವಂಗಳಿವು ತಂತಂಮೊಳ್ ॥
ದೊರೆಕೊಂಡಡೆಗಳೊಳೊಳವಾ ।
ಗಿರೆಯುಂ ನರರೊರ್ವರೊರ್ವರಂ ಪೋಲದವೋಲ್ ॥ 45

ವರಶಬ್ದಾಲಂಕಾರದ ।
ವಿರಚನೆಗಳ್ನೋೞ್ಪೊಡೊಂದೆ ತೋರ್ಕೆಗಳಿಂತುಂ ।
ಪೊರೆದಿ[5]ರಲೊಂದೊಂದಱೊಳಾ ।
ಪರಮಕವೀಶಪ್ರಯೋಗಗತಮಾರ್ಗಂಗಳ್ ॥ 46

1 C ಶತಮಖಸದೃಶಾನುಭಾವಪದಮಂಪೆತ್ತಂ.
2 B ಪೆತ್ತಂ.
3 A & C ಗತಿಯಿಂ.
4 A & C ಪದವಿಧಿಯಂ.
5 B ದಿರೆಯೊಂ.

ಕಂ॥ ಕವಿಗಳುಮನಾದಿಲೋಕೋ ।
ದ್ಭವರಪ್ಪುದಱಿಂದನಂತಗಣನಾನುಗತಂ ॥
ಸವಿಶೇಷೋಕ್ತಿಗಳುಮನಂ ।
ತವಿಧಂಗಳನಂತಭೇದವದಱಿಂ [1]ಮಾರ್ಗಂ ॥ 47

ಜನಿತವಿಭಾಗಂಗಳ್ವಾ ।
ಙ್ಮನಸಾತೀತಂಗಳಿಂತು ಮಾರ್ಗೋಕ್ತಿಗಳೊಳ್ ॥
ನೆನೆದಱಿಪಲಾಪ್ಪರಾರದ ।
ನನಿಶ್ಚಿತಕ್ರಮವಿಶೇಷಗುಣಯುಕ್ತಕಮಂ ॥ 48

ಅಂತುಂ[2]ಭೇದಮನಿನಿಸಾ ।
ರ್ಪಂತುತ್ತರದಕ್ಷಿಣೋರುಮಾರ್ಗದ್ವಯದಾ ॥
ಚಿಂತಿ[3]ತಪುರಾಣಕವಿವಿದಿ ।
ತಾಂತರಮಂ ಪೇೞ್ವೆನಱಿವಮಾೞ್ಕೆಯೊಳೆನ್ನಾ ॥ 49

ನಿಗದಿತಕಾವ್ಯೋಕ್ತಿಗಳೊ ।
ಳ್ನೆಗೞ್ದುವು ಮಾರ್ಗಂಗಳಿಂತುಮೆರಡುಕ್ತಿಗಳುಂ ॥
ಬಗೆವಾಗಳೆರಡು ಮಾೞ್ಕೆಯೊ ।
ಳೊಗೆದುವು ವಕ್ರಸ್ವಭಾವನಿಯತಿಕ್ರಮದಿಂ ॥ 50

ಸತತಂ ದಕ್ಷಿಣಮಾರ್ಗೋ ।
ದಿತೋಕ್ತಿಭೇದಕಗುಣಂಸ್ವಭಾವಾಖ್ಯಾನಂ ॥
ವಿದಿತೋತ್ತರಮಾರ್ಗಗತಂ ।
ಪ್ರತೀತವಕ್ರೋಕ್ತಿಕೃತಮನಲ್ಪವಿಕಲ್ಪಂ ॥ 51

ಸಮಮಧುರನಿಬಿಡಕಾಂತಸು ।
ಕುಮಾರಸುಸಮಾಹಿತಪ್ರಸನ್ನೋದಾರ ॥
ಪ್ರಮಿತಗ್ರಾಮ್ಯೋಜಸ್ವಿ ।
ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ॥ 52

ಅವಱ ವಿಪರ್ಯಯವೃತ್ತಿ ।
ಪ್ರವಿಭಕ್ತವಿಕಲ್ಪಮಕ್ಕು ಮುತ್ತರಮಾರ್ಗಂ ॥
ಸವಿಶೇಷಗುಣಮನತಿಶಯ ।
ಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್ ॥ 53

1 A & C ಮಾತುಂ.
2 B ಎಂತುಂ.
3 B ಚಿಂತಿಸಿ.

ಕಂ || ಸಮಬಂಧಮೆಂಬುದಕ್ಕುಂ |
ಸಮನಿಸಿ ಕಿವಿಗೆಡಱಿ ಬಾರದಾದಂ[1]ಮುಟ್ಟಿಂ ||
ಸಮೆದ್ಧಪದದಾ ವಿಭೇದ |
ಕ್ರಮಮೆರಡಕ್ಕುಂ ಮೃದುಸ್ಫುಟೋಕ್ತಿಯಿನ[2]ದಱಿಂ || 54

ಮೃದುತರವರ್ಣ್ಣಾನುಗಮಾ |
ಸ್ಪದವಿರಚನೆಯೊಳಗೆ ತೋರ್ಪ್ಪುದದುಮೃದುಬಂಧಂ ||
ವಿದಿತಸ್ಫುಟಾಕ್ಷರಾಧಿಕ |
ಪದವಿರಚಿತಮುಸ್ಪ್ರದಕ್ಕುಮಾ ಸ್ಫುಟಬಂಧಂ || 55

ದೊರೆಕೊಳೆ ನೋಡಿದನಾಯತ |
ಕರು[3]ಣಾಪಾಂಗದೊಳೆ ಲೋಲಲೋಚನಯುಗೆಯಂ ||
ಗುರುಜಘನಪಯೋಧರಯುಗ |
ಭರವಿಧುರೆಯನಾ ಧರಾಧಿಪತಿ ವಿಧುಮುಖಿಯಂ || 56

ಇಂತಿದು ಸಮಬಂಧದ್ವಿತ |
ಯಾಂತರಮಾ ವಿಷಮಬಂಧಮಿಂನಿಂತಕ್ಕುಂ ||
ಚಿಂತ್ಯೈಕಸುಖಾಕ್ರಾಂತ |
ಸ್ವರ್ಂತುಷ್ಟೈಕಕಾ[4]ಗ್ರಚಿತ್ತರಾದರ್ತ್ತಂವೊಳ್ || 57

ಸವಿಪೊಡೆ ಮಧುರರಸಂಬೊ |
ಲ್ಕಿವಿಗಿನಿದಾಗಿರ್ಪ್ಪವಚನವಿರಚನೆ ಮಧುರಂ ||
ಸವಿಳಾಸಾಳಾಪದಿನವ |
ಱ ವಿಶೇಷವಿಶೇಷ್ಯಮಂತು ಮಾರ್ಗ್ಗದ್ವಯದೊಳ್ || 58

ದೆಸೆಗಳ್ವಿಶಾಲಮಾದುವು |
ಕೆಸಱಿಂ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್ ||
ಶ್ವಸನಪಥಮಮಳಮಾಯ್ತಿಂ |
ದೊಸೆಗೆಗಳಂ ಬೀಱುವಂತೆ ಶರದಾಗಮದೊಳ್ || 59

ಇದು ದಕ್ಷಿಣಮಾರ್ಗ್ಗವಿಭೇ |
ದದ ಮಧುರರಸಪ್ರಯೋಗಮಾಚಾರ್ಯ್ಯಮನೋ ||
ಮುದಿತವಿತಾನಂ ವಿದಿತಾ |
ಸ್ಪದಮುತ್ತರಮಾರ್ಗ್ಗವರ್ಗ್ಗಮಧುರಾಳಾಪಂ || 60

1 A & C ದಾನಂಮುಟ್ಟಂ.
2 B ಅದರಾ.
3 B ತರಳಾ.
4 B ಕಾಂತ.

ಕಂ || ಧವಳಜಲಧರಕುಲಾಕುಲ |
ಮವಿಕಳಮಂಬರತಳಂ ವಿನೀಲಚ್ಛಾಯಂ ||
ಕುವಲಯಕೀರ್ತ್ತಿಗೆ ಶಾರದ |
ಮವಧೀ[1]ರಿತಮಾಯ್ತುದೆಂಬುದುತ್ತರಮಾರ್ಗ್ಗಂ || 61

ಮಿಗೆ ನಿಬಿಡಬಂಧಮೆಂಬುದು |
ತಗುಳ್ವುವು ವರ್ಣ್ಣಂಗಳಗಲದಿರೆ ಮತ್ತಕ್ಕುಂ ||
ನೆಗೞ್ದಲ್ಪಪ್ರಾಣಾಕ್ಷರ |
ನಿಗದಿತಮೇತದ್ವಿಪರ್ಯ್ಯಯೋಕ್ತಂ ಶಿಥಿಲಂ || 62

ಅರವಿಂದೋತ್ಪಲಪುಷ್ಪೋ |
ತ್ಕರಂಗಳೊಳ್ಪಾಯ್ದು ಮುದ್ಭ್ರಮದ್ಭ್ರಮರಂಗಳ್ ||
ವಿರತಮುದವಾದುವುರುಮದ |
ವಿರಾಮವನಕರಿಕಪೋಲಫಲಕದೊಳಾಗಳ್ || 63

ಇದು ನಿಬಿಡಶಿಥಿಲಬಂಧಾ |
ಸ್ಪದಮಾರ್ಗ್ಗದ್ವಿತಯಗದಿತಲಕ್ಷ್ಯವಿಭಾಗಂ ||
ಸದಭಿಕಮನೀಯಗುಣಮ |
ಪ್ಪುದು ನಿಯತಂ ಕಾಂತಮೆಂಬುದಭಿಗೀತಾರ್ತ್ಥಂ || 64

ದಿನಕರಕರನಿಕರಂಗ |
ಳ್ಘನವಿವರಪ್ರಸರಮಾಗಿಯುಂ ತಂಮೆಂ ಕಂ ||
ಡನಿತಱೊಳೆ ತೆರಳ್ದಂನಾ |
ಮನೋಗತಧ್ವಾಂತಬಂಧಮಳಱಿತ್ತೆಲ್ಲಂ || 65

ಇಂತಿದು ದಕ್ಷಿಣಮಾರ್ಗ್ಗದ |
ಕಾಂತಮು[2]ಸಂಭಾವಿತಾರ್ತ್ಥಮುದ್ದಾಮೋಕ್ತಂ ||
ಸಂತತಮುತ್ತರಮಾರ್ಗ್ಗಗ |
ತಾಂತರಮದನಿಂತು ಕುಱಿತು ತಱಿಸಲ್ಗೆ ಬುಧರ್ || 66

ವಿಲಸಿತಭವದಭ್ಯಾಗಮ |
ಜಲಧಾರೆಗಳೇನುಮುಱಿಯದಂತು ಮದಂತ ||
ರ್ಮ್ಮಲಮಂ ಕರ್ಚ್ಚಿದೊಡಾನೀ |
ನೆಲಕೆಲ್ಲಂ ಪಾವನೀಯಚರಿತನೆ ಆದೆಂ || 67

1 C ಧಾರಿತ.
2 A & C ಸಮಂ.

ಕಂ ॥ ಸುಕುಮಾರತರಾಕ್ಷರಪದ ।
ನಿಕತವಿಶಿಷ್ಟಪ್ರಯೋಗಗತಮಪ್ಪುದದಾ ॥
ಸುಕುಮಾರಮೆಂಬುದಕ್ಕುಂ ।
ಪ್ರಕಟಿತಮದಱ ಪ್ರಯೋಗಮೀ ತೆಱನಕ್ಕುಂ ॥ 68

ತೊಳಪೆಳವೆಱೆಯುಂ ಮೊರೆವಳಿ ।
ಕುಳಂಗಳುಂ ಮೆಲ್ಲನೆಸಪ ಮಲಯಾನಿಲನುಂ ॥
ಮುೞಿಸಂ ಕಱಲ್ಚಿ ಕಳೆದುವು ।
ಕಳಿಕಾಂಕುರಚೂತತತಿಗಳುಂ ಕಾಮಿಗಳಾ ॥ 69

ಇದಱ ವಿಪರ್ಯ್ಯಯವಿವಿಧಾ ।
ಸ್ಪದಾಕ್ಷರವಿಕಲ್ಪಮಿಂತಿದುತ್ತರಮಾರ್ಗ್ಗಂ ॥
ತ್ರಿದಶಾಧೀಶ್ವರಭೂತ್ಯ ।
ತ್ಯುದಾರವಿವಿಧಾರ್ತ್ಥವಿಭವನೀ ಭೂಪೇಂದ್ರಂ ॥ 70

ಬಂದಱ ಮಾತುಗಳಂ ಪೆಱ ।
ತೊಂದಱೊಳಱಿದಿಟ್ಟುಕೂ[1]ಡೆ ಪೇೞ್ದೊಡದಕ್ಕುಂ ॥
ಸುಂದರತರಂ ಸಮಾಹಿತ ।
ಮೆಂದುಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ ॥ 71

ವಿನಿಮೀಳಿತಕುಮುದವನಂ ।
ಜನಿತೋನ್ಮೀಲಾರವಿಂದವನಲಕ್ಷ್ಮೀಶಂ ॥
ದಿನಕರನುದಯಂ ಗೆಯ್ದಂ ।
ವಿನಿಹತತಿಮಿರಂ ವಿಶಿಷ್ಟಸಂಧ್ಯಾಶ್ಲೇಷಂ ॥ 72

ವಿನಿಮೀಳಾದಿಗಳಿವು ಲೋ ।
ಚನಾದಿಧರ್ಮ್ಮಂಗಳಿವನೆ ಕುಮುದಾದಿಗಳೊ ॥
ಳ್ನೆನೆದಿಂತು ಪೇೞ್ದೊಡಕ್ಕುಂ ।
ವಿನಿಶ್ಚಿತಕ್ರಮಸಮಾಹಿತಾಲಂಕಾರಂ ॥ 73

ವಿನಿಹತಸಮಸ್ತರಿಪುಕುಳ ।
ನನಿಮಿಷಲೋಚನಮೆ ನೋಡಿ ನೀಡುಂ ಪ್ರಿಯೆಯುಂ ॥
ವಿನಿಮೀಳಿತಲೋಚನೆಯುಂ ।
ಜನಪತಿ ನಿಜಬಾಹುಯುಗದಿನಾಶ್ಲೇಷಿಸಿದಂ ॥ 74

1 C ಕೂಱಿ.

ಕಂ ॥ ಈ ಕುಱಿಪುಗಳಿಂದಱಿವುದ ।
ನೇಕಸಮಾಹಿತಪದಪ್ರಯೋಗಾಂತರಮುಂ ॥
ಲೋಕಪ್ರತೀತಸುಭಗವಿ ।
ವೇಕಾಳಾಪಂ ಪ್ರಸನ್ನಮದುಮಿಂತಕ್ಕುಂ ॥ 75

ಶರದಮಲಾಂಬರದೊಳ್ ಹಿಮ ।
ಕರನೆಸೆದತ್ತೆಂಬುದಾ ಪ್ರಸನ್ನಮಿದಕ್ಕುಂ ॥
ಕರಮೊಪ್ಪಿತ್ತುಷ್ಣೇತರ ।
ಕಿರಣಂ ವರ್ಷಾಂತಸಮಯಜಳಧರಪಥದೊಳ್ ॥ 76

ಮಿಗೆ ವಸ್ತುಗತಸ್ಥಿತಿಯಂ ।
ಬಗೆದಗ್ಗಳಮಾ[1]ಗೆ ಪೇೞ್ದೊಡಕ್ಕುಮುದಾರಂ ॥
ಬಗೆವೊಡೆ ಕಾವ್ಯದ ಪದವಿಯ ।
ನೆಗೞ್ತೆಗದು ಮೂಲಮದಱ ಪಾಂಗಿಂತಕ್ಕುಂ ॥ 77

ಪುರುಷೋತ್ತಮರಾರ್ನ್ನಿಂನಂ ।
ನರುದಾರಾರಾತಿಸಮಿತಿಯಂ ಕೊಂದಿರ್ದ್ದಂ ॥
ಸುರಸುಂದರಿ ಲೀಲಾಲಸ ।
ಪರಿರಂಭಾರಂಭಸುರತಸುಖದೊಳ್ ನಿ[2]ಱಿಪರ ॥ 78

ಇದು ದಾಕ್ಷಿಣಾತ್ಯಕವಿಮಾ ।
ರ್ಗ್ಗದುದಾರಮು[3]ದೀಚ್ಯದುರುವಿಶೇಷಣಯುತಮ ॥
ಪ್ಪುದನೊ[4]ಲ್ವರಿಂತು ಹೇಮಾಂ ।
ಗದಲೀ[5]ಲಾಂಬುಜವಿಚಿತ್ರಚಿತ್ರಾಧಿಕಮುಂ ॥ 79

ಗೋಪಾಳಬಾಳಲಲನಾ ।
ಚಾಪಳವಾಚಾಲಕಿತವಬಾಹ್ಲೀಕಾದಿ ॥
ವ್ಯಾಪಾರಂಗಳ್ ಗ್ರಾಮ್ಯಾ ।
ಳಾಪಂಗಳ್ ಮಾರ್ಗ್ಗಯುಗಳಪರಿಹಾರ್ಯ್ಯಂಗಳ್ ॥ 80

ನೆನೆದಿರುಳುಂ ಪಗಲುಂ ನಿಂ ।
ನನೆ ಪೀನಮೊಱಲ್ದು ಮಱುಗಿ ಕಾತರಿಸುತ್ತುಂ ॥
ಮನದೊಳ್ಸೈರಿಸಲಾಱೆಂ ।
ನಿನಗೆ[6]ನಸುಂ ಕರುಣಮಿಲ್ಲಮರಮಾನಿಸನೈ ॥ 81

1 C & B ಮಾಗಿ.
2 C ನಿಲಿಪರ್.
3 C ಮುದೀಚ್ಯರುರು.
4 C ನೊಲ್ದರಿಂ.
5 B ನೀಲಾಂಬುಜ.
6 C ಗಿನಿಸುಂ.

ಕಂ ॥ ಎಂದಿಂ[1]ತೀ ಗ್ರಾಮ್ಯೋಕ್ತಿಯೊ ।
ಳೊಂದಾಗಿಸದದನೆ ಪೇೞ್ವುದಿಂತೀ ಸ್ಥಿತಿಯೊ ॥
ಳ್ಕಂದರ್ಪ್ಪಂ ಚಲದೆಂನೊ ।
ಳ್ನಂದಂ ಮು[2]ನಿಸಿಲ್ಲ ನಿಂನೊಳ್ಳಾತಂಗಿನಿಸುಂ ॥ 82

ಸಮಱಿ ಸಮಾಸಪದಂಗಳ ।
ನಮರ್ದಿರೆ ಸಯ್ತಾಗಿ ಬಗೆದು ಪೇೞ್ದೊಡದಕ್ಕುಂ ॥
ಕ್ರಮದೋಜೋಲಕ್ಷಣಮು ।
ತ್ತಮಮಿದು ಗದ್ಯಕ್ಕಲಂಕ್ರಿ[3]ಯಾನುಸಮೇತಂ ॥ 83

ಮಿಗೆ ಪದ್ಯದೊಳಂ ಗುಣಮಂ ।
ತಗುಳ್ಚುಗೆ ಸಮಹಿತಪ್ರಯೋಗಾನುಗತಂ ॥
ಸೊಗಯಿಸುವಂತಿರೆ ಬಗೆದಿದ ।
ನಗಾಧಮನರಿದುಗೆ ಕೃತಿಯೊಳೋಜೋಗುಣಮಂ ॥ 84

ಕಾರಕಮುಂ ಕ್ರಿಯೆಯುಮನಱಿ ।
ದೋರಂತಿರೆ ಮುಂತಗುಳ್ಚಿ ಮುಕ್ತಕಪದದೊಳ್ ॥
ಸ್ಸಾರಂ ಸಮಾಸಪದದು ।
ಚ್ಚಾರಣೆಯಂ ನೀಳ್ದು ನಿಲೆ ತಗುಳ್ಚುಗೆ ಕೃತಿಯೊಳ್ ॥ 85

ಮೊದಲೊಳ್ಸಮಾಸಪದಮುಮ ।
ನೊದವಿಸಿ ಪೇೞ್ದದಱ ತುದಿಯೊಳಸಮಾಸಪದಾ ॥
ಸ್ಪದಮಾಗಿ ನಿ[4]ಱಿಸೆ ಕಬ್ಬಿನ ।
ತುದಿಯಂತಿರೆ ವಿರಸಮಕ್ಕುಮದು ತೊದಳುಂಟೇ ॥ 86

ಪರಮಾನುಭಾವಭಾಸುರ ।
ಸುರರಾಜೋಪಮಿತವಿವಿಧವಿಭವೋದಯನಂ ॥
ನರಪತಿಯಂ ಕಪಿಪೃತನಾ ।
ಪರಿವೃತನಂ ಜಲಧಿತಟದೊಳಣುವಂ ಕಂಡಂ ॥ 87

ಎಂದಿಂತು ಪೇೞ್ದ ಮಾೞ್ಕೆಯೊ ।
ಳೊಂದುವುದೋಜಸ್ವಿತಾಗುಣಂ ಕೈಕೊಳೆಯುಂ ॥
ಸುಂದರಮಾಗದು ಕೆವಿಪದ ।
ಮೆಂದುಂ ವ್ಯತ್ಯಯದಿನಿಡುವೊಡದು ಸುಕರತರಂ ॥ 88

1 C ದಿಂತೆ.
2 C ಮುನಿಸೆಲ್ಲಿ.
3 C ಕ್ರಿಯಾತ್ಮ.
4 C ನಿಲಿಸೆ.

ಕಂ ॥ ನರಪತಿಯಂ ಕಪಿಪೃತನಾ ।
ಪರಿವೃತನಂ ಜಲಧಿತಟದೊಳಣುವಂ ಕಂಡಂ ॥
ಪರಮಾನುಭಾವಭಾಸುರ ।
ಸುರರಾಜೋಪಮಿತವಿವಿಧವಿಭವೋದಯನಂ ॥ 89

ಬೆರಸಿರೆ ಸಮಾಸದೊಳ್ ಬಂ ।
ಧುರಮಾಗದು ಕಾವ್ಯಬಂಧಮೆಂದುಂ ಕೃತಿಯೊಳ್ ॥
ದೊರೆಕೊಳ್ವಪದವಿಶೇಷ್ಯಾಂ ।
ತರಮದಱಿಂ ವ್ಯಸ್ತಮಾಗಿ ಪೇೞ್ಗಿದನೆಂದುಂ ॥ 90

ಪರಿದೆಯ್ದಿತಾಗಿದಂ ಭಾ ।
ಸುರತರರಘುಕುಲಲಲಾಮಲಕ್ಷ್ಮೀಧರನೊಳ್ ॥
ಪರಿಕೋಪವಿಧೃತವಿಸ್ಫುರ ।
ದುರುರಕ್ತಕಠೋರನಯನಯುತದಶವದನಂ ॥ 91

ಇಂತು ವಿಶೇಷ್ಯಕ್ರಿಯೆಯುಂ ।
ಸಂತಂ ನೋೞ್ಪುದಱಿನಕ್ಕುಮದು ಸಾಪೇಕ್ಷಂ ॥
ಚಿಂ[1]ತಿಸೆ ಸಮಾಸಮಂ ಪೇ ।
ೞ್ವಂತಪ್ಪ ಪದಂ ಸಮರ್ತ್ಥಮಲ್ತಪ್ಪುದಱಿಂ ॥ 92

ಸ[2]ಮನಿಸೆ ಸಾಪೇಕ್ಷಮುಮಾ ।
ಸಮಾಸಮುಂ ಪೆಱಗುಮೆಲ್ಲಿಯಾನುಂ ಗಮಕಂ ॥
ಕ್ರಮಮುದಱೊಳೆಲ್ಲಮೆನಲಿನಿ ।
ತು ಮಾರ್ಗ್ಗದೊಳ್ಸಮಱುಗಿಂತು ಕವಿವೃಷಭರ್ಕ್ಕಳ್ ॥ 93

ಪರಿದೆಯ್ದಿತಾಗಿದಂ ಭಾ ।
ಸುರತರರಘುಕುಲಲಲಾಮನೊಳ್ ಲಕ್ಷ್ಮಣನೊಳ್ ॥
ಪರಿಕೋಪವಶಭ್ರಮಣೋ ।
ದ್ಧುರರಕ್ತಕಠೋರಲೋಚನಂ ದಶವದನಂ ॥ 94

ಇಂತಿರೆ ಮಾರ್ಗ್ಗದ್ವಿತಯಗ ।
ತಾಂತರಮಂ ಪೇ[3]ೞ್ದೆನೆಲ್ಲಿಯುಂ ಕ್ಷೀರಗುಡಾ ॥
ದ್ಯಂತರರಸಾಂತರಂ ಜಾ ।
ತ್ಯಂತರಮಪ್ಪಂತೆನಂತಮಂತರ್ಭೇದಂ ॥ 95

1 C ಚಿಂತಿಸಿ.
2 C ನಮನಿಸಿ.
3 C ಪೇಳ್ವ.

ಗೀತಿಕೆ॥ಬಗೆದು ಮಾರ್ಗದ್ವಿತಯಗ |
ತಿಗಳಂ ಪ್ರಗುಣಗುಣಗಣೋದಯಕ್ಕಲ್ಪಿತಕ್ಕರದಿಂ ||
ಸೊಗಯಿಸುವಂತು ವಚನರಚನೆಯಿಂ |
ನೆಗೞ್ದಿರೆ ಬೆರಸಿ ಪೇೞ್ವೆ ರಸವಿಶೇಷದೊಳ್ || 96

ವೃ॥ ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ |
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ ಶೃಂ ||
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂ |
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ || 97

ಉತ್ಸವದಿಂದೆ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆ ಬೀ |
ಭತ್ಸ ರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ ||
ದ್ಯತ್ಸರಸಂ ಕರಂ ವಿಷಮಬಂಧನದಿಂ ನೃಪತುಂಗದೇವಮಾ |
ರ್ಗೋತ್ಸವಮೂರ್ಜಿತೋಕ್ತಿಗಳಿನಕ್ಕೆ ತಿರೌದ್ರರಸಂ ರಸಾವಹಂ || 98

ಮಾತುಗಳಾವುವಾನುಮುಪವರ್ಣಿತಮಾರ್ಗಯುತಪ್ರಯೋಗಸಂ |
ಜಾತವಿಭಾಗದಿಂ ನೆಗೞ್ದ ಕನ್ನಡದೊಳ್ಗುಣಮಂ ತಗುಳ್ಚುಗುಂ ||
ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯನಿ |
ರ್ಣೀತೆಯನೀ ತೆಱತ್ತು ತಱಿಸಲ್ಕೆ ಬುಧೋತ್ತಮರುಕ್ತಪೂರ್ವಕಂ || 99

ನೋಡುವೆನಾ[1]ಮಹೀಪತಿಯನರ್ಥಿಗು(ಗ)ಣಾರ್ಥಿತಕಲ್ಪವೃಕ್ಷನಂ |
ಪೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ ||
ನೀಡುಮುದಾತ್ತಚಾರುಗುಣನಂ ಮನದೊಳ್ನೆಱೆ ನೋೞ್ಪೆನೞ್ತಿಯೊ |
ಳ್ಕೂಡಿರವೇೞ್ಪೆನೆಂಬುದಿದು ದಕ್ಷಿಣಮಾರ್ಗವಿಚಕ್ಷಣೋದಿತಂ || 100

ಸೂಡುವೆನೆಂಬುದಲ್ಲದಣಮಾಗದು ಸೂೞ್ಪೆನಮೋಘಮೆಂಬುದಂ |
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂೞ್ಪೆನೆಂಬುದಂ ||
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾೞ್ಪೆನೆಂಬುದಂ |
ತೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋೞ್ಪೆನೆಂಬುದಂ || 101

ಬಱಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ |
ತಿಱಿಸುವೆನಂತನಂತಸುಖಸಂ[2]ಗತಮಂಗಳಕಾರಣಂಗಳಂ ||
ತಱಿಸುವೆನಾ ಮನೋನಯನವಲ್ಲಭನೊಳ್ಮನದೊಂದಲಂಪಿನಿಂ |
ನೆರೆವೆನಮೋಘಮೆಂಬುದಿದು ದಕ್ಷಿಣಮಾರ್ಗವಿಶೇಷಭಾಷಿತಂ || 102

1 B ನಾಂ. | 2 B ಸಂಗರ.

ವೃ॥ ಬಱಿಪೆನಮೋಘಮಿಂ[1]ದುಪವನಾಂತರದಲ್ಲಿಗೆ ನಲ್ಲನಂ ತಗು |
ೞ್ದಿಱಿಪೆನನಾರತಂ ಸುರತರಾಗನಿರೂಪಣಕಾರಣಂಗಳಂ ||
ತಱಿಪೆನನಾಕುಳಂ ಮನದಲಂಪಿನೊಳಾ ಮದನೋಪಮಾನನೊ |
ಳ್ನೆರೆವೆನ[2]ಭಂಗದೆಂಬ ವಚನಂಗಳಿವುತ್ತರಮಾರ್ಗವರ್ತಿಗಳ್ || 103

ಅನುಪಮನಂ ಬಱಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕನಂ |
ದನವನದಲ್ಲಿಗಲ್ಲಿಗೆ ತಱಿಪ್ಪೆನನಂಗಸುಖೋಚಿತಂಗಳಾ ||
ನನುನಯದಿಂದಿಱಿಪ್ಪೆನಿನಿತುಂ ಸುರತಾಸವಸೇವನಾಸನಾ |
ತನಸುಖದಿಂದಿಱಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ || 104

ಪರಸುವೆನೆನ್ನದಾಂ ಪರಪೆನೆಂಬುದಿದಾಗದು ಚಿತ್ತನಾಥನೊಳ್ |
ಬೆರಸುವೆನೆನ್ನದಾಂ ಬೆರಪೆನೆಂಬುದಿದಾಗದು ಮಾರ್ಗಯುಗ್ಮದೊಳ್ ||
ನಿರತಿಶಯಾನುಭಾವಭವನಪ್ಪ ಮಹಾನೃಪತುಂಗದೇವನಾ |
ದರದೊಳೆ ಪೇೞ್ದ ಮಾರ್ಗಗ[3]ತಿಯಿಂ ತಱಿಸಲ್ಗಿದನಿಂತೆ ಕಬ್ಬಿಗರ್ || 105

ಮನದೊಳಗಾಗಳುಂ ನಿಱಿಸದಾ ಮುಳಿಸಂ ಗತರಾಗಮೋಹನೊ |
ಯ್ಯನೆ ಮುನಿನಾಥನೆಂಬ ವಚನಾಂತರಮಿಂತಿದು ದಾಕ್ಷಿಣಾತ್ಯಕಂ ||
ಮನದೊಳಗಾಗಳುಂ ನಿಱಿಸದೊಯ್ಯನೆ ಮೋಹಮ[4]ನಂತೆ ರಾಗಮುಂ |
ಮುನಿಸುಮನೊಲ್ಲದಂ ಮುನಿಪನೆಂಬುದಿದಕ್ಕುಮುದೀಚ್ಯವಾಚಕಂ || 106

ತ್ರಿದಶಗಣೇಶಮೌಳಿಮಣಿಪೀಠನಿಷೇವಿಗಳೊಳ್ಮನೀಂದ್ರನಾ |
ಪದಯುಗಳಂಗಳೊಳ್ಮದದೆ ಬಾಗುವೆನೆಂಬುದು ದಕ್ಷಿಣಾಯನಂ ||
ವಿದಿತಸುರಾಧಿರಾಜಮ[5]ಕುಟಾಗ್ರಸಮರ್ಪಿತದೊಳ್ಮನಿಂದ್ರನಾ |
ಪದಯುಗದೊಳ್ಮನೋಮುದದೆ ಬಾಗುವೆನೆಂಬುದಿದುತ್ತರಾಯಣಂ || 107

ವಿಲಸಿತಸಸ್ಯಸಂಪದಭಿರಾಮಗುಣೋದಯೆ ತಾಳ್ದಿದಳ್ಧರಾ |
ಲಲನೆ ವಿಶಾಲಲಕ್ಷ್ಮಿಯನ[6]ನಾರತಮೆಂಬುದು ದಕ್ಷಿಣಾಪಥಂ ||
ಜಲನಿಧಿಮೇಖಲಾವಲಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ |
ಲಲನೆ ವಿಶಾಲಲಕ್ಷ್ಮಿಯನನಾಕುಳಮೆಂಬುದಿದುತ್ತರಾಪಥಂ || 108

ಗೀತಿಕೆ॥ನಿಕ್ಕುವಮಿಂತು ಮಾರ್ಗಯುಗದೊಳ್ |
ತಕ್ಕುದನಱಿಯೆ ಪೇೞ್ದೆನಿನಿಸೊಂದುದ್ದೇಶಮಂ ||

1 B ಮೆಂದು.
2 C & B ನಭಂಗವೆಂಬ.
3 B ಗತಿಯಂ.
4 C ಮದಂತೆ.
5 C ಮಗುಟಾಗ್ರ.
6 C ನನಾಕುಳ.

ಮಿಕ್ಕಗುಣೋದಯಕ್ಕೆಱುವುದೆಂತು ಸ |
ಯ್ತುಕ್ತ್ಯವಿಂ[1]ತಾಗೆ ಬಗೆದು ಪೇೞ್ಗೆಕಬ್ಬದೊಳ್ ॥ 109

ಮಿಕ್ಕಶಬ್ದಾಲಂಕಾರಮುಕ್ಕುಂ ದುಷ್ಕರಂ
ಶ್ಲೋ ॥ . . . . . ಮು[2]ಸಯಮಕಂ ಪ್ರೇ[3]ಮದಿಂ ಗೋಪಿತಕ್ರಿಯಂ |
ಶ್ರೀಮದರ್ದ್ಧಭ್ರಮಂ ಚಕ್ರನಾಮಂ ಮುರಜಬಂಧಕಂ ॥ 110

ಇವು ದುಷ್ಕರಕಾವ್ಯಂಗಳ್ ಸವಿಶೇಷವಿವರ್ತ್ತಿಗಳ್ |
ಸುವಿಚಾರಿತಮಿಾ ತೋರ್ಪ್ಪೆಮಿವಱ ಲಕ್ಷ್ಯಭೇದಮಂ ॥ 111

ಪಾದಪಾದಸಮಸ್ತಾರ್ತ್ಥಂತದಭೇದಚತುಷ್ಟಯಂ |
ವಿದಿತಾಳಂಕ್ರಿಯಾಧಾರಂ ಮೊದಲ್ವೇೞ್ವುದು ದುಷ್ಕರಂ ॥ 112

ಮುಂನಂತಂನಂಳಿನೇತಾನೆ ಕೆಂನಂಕೆಂನಂನಿರಂತರಂ |
ಭಿಂನಂಬಂದಿಪ್ಪನಂತಿಂನುಂ ತಂನಿಂತನಗೆಮೇವಳೊ ॥ 113

ಪೀ[4]ನಂಕಾ[5]ಡುಮ್ವುದಕ್ಕೆಂಕೆಳನಮಾನಳಿನಂಮುದಾ |
ತಾನಿಂತಳಿಜನಂಕನಾ . . . ನದೆಸನೆದೇನನಾ ॥ 114

ನಾದಭೇದನನಾದಾನಾನಾದೀ[6]ನಾಮುದನೋದನಾ |
ನಾದನೋದಮುನಾದೀ[7]ನಾನಾದಾನಾನದಭೇದನಾ ॥ 115

ನಾನ(ದಿ)ಮಾ(ನಾ)ನಮುಸೇನಾಸೆಸೇನಾಸೆಮುನನಾದಿನಾ |
ದಿನಮಾನಮುನಾನಾದಿದಿನಾನಾಮುನಮಾನದಿ ॥ 116

ಗತಪ್ರತ್ಯಾಗತೋಪಾತ್ತಚತುಷ್ಟಯವಿಕಲ್ಪಮಿಾ |
ಪ್ರತೀತಿ ತೋರ್ಪ್ಪೆನಾ ಗೂಢಚತುರ್ತ್ಥಗಳ ಲಕ್ಷ್ಯಮಂ ॥ 117

ಘನಸ್ತನಿತಮುಂ ಕೇಕಿಸ್ವನಮುಂ ನೀರಧಾರೆಯುಂ |
ಮನಂ ಬೆಚ್ಚಿಕ್ಕುಮಿಂತೆತ್ತಂಮನಮಿಂತು ಘನಸ್ವ[8]ನಂ॥ಗೂಢಚತುರ್ತ್ಥಂ॥ 118

ನಿಂನಿಂನಿಂನನೆಂನೆನಿಂನಾನಾನಾನನಸಂನನನಂ |
ನೀನೆನಂನಂನನಾನಾ[9]ನೆ ನಿಂನೆನೆನನನೂನನಂ ॥ 119

ಮಾನಿನಿಮುಂನಮಾಂನೀನೆ ನೀನಾನಿಂನನುಮಾನಮೆಂ |
ಮಾನಮಾನಾನೆಮುಂನಂನ್ಯೈಮಾನಮಾನನಮುಂನಿ[10]ನಾ॥ಏಕಾಕ್ಷರದ್ವ್ಯಕ್ಷರಂಗಳ್ ॥ 120

1 B ಮಂತಾಗಿಪೇೞ್ಗೆ.
2 B ಮುನಿಯುಮತಂ.
3 C ಪ್ರೀಯುದಿಂ.
4 C ಬಿಂನಕಡುದಿದಕ್ಕೆಂ.
5 B ಕಾಡುವ.
6 C ದಾನಾ.
7 C ದಾನಾ.
8 C ಸ್ತನೀ ; B ಸ್ತನಂ.
9 C ನಾನಾನಿಂನಿನೆ.
10 C ನಿಂನಾ.

ಶ್ಲೋ ॥ ಕಿ[1]ಡಿಪಂ ಬಾ[2]ರೆಗೇಮೆಯ್ಯಂ ಕಿಡಿಪಂ ಕಿಡಿಪಂತೆಮುಂ |
ಕಿಡಿಪಂ ಪೋಕುಮೇ ತಾಮುಂ ಕಿ[3]ಡಿಸಲ್ಕುಡಿಸೋ[4]ಲಮೇ ॥ 121

ಮಾರುತೀಪರಮೋದಾರದಾರನೊಳ್ಕೂಡುನಲ್ಲನೊಳ್ |
ಸಾರಕಾದಂಬಿನೀನಾಥನಾರೂಢಗುಣಧಾಮ್ನನೊಳ್ ॥ ಅತಾಲವ್ಯಂ ॥ 122

ನರನಾಯಕನಂನಿಂದಾನಿರದೀಗಳೆಕಾಂತನಂ |
ನೆರೆದೇನದಱಿಂದಿಲ್ಲಾ ನೆರೆದಿರ್ದ್ದಾಗ[5]ನಾಗನೆ ॥ ನಿರೋಷ್ಠ್ಯಂ ॥ 123

ದಿನಾನದಿನಾದಿನಾನೆನಾನಿಂನನಾನೆನಾನೆನಾ |
ದಿನಾದಾನಿನಿದಾನಾದಿನಿನೆನಿಂಮನನಿಂನೆನಿಂ ॥ ಸರ್ವ್ವತೋಭದ್ರ ॥ 124

ಪೆಱರಾಮಂಧರಾಚಕ್ರಕ್ಕೆ ಱೆಯಂಕೆಳೆಯ[6]ಪ್ಪಮಂ |
ನೆಱೆಯಾರೆಣೆಯೆಂಬಂನಂಕಾಱಿತಬ್ಧಿಗೆಬಂನಮಂ ॥ ನಿರುತ್ತರಂ ॥ 125

ಜಲದಾಗಮದಿಂಚಿತ್ತಸ್ಖಲಿತಂಕೇಕಿನರ್ತ್ತನಂ |
ಜಲದಾಗಮದಿಂಚಿತ್ತಸ್ಖಲಿತಂಕೇಳನಲ್ಲನಂ ॥ ಗೋಮೂತ್ರಿಕೆ ॥ 126

ಯಮಕಂತದಪಾ[7]ದಾರ್ದ್ಧಂಸಮಶ್ಲೋಕಮಗೋಚರಂ |
ಪ್ರಮಿತಾದ್ಯಂತದೂಷ್ಯೋಪಕ್ರಮಾನೇಕಪ್ರಕಲ್ಪಿತಂ ॥ 127

ತಾರಾಜಾನಕಿಯಂಪೋಗಿತಃರಾತರಳನೇತ್ರೆಯಂ |
ತಾರಾಧಿಪತಿತೇಜಸ್ವಿತಾರಾದಿವಿಜಯೋದಯಾ ॥ 128

ಕಱಿಪಂತಂದುನಿಂಕಮಿಂಕಱಿಪಂಕಳಿವೆಂಚಲ |
ಕಱಿಮಂಕಂಜನೇತ್ರ . . ಕಱಿಮಂಬಱಿಕಾತನಂ ॥ 129

ದಾರುದಾರುಣನಂದಾನವಾರಿವಾರಿತಲೋಕನಂ |
ಬಾರಬಾರಣಮುಂನೋಡಾಸಾರಸಾರಾಂಬುದಾ[8]ಭಮಂ ॥ 130

ಸಾರಸಾರಸನಾದಾ[9]ಮಸಾರಸಾರನಿ[10]ತಂಬೆಯಃಂ |
ತಾ[11]ರತಾರತರಂ[12]ಗಾಭಾಕಾರತಾರಮಣೀಯೆಯುಂ ॥ 131

ಅಜೇಯಂಪೋಲ್ಕುಮಾ[13]ಮತ್ತಗಜಂವಾರಿಜನಾಭನಂ |
ತ್ರಿಜಗಮಾ[14](ನ್ಮಾ)ದನಂಮತ್ತಂನಿಜನೀಳಘನಾಭನಂ 132

1 C ಕಿದೆಪಂ.
2 B & C ಬಾರಗೆ.
3 C ಕೆಡಿಸ.
4 B ಸೋಲಮೊ.
5 C ಗೆನಾಗನೆ.
6 B ಯುಪ್ಪಮಂ.
7 C ಪಾದಾರ್ತ್ಥಂ.
8 B ದಾಭನಂ.
9 B ದಾಮಾ.
10 A & B ನಿತಂಬಿಯುಂ.
11 C ತಾರಾತಾರಾ.
12 B ರಾಗಾಭಾ.
13 B ಮಮತ್ತಾ; A. ಮಮತ್ತ.
14 A & B ಮೋದನಂ.

ಶ್ಲೋ॥ ಲೋಕವೈದಿಕಸಾಪ್ಯೈಕಲೋಕನಾಕಾರಕಾ[1]ರಕಾ ।
ನಾಕಿನೂತಪದವ್ಯಕ್ತಿ ಶ್ರೀಕಾಂತಾ[2]ಮಮಾಮಾವದಾ ॥ 133
ವಾರಿವಾ[3]ರಿಯೊಳಾದಾನಂವಾರಿವಾರಿವಿತರ್ಕ್ಕವಮಂ ।
ವಾರಿವ್ವಾರಿಜಪ್ರೊದಾನಂವಾರಿವಾರಿಜನಾಭನೊಳ್ ॥ 134

ಗೀತಿಕೆ॥ವರವಾರನಾರಿಯೊಳ್ನೆ[4]ರೆದೆವಾನೆಲ್ಲಿನೆ[5]ನಿದೆ ।
ಪ[6]ರವಾರನಾ[7]ರಿಯೊಳ್ನೆರೆದೆನಾನೆಲ್ಲಿನೀಂ ॥
ಪ[8]ರದರಿತರಿಸುವರಿಂತರಿಯನೆಲ್ಲಂ ।
ಪುರಿದುವಾಱದೆಕಾ[9]ಣದಂತಿರಿಸಂ[10]ಗಡಿಯೊಳ್ ॥ 135

ತಿಳಿಗೊಳನಂ ಪೊಗೊಳನ[11]ನದಂ ನೆಗೞಿವೆ ।
ಮುಳಿದು ಕೊಳ್ವಬಳಸೆ ನಾನದಂ ನೆ ॥
ಗಳೆ ತಾನೆಡೆವುನಂಗಜನೆ[12]ದಪ್ಪಲಾ ।
ಗದೆ(ಳೆ)ನಂ[13]ಬವನದೊಪ್ಪುವಂವನೇಚರವುದಾ ॥ 136

ಶ್ಲೋ॥ ನರದಾ[14]ನಪ[15]ರೊನೇನೆನರದಾ[16]ಕೆನರಾಕ[17]ವಾ ।
ಆರಿದ್ಯೈತಿಂದನಿ[18]ದರಿಕ್ಕುಂಪರಿದಾನಪರಾದಿಯೆ ॥ ? ಅರ್ಧ್ದಭ್ರಮಣಂ॥ 137
ವರದಾ[19]ರುಪರಿರಾದಾನ್ಯಂಪರಿದಾನಪರಾದವಂ ।
ನೆರದೆವದಿರಾಜನ್ಯಂಪರಿಜ[20]ನನ[21]ರಾದವಂ ॥ ಮುರಜಬಂಧಂ ॥ 138
ಅರಸಿಯಿದಿವ್ಯಸೇ[22]ನಾದರದಿರದೀಗಡೆನಿಂ ।
ನರಸಿಱುನೆಯ್ದುವಿನಂಪರಿಜನನುಂಕ[23]ಳುಪಿಂ ॥ ಕ್ರಿಯಾಗೋಪಕ ॥ 139

ವೃ ॥ ಸಂತಂಬಾೞ್ವುದುವಿೞಿದಾನರಪನೊಳ್ಸಾಜನ್ಯಲಕ್ಷ್ಮೀವುದಾಂ ।
ಥಂತನ್ನಿಚ್ಛೆಯುವೆಚ್ಚನೀಂಪರಗುಣೌದಾರ್ಯ್ಯಾಭಿಮಾನಂಗಳಿಂ ॥
ಪಿಂತಂನೋಡದೆಪೋೞಿಗೆ[24]ಟ್ಟುೞಿಪಿನಿಂಬಾೞ್ವಿಂತೆಬಾೞ್ವಿಯ್ಯನಾ ।
ಸಂತಂತಾಂಪಸತಂ[25]ದವಳ್ತಪೆಱಗುಂದಾನಂಗಳಂಭೂಪನಾ॥ಚಕ್ರಶ್ಲೋಕ॥ 140

1 B ಕೊರಕಾ.
2 C ಕಾವು.
3 B ದಾರಿ.
4 A & B ನೆರವಾನೆಲ್ಲಿ.
5 C ನಿನಿದೆ.
6 A ಪರಾ; C ಪಾರಾ.
7 C ವಾರಿ.
8 C ಪಂದಂತರಿಪುದುವರಿಂ.
9 B ನಾಣ.
10 C ಪಂಗಡಿ.
11 C ವನದಂ.
12 C ನೆರಪ್ಪಲಾ; B ನೆನೆರಪ್ಪಲಾ.
13 B ನೆಂಬಂಧನಗೊಪ್ಪವಂ
14 C ದಾರ.
15 B & C ಪರಾನೊನೆ.
16 C ದಾರೆ.
17 C ರವಾ.
18 B & C ವದಾರಿಕ್ಕುಂ.
19 C ದಾರ.
20 C ಗೊನ.
21 C & B ರರಾದವಂ.
22 B ಸೇವಾ.
23 C ಕಳಿಪಿಂ.
24 B ಗಟ್ಟಳಿಪಿ.
25 B ತಂದನಳ್ತಿ; C ತಂದನಳ್ತ.

ಗೀತಿಕೆ॥ಅನುಗತಂಪೂರ್ವ್ವಕವಿಗಳ್ ।
ನೆನೆದಿಂನುಂಪೇೞ್ವೆಂದುಷ್ಕರೋಕ್ತಿಯು ॥
ನನುಗತಕ್ರಮಂಬಗೆದುಹೇಳ್ಕೆಯೊ ।
ಜನಿತವಿಭೇದಮುಮಂಪೇೞ್ವೆಂಕಿಱಿದಂ ॥ 141

ಭಾವೆಯುಂನುಸುಳುಮಸ್ಪಷ್ಟಾಕ್ಷರಮು ।
ಮಾವರ್ಣ್ಣವ್ಯತ್ಯಯಮುಂಬಿಂದುಚ್ಯುತಿಯುಂ ॥
ಭಾವಿಸಿದೊರ್ನ್ನುಡಿಯುಂವರ್ಣ್ಣಚ್ಯುತಮಂ ।
ಕೇವಳಮವಱಭೇದಮಂಸುಸಮಸ್ತಕಮಂ ॥ 142

ಸವಿಹಿತಮಪ್ಪಕರ್ಣ್ಣಪೂರೋತ್ಪಳಮಂ ।
ಧವಳವಿ[1]ಲೋಕನೆಯುಗುಣಮಂಸುಂದರಮಂ ॥
ಕಿವಿವರಂನೀಳ್ದನಯುನಯುಗದೊಳೊ ।
ಪ್ಪುವವಳಾನವಯುವದೇಕೆಕಳೆಯುವೇೞ್ದೆಂಪ್ರಿಯೆಯು ಭಾವೆ ॥ 143

ತಿರಿವುಧದೊಂದುಚಕ್ರದೊಳ್ನಿಂದುದಿವಾ ।
ಕರನೆಮತ್ತಱಿದುಕಳೆಪ್ರೊಡಂತದನಾವೆಡೆಯಿಂ ॥
ದ[2]ರಮೆಯಾಗಿನೆಲಸಿಕೆಲಕಾಲದಿಂ ।
ಪೊರೆದಿರದೞಿದಬೞಿಕತಾನೆಲದೊಳ್ ॥ ನುಸುಳು ॥ 144

ನೆಟ್ಟನೆತಾಂಸೆವಿಯೊಳೊಂದಿರೆಭೋಜನಮಾ ।
ನಟ್ಟುಬ[3]ಡಿಸುನಾಮುಱಿಯದೆನಸುಂಸವಿಯುಂ ॥
ಪುಟ್ಟಿದಾರುಮಱಿಯದದಱಪಸರೊ ।
ಳ[4]ಟ್ಟುದಂಪೇೞೆಕೇ[5]ಳ್ದನೆಂದಱಿಯೆಂ ॥ ಅಸ್ಪಷ್ಟಾಕ್ಷರಂ ॥ 145

ಆ[6]ವನಾಮುಕತ್ವ[7]ಕ್ಷಾಚ[8]ಯುಂ ।
ಕ್ರವನೊಚರಾವು[9]ಯುದಷ್ಟಾಪಾ[10]ಯುದೆಗಳೊಳ್ ॥
ಸೆವಿಸೆವಮಲಹೈವಸುಮುಕ್ತಿಮಹಾ ।
ದೇವನಿ[11]ನನಂನನನಪ್ಪೊನಸಹಾಯುಗುಣಂ ॥ ವರ್ಣ್ಣವ್ಯತ್ಯಯಂ ॥ 146

1 C ವಿಲೋಚನೆಯು ಗುಣಸುಂದರಮಂ.
2 C ದರೆಯುಮೆಯೊನೀ.
3 A & C ಬಡ್ಡಿಸು.
4 C ಳುಟ್ಟುದಂ.
5 C ಕೇಳ್ದರಿಯೆಂ.
6 C ಅವ
7 C ತ್ವಕ್ಷ
8 B ಚಯೆಂ.
9 C ಮಾಯು.
10 C ಸಾಯು.
11 C ನಿನನ್ನನನ; B ನಿನನಂನನ.

ಗೀತಿಕೆ॥ಸೊಗಯಿಸುಗುಮಿಂದ್ರನೀಲಮಣಿಸನ್ನಿಭದೊಳ್ ।
ಮಿಗೆಜಿಳನಿಧಿಯೊಳಗುದಿತದಿಂಡಿ(ದ್ವಿ)ರದವ್ರೊ ॥
ಳ್ನೆಗೆದತಿಧವಳಮೂರ್ತ್ತಿಗೆಘನವಳಯುಸದಗ್ಧ ।
ಗಗನದೊಳುಱಿದುಱಿದುವಿಶಳಿತಾಶಾವಳಯಂ ॥ ಬಿಂದುಚ್ಯುತಕಂ ॥ 147

ಆ[1]ವುದುಬಾ[2]ಗಿದುದುಮಧಿಕಂಬಸನಂ ।
ಕೇವಳವಾಗೆನೆ[3]ಗೆವುದುಚಿತಾವಯವಂ ॥
ದಿವದಿಂನಿಂದುಸಿ[4]ತಗನಂನುಡಿದುವು ।
ಭಾ[5]ವಿಸಿಬಗೆಗೊ[6]ಳ್ವೊಡಾಕೊ[7]ನ್ನರ್ದಿಯುಂ ॥ ಬನ್ನುಡಿ ॥ 148

ತಳವುಳಗುತ್ತುಂಜನಿತನಿಜಭೀತಿಮನಂ ।
ಗೊಳೆಕಳವೆಸಿಚ[8]ಲಿತನಿಲಲಣ್ಮದೆವು ॥
ಕ್ಕಳವೊಳಗೆಸುಱಿದರರಸಂಮನದೊ ।
ಳ್ಮಳಿದಸುಱಸೆನೋಡಿಪರಿವಾರದವರ್ ॥ ವರ್ಣ್ನಚ್ಯುತಕಂ ॥ 149

ವಿಗಳಿತರಾಗನಾವ್ರೊಂ ನಿಂನಾವುದಱ ।
ಸೊಗಯಿಸುಗುಂ ಕಟಕತ್ವವುಂ ಸಮರ್ತ್ಥಬಲಂ ॥
ಬಗೆದೆನಗೊಯ್ಯನೆಸಗೆ[9]ಯಿದುವೊದಾ ।
ಲಗಲಲಾಟಿಸುಗುಮದೆಪೇಱರ್ದ್ದಂ ಬನದೊಳ್ ॥ ಸಮಂತಿ ॥ 150

ವೃ ॥ ಅತಿಶಯಧವಳೋಪನೀತಿಮಾರ್ಗ್ಗ ।
ಚಿತಗತಿಭಾವಿತಮಾರ್ಗ್ಗಳಂಕ್ರಿಯಾರ್ತ್ಥಂ ॥
ಚತುರಕವಿಜನಾನುಯಾತಸಾರ ।
ಸ್ವತಗುಣದೊಳ್ ಬ[10]ಗೆದಂತೆ ಕೂಡಲಾರ್ಕ್ಕಂ ॥ 151

ಬುಧಗುಣಗಣನಾತೀತಾಂತರಂ ಶಬ್ದತತ್ತ್ವಂ ।
ಬುಧಿವಿವಿಧವಿಧಾನಾಲಂಕ್ರಿಯಾವೀಧಿಮಾಳಂ ॥
ವಿಧುರಗತಿವಿಲೋಡ್ಯಂ ತಳ್ತು ನಿಲ್ತಿಪ್ಪುದಾವಾ ।
ಗಧಿಪವಚನಮಾಲಾಪಾವನೀಯಂಗಭೇತಂ ॥ 152

1 A & B ಆವುದು.
2 A & B ಬಾಗಿದಂದು.
3 B ನೆಗೆವುದಂಚಿತ್ತಾ.
4 A ನಿತಗಗನಂ; B ನಿತಂಗಗನಂ.
5 C ಭಾವಿಸೆ.
6 C ಗೊಳದಾರ.
7 C ಕೊಣ್ನರ್ದಿಯುಂ; B ಕೊನ್ನರ್ದಿಯುಂ.
8 C ಚರಿತರೀಲವಣ್ಮದೆವು
9 C ಗೆಯ್ದುವೊದಾ.
10 C ಬಗೆವಂತೆ.

ವೃ ॥ ಭಾವಿಸಿ ಶಬ್ದತತ್ತ್ವಸಮಯಸ್ಥಿತಿಯಂ ಕಱಿತೊಂ[1]ದಶೇಷಭಾ ।
ಷಾವಿಷಯೋಕ್ತಿಯಂ ಬಗೆದು ನೋಡಿ ಪುರಾಣಕವಿಪ್ರಭುಪ್ರಯೋ ॥
ಗಾವಿಳಸದ್ಗುಣೋದಯಮನಾ[2]ಯ್ದವರಿಂ ಸಮೆದೊಂದು ಕಾವ್ಯದಿ ।
ಶ್ರೀವಿಜಯಪ್ರಭೂತಮು[3]ದಮಂ ತನೆಗಾ[4]ಗಿಸಿದೊಂ ಕವೀಶ್ವರಂ ॥ 153

ಇದು ಶ್ರೀನೃಪತುಂಗದೇವಾನುಮತಮಪ್ಪ ಕವಿರಾಜಮಾ
ರ್ಗ್ಗದೊಳ್ ಶಬ್ದಾಲಂಕಾರವರ್ಣ್ನನಾನಿರ್ಣ್ಣಯಂ
ದ್ವಿತೀಯಪರಿಚ್ಛೇದಂ ಸಂಪೂರ್ಣ್ನಂ ॥

---

1 C ಕೊಂಡ.
2 A & B ನಾಯ್ದುವರಿಂ.
3 C ಮುದವಂ.
4 B & C ಗಾಗಿಸಿದಂ.

ತೃತೀಯಪರಿಚ್ಛೇದ.

ಕಂ ॥ ಶ್ರೀವಿದಿತಾರ್ತ್ಥಾಲಂಕಾ ।
ರಾವಳಿಯುಂ ವಿವಿಧಭೇದವಿ[1]ಭವಾಸ್ಪದಮುಂ ॥
ಭಾವಿಸಿ ಪೆಸಸಿದನಖಿಳಧ ।
ರಾವಲ್ಲಭನಿಂತಮೋಘವರ್ಷನೃಪೇಂದ್ರಂ ॥ 1

ವರಜಾತಿರೂಪಕಾರ್ತ್ಥಂ ।
ತರವಿನ್ಯಾಸಾತಿರೇಕಯಾಥಾಸಂಖ್ಯಾ ॥
ಸ್ಥಿರದೀಪಕೋಪಮಾಖಂ ।
ಧುರಾತಿಶಯಸದೃಶಯೋಗಿತಾಕ್ಷೇಪಂಗಳ್ ॥ 2

ಶ್ಲೇಷೋತ್ಪ್ರೇಕ್ಷಾಸೂಕ್ಷ್ಮವಿ ।
ಶೇಷಸಮಾಹಿತಸಮಾಸಪರ್ಯ್ಯಾಯೋಕ್ತಾ ॥
ನ್ವೇಷವಿರೋಧಾಪ್ರಸ್ತುತ ।
ಶೇಷನಿದರ್ಶ್ಯನಸಹೋಕ್ತಿಸಂಕೀರ್ಣ್ಣಂಗಳ್ ॥ 3

ನುತಪರಿವೃತ್ತಿವ್ಯಾಜ ।
ಸ್ತುತಿಹೇತುವಿಭಾವನಾಲವೋದಾತ್ತಾಪ ॥
ಹ್ನುತಿರಸವದೂರ್ಜ್ಜಿತವ್ಯಾ ।
ವೃತ್ತಿಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ ॥ 4

ವಿದಿತಾರ್ತ್ಥಾಲಂಕಾರಾ ।
ಸ್ಪದಭೇದಂಗಳ್ ಪುರಾಣಶಾಸ್ತ್ರೋಕ್ತಂಗಳ್ ॥
ತದನುಮತಲಕ್ಷ್ಯಲಕ್ಷಣ ।
ನಿದರ್ಶ್ಯನಂಗಳನನುಕ್ರಮೋಕ್ತಿಯಿ ಪೇೞ್ವೆಂ ॥ 5

ಭಾವಿಸಿ ಸಮಸ್ತವಸ್ತುವಿ ।
ಭಾವಿತಜಾತಿಕ್ರಿಯಾಗುಣದ್ರವ್ಯಸ್ವಾ ॥
ಭಾವಿಕಗುಣಮಂ ಪೇೞ್ವುದು ।
ಕೇವಲಮಾ[2] ಜಾತಿಯೆಂಬುಸದಳಂಕಾರಂ ॥ 6

1 A & B ವಿಬುಧಾ. | 2 A & B ಮೋ.

ಕಂ ॥ ಧವಳಾಪಾಂಗಂ ಕೇಕಾ ।
ರಾವಮುಖರಂ ಹತಶಾಬಲಾಂಕಕಳಾಪಂ ॥
ನವಿಲಾಟ್ಟುಂ ಸೊಗಯಿಸುಗುಂ ।
ಸುವಿನೀಲಾಯತಗಳ ಪಯೋದಾಗಮದೊಳ್ ॥ ಜಾತಿಸ್ವಭಾವಾಖ್ಯಾನಂ ॥ 7

ಅರೆ ಮುಚ್ಚಿ ಕಣ್ಗಳಂ ವನ ।
ಕರಿ ಮೆಲ್ಲದೆ ಲಲಿತಸಲ್ಲಕೀಪಲ್ಲವಮಂ ॥
ಸ್ಮರವಶದಿಂದಿರ್ದ್ದಪುದು ನಿಜ ।
ಕರೇಣುಪೇಚಕನಿರೂಪಿತಾಯತಹಸ್ತಂ ॥ ಕ್ರಿಯಾಸ್ವಭಾವಾಖ್ಯಾನಂ ॥ 8

ಆವಿಳಾಳನಮಂ ಕಣ್ಗಳೊ ।
ಳಾ ಮನದೊಳಗೊಸಗೆಯುಂ ಶರೀರದೊಳ[1]ತ್ತಂ ॥
ರೋಮಾಂಚಕಂಚುಕಂ ಮದಿ ।
ರಾಮದಮಾ[2]ಗಿಸೆ ತೆಗೞ್ವಿನಾಕೆಯಸುಡಿಯೊಳ್ ॥ ಗುಣಸ್ವಭಾವಾಖ್ಯಾನಂ ॥ 9

ತಳಮಿತಮಧ್ಯೆಯುನಾಯತ ।
ವಿಳೋಳಲೋಚನೆಯುನುನ್ನತಸ್ತನಯುಗೆಯುಂ ॥
ಲಲಿತವಿಲಾಸಿನಿಯುಂ ಕೋ ।
ಮಳಾಂಗಿಯುಂ ಪೃಥುನಿತಂಬಬಿಂಬೆಯನುಱದಂ ॥ ದ್ರವ್ಯಸ್ವಭಾವಾಖ್ಯಾನಂ ॥ 10

ಅತಿಶಯಧವಳಧರಾಧಿಪ ।
ಮತದಿಂದಂ ಜಾತಿಯೆಂಬಳಂಕಾರಮನಿಂ ॥
ತತಿನಿಪುಣರಱಿಗೆ ತೋರ್ಪ್ಪೆಂ ।
ಶ್ರುತಿಸುಭಗಮೆನಿಪ್ಪ ರೂಪಕಾಲಂಕೃತಿಯುಂ ॥ 11

ರೂಪಕಮೆಂಬುದು ಪೆಱವಱ ।
ರೂಪಾದಿಗುಣಂಗಳಾನಭೇದೋಕ್ತಿಗಳಿಂ ॥
ರೂಪಿಸುವುದಿಂತು ಬಾಹುಲ ।
ತಾಪಾದಾಂಬುಜಮುಖೇಂದುನಯನಾಳಿಗಳಿಂ ॥ 12

ಸ್ಮಿತಕುಸುಮಮಧರಪಲ್ಲವ ।
ಮತಿಶಯನಯನಾಳಿಬಾಹುಶಾಖಂ ಕಾಂತಾ ॥
ಲತೆಯೆಂದಿಂತು ಸಮಸ್ತಾ ।
ಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ ॥ 13

1 A ಳತ್ತಂ, | 2 A ವಾಗಿಸಿ.

ಕಂ॥ ಕುಸುಮಂ ಸ್ಮಿತಮಳಿ ನಯನಂ ।
ಕಿಸಲಯಮಧರಂ ಭುಜದ್ವಯಂ ವಿಟಪಮ ॥
ತ್ತಸುವಲ್ಲಭೆ ಲತೆಯೆಂಬುದಿ ।
ದು ಸಮಸ್ತಂ ವ್ಯಸ್ತರೂಪಕಂ ಕ್ರಮಮಖಿಲಂ ॥ 14

ಸ್ಫುರಿತಾಧರಪಲ್ಲವೆ ಬಂ ।
ಧುರಲೋಚನಕುಸುಮೆ ಲೋಲಭುಜಶಾಖೆ ಮನೋ ॥
ಹರೆ ಕಾಂತೆಯೆಂಬುದವಯವ ।
ನಿರೂಪಣಕ್ರಮದಿನವಯವಂ ರೂಪಕದೊಳ್ ॥ 15

ತರಳತರಲೋಚನಂ ನಿ ।
ರ್ಭರರಾಗರಸ ಮುಖಾರವಿಂದಂ ನಿಂನಾ ॥
ದೊರೆಕೊಳಿಸಿದೊಸಗೆಯೇಂ ಬಂ ।
ಧುಗಮೆಂಬುದಿದವಯವಕ್ರಮಂ ರೂಪಕದೊಳ್ ॥ 16

ಮೃದುತರಕಪೋಲಫಳಕಂ ।
ವದನಾಂಬುಜಮಾಯತೋನ್ನತಭ್ರೂಚಾಪಂ ॥
ಮುದಮಂ ಪಡೆದತ್ತೆನಗೆಂ ।
ಬುದು ವಿಷಮಿತರೂಪವಿಷಮರೂಪಕಮಕ್ಕುಂ ॥ 17

ಜಿನಚರಣನಖಾದರ್ಶಂ ।
ವಿನತಾಮರರಾಜರಾಜವದನಪ್ರತಿಮಂ ॥
ಮನದೊಳ್ಸಲೆ ನಿಲ್ಕೆಂಬುದು ।
ವಿನಿಶ್ಚಿತವಿಶೇಷಣೋರುರೂಪಕಮಕ್ಕುಂ ॥ 18

ಕಮಲಾಕರದೊಳ್ ಸಂಕೋ ।
ಚಮನಱಲಂ ಚಕ್ರವಾಕದೊಳ್ಮಾಡದು ನಿಂ ॥
ನಮುಖೇಂದುಬಿಂಬಮಿಂದುಗೆ ।
ಸಮನೆಂ[1]ಬುದು ಮಿಗೆ ವಿರುದ್ಧರೂಪಕಮಕ್ಕುಂ ॥ 19

ಕುಲಗಿರಿಯೈ ಗೌರವದಿಂ ।
ನೆಲನೈ ಸ್ಥೈರಣೆಯಿನಿಂದುವೈ ಶಾಂತಿಯಿನಾ ॥
ಜಲನಿಧಿಯೈ ಗುಣ್ಪಿಂದಂ ।
ದಲಸದೆ ಪೇೞ್ಗಿಂತು ಹೇತುರೂಪಕವಿಧಿಯಂ ॥ 20

1 B ಮೆಂಬುದು.

ಕಂ॥ ಕುಮುದಾನಂದನಕರವತಿ ।
ಕಮಲಾಕರರಾಗಹರಮುದಾರಂ ನಿಂನಾ ॥
ವಿಮಳಯಶೋವಿಧುವೆಂಬುದು ।
ಕಮನೀಯಂ ಶ್ಲೇಷರೂಪಕಾಲಂಕಾರಂ ॥ 21

ಪರಿಚಿತಸನಾಭಿರಾಗಾಂ ।
ಕುರಜಲಸೇಚಂ ವಿರೋಧಿತರುದವ[1]ದಹನಂ ॥
ಪರಮೋದಯರವಿಗಗನಂ ।
ಪರಾಕ್ರಮವದೆನೆ ವಿಭಿನ್ನರೂಪಕಮಕ್ಕುಂ ॥ 22

ವದನಾಂಬುಜರಂಗದೊಳೀ ।
ಮದಾಲಸಭ್ರೂಲತಾವಿಲಾಸಿನಿ ಲೀಲಾ ॥
ಸ್ಪದನೃತ್ಯಮನಾಗಿಸಿದ ।
ಪ್ಪುದಿದೆಂಬುದು ರೂಪಕೋರುರೂಪಕಮಕ್ಕುಂ ॥ 23

ವದನಮಿದಲ್ತಂಬುರುಹಂ ।
ಮದಲೋಲವಿಲೋಚನಂಗಳಲ್ಲಮಿವಳಿಗಳ್ ॥
ಮುದಮೊಲ್ಲಿದು ವಿಕಸನಮೆಂ ।
ಬಿದನಿಂಬನೆ ಬಗೆಗೆ ರೂಪಕಾಪಹ್ನುತಿಯಂ ॥ 24

ಮೊಗಮೆಂಬಂಬುಜದಲರಾ ।
ನಗೆಯೆಂಬ ವಿಕಾಶಮೊ[2]ಪ್ಪುವದಱೊಳ್ಸುೞಿಗುಂ ॥
ಮಿಗೆ ಕಣ್ಗಳೆಂಬ ತುಂಬಿಗ ।
ಳೊಗೆದೊಸೆಗೆಯಿ[3]ನೆನೆ ಸುಯುಕ್ತರೂಪಕಮಕ್ಕುಂ ॥ 25

ನಗೆಯೆಂಬನೆವದೆ ಬೆಳಗೀ ।
ಮೊಗಮೆಂಬೀ ನೆವದೆ ತಿಂಗಳೊಳಗೆಸೆದಾದಂ ॥
ಸೊಗಯಿಸಿ ತೋರ್ಕ್ಕುಂ ಲೋಚನ ।
ಯುಗಮೆಂಬೀ ನೆವದೆ ಲಕ್ಷ್ಮಮನೆ ತದ್ವ್ಯಾಜಂ ॥ 26

ವರರೂಪಕಭೇದಮನಿಂ ।
ತಿರೆ ಪೇೞ್ದಂ ಕಿಱಿದನಱಿದುದಂ ಲಕ್ಷ್ಯದೊಳಾ ॥
ದರದಱಿಗೆ ತೋರ್ಪ್ಪೆನತ್ತರ್ಥಂ ।
ತರವಿನ್ಯಾಸಕ್ಕೆ ಲಕ್ಷ್ಯಲಕ್ಷಣಯುಗಮಂ ॥ 27

1 C ವನ.
2 A & B ದೊಪ್ಪುವ.
3 B ಯುನನೆ.

ಕಂ॥ ದೊರೆಕೊಳೆ ಪೇೞ್ದರ್ತ್ಥಮನಾ ।
ದರದಿಂ ಸಾಧಿಸಲೆ ವೇಡ ಪೆಱತೊಂದರ್ತ್ಥಂ ॥
ತೆರವಂ ಪೇೞ್ವುದದರ್ತ್ಥಂ ।
ತೆರವಿನ್ಯಾಸಾಖ್ಯಮದಱ[1]ದೀ ಭೇದಂಗಳ್ ॥ 28

ಸಕಲವ್ಯಾಪಿ ವಿಶೇಷ ।
ಪ್ರಕಾಶಕಂ ಯುಕ್ತಕಾರಿಯುಕ್ತಾಯುಕ್ತಂ ॥
ಪ್ರಕಟಶ್ಲೇಷವಿರುದ್ಧಾ ।
ತ್ಮಕಂ ವಿರುದ್ಧಂ ವಿಪರ್ಯ್ಯಯಂ ಯುಕ್ತಾರ್ತ್ಥಂ ॥ 29

ಸತತೋದಯನಪ್ರತಿಹತ ।
ಗತಿತೀವ್ರಂ ತದ್ದಿನಾಧಿನಾಥನುಮಸ್ತಂ ॥
ಗತನಾದನಂತೆ ನಿಯತ ।
ಪ್ರತೀತಿಯುಂ ಕ[2]ೞಿಯಲಕ್ಕುಮೀ ವ್ಯಾಪಕಮುಂ ॥ 30

ಸರಸಿಜಬಾಂಧವನಸ್ತಂ ।
ತರಗತನಾಗಿರೆ ಸರೋಜಿನೀವನಮಾದಂ ॥
ಕೊರಗುತ್ತೆ ಮುಗಿಗುಮೀಶ್ವರ ।
ವಿರಹದೆ ಶೋಕಾಕುಲಂ ವಿಶೇಷಾಪ್ತಜನಂ ॥ 31

ಮಲಯಾನಿಲನುಂ ಮಲಯಜ ।
ಜಲಮುಂ ಶಶಿಕಿರಣಮುಂ ವಿಯೋಗಿಗಳೆ[3]ರ್ದೆಯೊ ॥
ಳ್ಕಲಿಸಿದ್ರ್ದವಱಲೆಪಾಪದ ।
ಫಲಮಾದುವು ಯುಕ್ತಕಾರಿಕಾಮುಕಜನದಾ ॥ 32

ಹರಿಣಧರಂ ಸೊಗಯಿಸಿದಂ ।
ತಿರೆ ಕುಸುಮಿತಚೂತವಿತತಿ ಸೊಗಯಿಸಿತೆನಸುಂ ॥
ಸುರಭಿಸುಹುನಸ್ವಿದೋಷಾ ।
ಕರವಿಲಸಿತಮಪ್ಪೊಡಿಂತು ಯುಕ್ತಾಯುಕ್ತಂ ॥ 33

ದಿನನಾಯಕನಪರದಿಗಂ ।
ಗನೆಯೊಳ್ನೆರೆದುದಿತರಾಗಿನಾದಂ ಹೀನಂ ॥
ಜನಿಯಿಸುಗುಮಧಿಕರಾಗಮ ।
ನೆನಸುಮುಪಕ್ರಮದೆ ಮಾರುಣೀಸಂಶ್ಲೇಷಂ ॥ 34

1 C ಪಿ.
2 B ಕಳೆ.
3 B ಳೆದ.

ಕಂ॥ ಸರಿದಧಿಪತಿಯುಂ ದೋಷಾ ।
ಕರನಂತಮರ್ಕ್ಕಲಿನನಾಗಿಯುಂ ಪೆರ್ಚ್ಚಿಸುಗುಂ ॥
ಪರಿಣತಕಲಾಕಲಾಪಂ ।
ಪರಿವರ್ದ್ಧನಮಕ್ಕು ಮತಿವಿ[1]ರುದ್ಧಾತ್ಮಕಮುಂ ॥ 35

ಪ[2]ರಿತಾಪಮನೆನಗೆ ನಿಶಾ ।
ಕರನಾಗಿಸುಗುಂ ವಸಂತಸಮಯಾನುಗತಂ ॥
ಸುರಭಿಸಮಯೋದಿತಂ ಹಿಮ ।
ಕರನಱಲಂ ಪಡೆವನೆಂಬುದಿದು ವಿಪರೀತಂ ॥ 36

ಉರುಪಿತ್ತಶೋಕಪಲ್ಲವ ।
ವಿರಚಿತಶಯನೀಯಮೆನ್ನ ಮೆಯ್ಯಂ ಪೀನಂ ॥
ಸ್ಫುರದನಲಪ್ರತಿನಿಧಿ ತ ।
ತ್ಸ್ವರೂಪಗುಣಮಕ್ಕುಮೆಂಬುದೆಂದುಂ ಯುಕ್ತಂ ॥ 37

ಸಂ[3]ತತಮಿಂತೆಸೆವಪ್ಪ ।
ರ್ತ್ಥಾಂತರವಿನ್ಯಾಸಭೇದಮಂ ಬಗೆಗೆ ಬುಧರ್ ॥
ಮುಂತಣ ಲಕ್ಷಣಲಕ್ಷ್ಯಯು ।
ಗಾಂತರ್ಗ್ಗತಭೇದಮಕ್ಕುಮಾ ವ್ಯತಿರೇಕಂ ॥ 38

ಆದಿಪ್ರತೀತಿಯ(ಯಿ)ಂ ಶ ।
ಬ್ದಾದರದಿಂ ಸದೃಶಮಾದ ವಸ್ತುದ್ವಯದೊ ॥
ಳ್ಭೇದಮನಱಿಪುವುದುಚಿತಗು ।
ಣೋದಯಕೃತವಾಕ್ಯವಿಸ್ತರಂ ವ್ಯತಿರೇಕಂ ॥ 39

ಶ್ರೀವನಿತಾಪ್ರಸವದಿನಾ ।
ಲಾವಣ್ಯಾದಿನತಿಗಭೀರಭಾವದೆ ನೀನಿಂ ॥
ತಾ ವಾರಿಧಿಯುಂ ಪೋಲ್ವೆಯ ।
ಕೇವಲಭೇದಂ ದ್ವಿತೀಯಲಲಿತಾಕಾರಂ ॥ ಏಕವ್ಯತಿರೇಕಂ॥ 40

ಪರಮೋದಯರಿಕ್ತಮಲಾ ।
ಕರಬೋಧಕರಿರ್ದ್ದನೇಶನುಂ ನೀನುಂ ಭಾ ॥
ಸ್ಕರನನಿಯತವೃತ್ತಕ್ರಮ ।
ನರಸಾ ನಿಂನಂತೆ ನಿಯತವೃತ್ತಿಸ್ಥಿತನ್ಯೆ ॥ ಉಭಯವ್ಯತಿರೇಕ ॥ 41

1 C ವಿರುದ್ಧಾರ್ತ್ಥ.
2 C ಪರಿವಾರ.
3 B ಸಂತಸ.

ಕಂ ॥ ಪರಿಣತಗುಣರಿಕ್ತಾರ್ಕಂತೋ ।
ತ್ಕರಸನ್ನಿರ್ಜಿತಸಾಖ್ಯರಿಸ್ನಿರ್ಶಾಸಾಯಕನುಂ ॥
ನರಪಾ ನೀನುಂ ದೋಷಾ ।
ಕರನಾ ಶಶಿ ನೀನುದಾರಗುಣಗಮುದಯನ್ನೈ ॥ 42

ಅಲಘುಭುಜನಾಗಿಯುಂ ನಿ ।
ಶ್ಚಲನಾಗಿಯುಮಖಿಲಭೂಭೃದುತ್ತುಂಗತೆಯೊ ॥
ಳ್ನಲಸಿಯುಮೆಯ್ದದು ನಿಂನಾ ।
ವಿಲಸಿತವಂ ಮೇರುಕಠಿಣಭೋಗಾಧಾರಂ ॥ 43

ಪಾರ್ಥಿವಗುಣಯುತಮಾಗಿಯು ।
ಮರ್ಥಿತಫಲದಾಯಿಯಾಗಿಯುಂ ನಿನ್ನೊಳ್ತಾಂ ॥
ವ್ಯರ್ಥತೆಯಂ ಪಡೆಗುಂ ಪರ ।
ಮಾರ್ಥವಚೇತನತೆಯಿಂದೆ ಕಲ್ಪಕುಜಾತಂ ॥ 44

ಮದಮುದಿತಾಳಿಕದಂಬಂ ।
ಮೃದುವಿಲಸಿತಸರಸಕೇಸರಂ ಸರಸಿರುಹಂ ॥
ವದನಮಿದು ಲೋಲಲೋಚನ ।
ಮುದಿತಂ ಸ್ಮಿತದಶನವಸನರಾಗೋಪಚಿತಂ ॥ 45

ಶರದಂಬರಮುಂ ಮತ್ತೀ ।
ಸರವರಮುಂ ವಿಳಸದತನುಧವಳಚ್ಛವಿಗಳ್ ॥
ಹರಿಣಾಂಕಾಲಂಕೃತಮಂ ।
ಬರಮಿಾ ಕೊಳಮುಚಿತರಾಜಹಂಸೋತ್ತಂಸಂ ॥ 46

ಅಮದಾಲಸಲೋಚನಲೀ ।
ಲಮುಪಾಸ್ತಭ್ರೂಲತಾವಿಲಾಸವಿಶೇಷಂ ॥
ಕಮಲಮಿದು ಪೋಲದೀ ನಿಂ ।
ನಮುಖಮನಿಂತೆತ್ತಮುಕ್ತಗುಣಭೂಷಣಮಂ ॥ 47

ಅನಲನಸಾಧ್ಯಾಕಳಂಕ ।
ಮನನಿಳತಪನೀಯಧೂಳಿಯಾನಜಲಕ್ಷಾ ॥
ಲನಮನನಾಕಲಶೋಷ್ಯಮ ।
ನನಿಯತಕರ್ದ್ದಮಮನಯಶಮಂ ತೊಱೆಗ[1]ಱಿವಂ ॥ 48

1 C ಱಿವಂ,

ಕಂ ॥ ವ್ಯತಿರೇಕವಿಕಲ್ಪಮನನು ।
ಗತಕ್ರಮವಿಶೇಷಗುಣಕೃತಾಂತಮನಱಿಗೀ ॥
ಮತದಿಂ ಯಥಾಸಂಖ್ಯಾ ।
ಪ್ರ[1]ತೀತಿಯಂ ತೋರ್ಪ್ಪನನ್ವಿತಾನಿರ್ನ್ನಿತಮಂ ॥ 49

ಅಳಕಾನನನಯನಂಗಳಿ ।
ನಳಿನಳಿನೋತ್ಪಲವಿಲಾಸಮಂ ಗೆಲ್ದುದಱಿಂ ॥
ಕಳಹಂಸಲೀಲಗಮನೇ ।
ಕೊಳನಂ ನೀಂ ಪೋ[2]ಲ್ವೆಯೆಂಬುದನುಗತಮಕ್ಕುಂ ॥ 50

ನಳಿನೋತ್ಪಳಾಳಿರುಚಿಗಳ ।
ನಳಕವಿಲೋಚನಮುಖಂಗಳಿಱ್ಕುಳಿಗೊಳೆ ನೀಂ ॥
ತ್ರಿಳಿಗೊ[3]ಳನನೆ ಪೋಲ್ತಿರ್ದ್ದಂ ।
ತ[4]ಳಿಯದುದೇಕೆಂಬುದಿಂತ[5]ನನ್ವಯಮದಱೊಳ್ ॥ 51

ನಿಗದಿತಯಾಥಾಸಂಖ್ಯಾ ।
ನುಗ[6]ತವ್ಯತಿರೇಕಯುಗಳಲಕ್ಷ್ಯಮಿವಕ್ಕುಂ ॥
ಬ[7]ಗೆಗಾ ದೀಪಕದ ವಿಭಾ ।
ಗಗತಿಯನೀ ಭೇದಲಕ್ಷ್ಯಲಕ್ಷಣಯುಗದಿಂ ॥ 52

ಜಾತಿಕ್ರಿಯಾಗುಣದ್ರ ।
ವ್ಯಾತಿಶಯವಿಶೇಷಿಯಪ್ಪ ಪದಮೊಬ್ಬುಗಳಿನಿಂ ॥
ದೀ ತೆಱದಿನಱಿದ ಕಾ[8]ವ್ಯಸ ।
ಮೇತಿಗಮುಪಕಾರಯೋಗ್ಯದೀಪಕಮಕ್ಕುಂ ॥ 53

ಮಲಯಾನಿಲನೊಯ್ಯನೆ ಪ ।
ಣ್ತೆಲೆಯುಂ ನೆಲೆಯಿಂ ಕಳಲ್ಚುಗುಂ ವಿಟಪಿಗ[9]ಳೊಳ್ ॥
ವಿಲಸಿತಕಳಿಕಾಕುಳಕೋ ।
ಮಲಾಂಕುರಮನಂತೆ ಪಡೆಗುಮವಱಿಡೆಯಡೆಯೊಳ್ ॥ ಆದಿದೀಪಕಂ ॥ 54

ತಿರಿತಕ್ಕರ್ಮಮಳಜಳನಿಧಿ ।
ಪರಿಖಾವೃತಭೂಮಿಭಾಗಮಂಬರದೆ ಜಳಾ ॥

1 B ಪ್ರತೀತಿಯಿಂ.
2 C ಪೋಲ್ವೆ.
3 A & B ಗೊಳನನೆ.
4 C ತಿಳಿಯದಿ.
5 ತಿದನ್ವಯ.
6 B ಗಮ.
7 C ಬಗೆದಾ.
8 C ವಾಕ್ಯ.
9 B ಗಳಾ.

ಕರವಿಕ್ಷೇಪಕಕಕುದಂ ।
ತರವಂ ಸವಿಶೇಷರು[1]ಚಿಯ ಸಂಭವವಿಧಿಯಂ ॥ 55

ಕಂ॥ ವಿಶದತರಮಾಯ್ತು ಗುಣಮಣಿ ।
ವಿಶೇಷಭೂಷಣದಿನೀ ತ್ವದೀಯಾಕಾರಂ ॥
ಶಶಧರಕಿರಣಾಭಭವ ।
ದ್ಯಶೋವಿತಾನದಿನಶೇಷಮಾಶಾವಳಯಂ ॥ 56

ದಿವಸಕರನುದಯಗಿರಿಶಿಖ ।
ರವಿಶೇಷವಿಭೂಷಣಂ ತಮೋರಿಪುಬಳಮಂ ॥
ಪ್ರವಿಲೀನಂ ಮಾಡಿದನವ ।
ಯವದೊಳ್ತಾರಾವಿತಾನತೇಜಮನೞಿದಂ ॥ 57

ದೀಪಕಮಾ ಜಾತ್ಯಾದಿನಿ ।
ರೂಪಕಮಿಂತಕ್ಕುಮಾದಿಯೊಳ್ಮಧ್ಯಾಂ[2]ತ ॥
ವ್ಯಾಪಕಮನದಂ ತಱಿಸಲಿ ।
ಸೀ ಪೇೞ್ದ ವಿಕಲ್ಪಲಕ್ಷ್ಯದೊಳ್ಕವಿಮುಖ್ಯರ್ ॥ 58

ನಾನಾವಸ್ತುವಿಭೇದಮ ।
ನೇನಾನುಂ ತೆಱದೆ ಪೋಲ್ಕೆ ಮಾಡುವುದುಪಮಾ ॥
ಮಾನಿತಸದಳಂಕಾರಮ ।
ನೂನವಿಕಲ್ಪಪ್ರಪಂಚಮೀ ತೆಱನದಱಾ ॥ 59

ವನರುಹದಂತೆ ಮುಖಂ ಲೋ ।
ಚನಮೆಸೆವುತ್ಪಳದ ಪೋಲ್ ತಳಂ ತಳಿರಂತೆಂ ॥
ಬನುರೂಪಮಾಗಿ ಪೇೞ್ವೊಡ ।
ದೆನಸುಂ ವಸ್ತೂಪಮಾನಮೆಂಬುದು ಪೆಸರಿಂ ॥ 60

ತಳಿರ್ಗಳ ಪೋಲ್ಕೆಲ್ಲಿದುಮೀ ।
ತಳಂಗಳಳಿಕುಳದ ಪೊಲ್ವಿನೀಳಂಗಳ್ನಿಂ ॥
ನಳಕಾಳಿಗಳೆಂಬುದನಾ ।
ಕುಳಮಿಲ್ಲದೆ ವಿಬುಧರಱಿಗೆ ಧರ್ಮೋಪಮೆಯಂ ॥ 61

ನಿಂನ ಮುಖದಂತೆ ಕಮಳಮಿ ।
ದುಂನಿದ್ರಂ ನಿಂನ ತಳದ ಪೋಲಾರಕ್ತಂ ॥
ನಿಂನಯನೀ ಪಲ್ಲವಮೆನೆ ।
ಸಂನುತರೂಪಿಂ ವಿಪರ್ಯಯೋಪಮಮಕ್ಕುಂ ॥ 62

1 C ರುಚಿರ. | 2 C ಧ್ಯಾಂತ್ಯ.

ಕಂ॥ ಕಮಳಮಿದು ನಿಂನ ಮುಖದಂ ।
ತೆ ಮುಖಮುಮೀ ಕಮಳದಂತೆ ನಿಕ್ಕುವಮೆಂದಿಂ ॥
ತಮದಿರೆ ಪೇೞ್ವುದನಱಿಗು ।
ತ್ತಮರನ್ಯೋನ್ಯೋಪಮಾನನಾಮಾಂಕಿತಮಂ ॥ 63

ಸರಸಿಜದೊಳ್ನಿಂನ ಮುಖಂ ।
ತರುಣೀ ಸದೃಶಂ ಸಮಂತು ಪೋಲದು ಪೇೞ್ತಂ ॥
ನಿರುತಮಿದೆಂಬುದು ನಿಯಮಾಂ ।
ತರಿತಂ ನಿಯಮೋಪಮಾವಿಕಲ್ಪಿತಭಾ[1]ವಂ ॥ 64

ಕಮಳಮಿದಂನೆಗಮೀ ನಿಂ ।
ನ ಮುಖದೊಳೋರಂತೆ ಪೆಱದುಮಿದಱೊಳ್ಸದೃಶಂ ॥
ಸಮವಾಯಮುಳ್ಳೊಡೆಲ್ಲಂ ।
ಸಮನಿಸುಗಂತೆಂಬುದನಿಯಮೋಪಮೆಯಕ್ಕುಂ ॥ 65

ವದನಂ ಮದೀಯಲೋಚನ ।
ಮುದಾವಹಂ ಕಮಳಮಳಿಕುಳೋತ್ಸವಜನಕಂ ॥
ವಿದಿತವಿಭೇದಕ್ರಮಮಿಂ ।
ತಿದಲ್ಲದಿಲ್ಲೆಂಬುದತಿಶಯೋಪಮೆ ಸತತಂ ॥ 66

ಈಕೆಯ ವದನಾಕಾರಮ ।
ನೇಕಾಂತಂ ಪೋಲ್ವೆನೆಂಬುದಕ್ಕಾಗಿ ಕನ ॥
ತೋ ೯ಕನದಕ್ಕಿಂದುಗಮುಂ ।
ಟಾಕಾಂಕ್ಷಣಮದಱೊಳೆಂಬುದುಪಮೋತ್ಪ್ರೇಕ್ಷಂ ॥ 67

ಕಮಳಂ ಲಲಿತಭ್ರೂವಿ ।
ಭ್ರಮಮಂ ವಿ[2]ಸ್ಮಿತವಿಲೋಲಲೋಚನಯುಗಮಂ ॥
ಸಮವಾಯಮುಳ್ಳೊಡದು ನಿಂ ।
ನ ಮೊಗಕ್ಕೆಣೆಯೆಂಬುದದ್ಭುತೋಪಮೆ ನಿಯತಂ । 68

ಕಮಳವಿಮೋಹದಿನೀ ನಿಂ ।
ನ ಮೊಗಕ್ಕೆಱಗುವುದು ತೊಱವುದಾ ಸರಸಿಜಮಂ ॥
ಭ್ರಮರಂ ವದನಮಿದಲ್ತೆಂ ।
ದು ಮೋಹದಿಂದೆಂಬುದಿದುವೆ ಮೋಹೋಪಮಿತಂ ॥ 69

1 C ಭಾಗಂ. | 2 C ವಿಲಸಿತ.

ಕಂ ॥ ಸರಸಿಜಮೋ ಮೊ[1]ಗಮೋ ಮೇ ।
ಣ್ದ್ವಿರೇಫನೋ ಲೋಲನಯನಮ್ಮುಗಮೋ ಮನದೊ ॥
ಳ್ಪಿರಿದುಂ ಸಂಶಯಮೆಂಬುದು ।
ನಿರುತಲಂ ಸಂಶಯೋಪಮಾಲಂಕಾರಂ ॥ 70

ಸರಸಿರುಹಮಿಂದುದೀಧಿತಿ ।
ಪರಾಜಿತಶ್ರೀವಿಲಾಸಮೀ ನಿಂನ ಮುಖಂ ॥
ಹರಿಣಧರವಿಜಯಶೋಭಾ ।
ಕರಮೆಂಬುದಿದೂರ್ಜ್ಜಿತೋಪಮಾನವಿಭಾಗಂ ॥ 71

ಪರಮಶ್ರೀನಿಳಯಂ ಶಶ ।
ಧರಕಾಂತಿವಿರೋಧಿರೋಚಿವದನಂ ನಿಂನಾ ॥
ಸರಸಿರುಹದ ಪ್ರೋಲೆಂಬುದು ।
ನ್ನಿರುತಂ ಶ್ಲೇಷೋಪಮಾವಿಕಲ್ಪವಿಶೇಷಂ ॥ 72

ಸರಸೀಜಂ ಸರಜಂ ಶಶ ।
ಧರಬಿಂಬಮಿದತಿಕಳಂಕಿತಂ ನಿಂನ ಮೊಗಂ ॥
ನಿರುಪಮಮಾಗಿಯುಮ[2]ವಱೊಳ್ ।
ದೊರೆಯೆಂಬುದನಱಿದುಕೊಳ್ಗೆ ನಿಂದೋಪಮೆಯಂ ॥ 73

ಅಮೃತಭವಂ ಶಿಶಿರಕರಂ ।
ಕಮಳಂ ಜಗದೇಕಪಾವನೀಯಶ್ರೀಕಂ ॥
ಸಮನವಱೊಳ್ನಿಂನ ಮೊ[3]ಗಂ ।
ಕ್ರಮದೆಂಬುದನಱಿವುದಾ ಪ್ರಶಂಸೋಪಮೆಯಂ ॥ 74

ಶರದುದಿತಶಿಶಿರಕರನುಂ ।
ಸರಸಿರುಹಮುಮೀ ತ್ವದೀಯವದನಮುಮಿಸಿತುಂ ॥
ದೊರೆಕೊಳಿಸುವೊಡೆ ಪರಸ್ಪರ ।
ವಿರೋಧಿಗಳ್ನಿರುತಮೆನೆ ವಿರೋಧೋಪಮಿತಂ ॥ 75

ಅಳಿಗಳಿವು ಕಣ್ಗಳಲ್ಲಿವು ।
ನಳಿನಮಿದೀ ವದನಮಲ್ತು ನಿಜಕಾಮಿನಿಯಾ ॥
ತಿಳಿದಿಂತು ಪೇೞ್ವೊಡಿಹು ಮೊ ।
ಕ್ಕಳಮುಪಮಾಖ್ಯಾತಮಪ್ಪ ತತ್ತ್ವಾಖ್ಯಾ[4]ನಂ ॥ 76

1 C ಮುಖ.
2 C ಮಿದರೊಳ್.
3 C ಮುಖಂ.
4 C ಖ್ಯಾತಂ.

ಕಂ ॥ ಹರಿಣಧರಸರಸಿಜಂಗ ।
ಳ್ದೊರೆಯಲ್ಲಿವು ತನಗೆ ತಾನೆ ದೊರೆ ನಿಂನ ಮೊ[1]ಗಂ ॥
ನಿರುಪಮಮೆಂಬುದನಱಿವುದು ।
ನಿರುತಮಸಾಧಾರಣೋಪಮೋದಯವಿಧಿಯುಂ ॥ 77

ನುತಶಿಶಿರಕಿರಣಕಾಂತಿ ।
ಪ್ರತತಿಯನೊಡಗೂಡಿ ಮಾಡಿದಪ್ರೊಲಾಯಿತ್ತಿಂ ॥
ತತಿಶಯಮೀ ನಿಂನ ಮುಖಂ ।
ನಿತಾಂತಮೆಂಬಾಗಳಱಿಗಭೂತೋಪಮೆಯಂ ॥ 78

ಹರಿಣಧರನೊಳ್ವಿಷಂ ಮಲ ।
ಯರುಹದೊಳನಲಾರ್ಚ್ಚಿ ನಿಂನ ವದನೋದರದೊಳ್ ॥
ಪರುಷತ[2]ರವಚನಮಪ್ಪುದು ।
ದುರವಾಪಮಿದಿಂತಸಂಭವೋಪಮನುಕ್ತಂ ॥ 79

ಮಲಯರುಹಶಿಶಿರಕರಶೀ ।
ತಲಿಕಾಕರಕೇಂದುಕಾಂತಜಲಶೀತಳಮೀ ॥
ಲಲನಾಲಿಂಗನಸುಖಕರ ।
ವಿಲಾಸಮೆಂಬುದು ಬಹೂಪಮಾನವಿಕಲ್ಪಂ ॥ 80

ಜನಿತಪ್ರಗಲ್ಭದೊಳ್ ಮಾಂ ।
ತನದೊಳ್ ಮಾಹಾತ್ಮ್ಯದೊಳ್ ನಿಜೋದಾರತೆಯೊಳ್ ॥
ಅನುಪಮಗುಣಱೊಳ್ ಶ್ರೀ[3]ಶಂ ।
ಘನಮೆನೆ ಮಾಲೋಪಮಾನಭೇದಮಿದಕ್ಕುಂ ॥ 81

ಭವದೀಯವದನಮಾಲೋ ।
ಲವಿಲೋಚನಮುದಿತರಾಗಮಣಿವಿಳಸಿತಮುಂ ॥
ಪ್ರವಿಕಸಿತಾಂಬುಜವನಮುಂ ।
ಸವಿಶೇಷಂ ಪೋ[4]ಲ್ಕೆ ಮೆಂಗೆ ವಾಕ್ಯೋಪಮೆಯುಂ ॥ 82

ವಿಪರೀತಂ ತರುತತಿಯ ಪ್ರೊ ।
ಲಪರಾಗಂ ಶುದ್ಧಭೂಮಿಪ್ರೊಲ್ಪದ್ಮಿನಿಪ್ರೋ ॥
ಲುಪಗತವಿಭ್ರಮರಹಿತಂ ।
ಕುಪಿತಾಕೃತಿಯೆಂಬುದುಪಮೆ ಸಂಧಾನಾಂ ಕಂ ॥ 83

1 A ಮುಖಂ.
2 A & B ಕರ.
3 A & B ಶ್ರೀಸಂ.
4 C ಪೋಲ್ಗ.
5 C ನಾಂಶಂ.

ಕಂ॥ ಪ್ರತಿವಸ್ತೂಪಮಿತಾಲಂ।
ಕೃತಮಿಂತಕ್ಕುಂ ಧರಾಧಿಪಾ ನಿಂನನ್ನ[1]॥
ವಿತತಯಶನಿಲಯತಾರಾ।
ಪತಿದಿನಕರಸದೃಶತೇಜನೆಂಬುದುಮುಂಟೇ॥ 84

ಸುರಗಿರಿವೊಲ್ ಧೈರ್ಯ್ಯದಿನಂ।
ಬರಮಣಿವೊಲ್ ತೇಜದಿಂ ಶಶಾಂಕಂಬೊಲ್ ಬಂ॥
ಧುರಕಾಂತಿಗುಣದಿನೆಂದಿಂ।
ತಿರೆ ಪೇಳ್ವುದನಱಿದು ಕೊಳ್ಗೆ ಹೇತೂಪಮೆಯಂ॥ 85

ಹೀನಾಧಿಕಗುಣದೋಷಮಿ।
ತಾನಮುಮಂ ಲಿಂಗವಚನಭೇದಂಗಳುಮಂ॥
ಮಾ[2]ನಧನರಱಿದು ಪೇಳ್ಗೆನು।
ನಾನಕ್ಕವಿರುದ್ಧಮಾಗೆ ಲಕ್ಷ್ಯಾಗಮದೊಳ್। 86

ನಿನ್ನಂತೆ ಸುರೇಶ್ವರನು।
ತ್ತನ್ನಮಹೈಶ್ವರ್ಯ್ಯನೆಂಬುದುಂ ಜಲನಿಧಿ ತಾಂ॥
ಸನ್ನುತಗಭೀರನೆಂಬುದು।
ಮಿನ್ನದು ಹೀನಾಧಿಕಪ್ರಸಂ(ಶಂ)ನಾ(ಸಾ)ನುಗುಣಂ॥ 87

ಕೊಳದಂತಂಬರಮತಿನಿ।
ರ್ಮ್ಮಳಮೀತಂ ಸ್ವಾಮಿಭಕ್ತನೆಂದುಂ ನಾಯ್ಗೀ॥
ಲಿಳೆಯುಂಕರಮೆಂಬುದಿದ।
ಗ್ಗಳಮಾ ಹೀನಾಧಿಕಪ್ರಶಂಸಾದೋಷಂ॥ 88

ಪುರುಷಂಬೋಲೀಕೆ ಕರಂ।
ಪುರುಷಾಕೃತಿಯೆಂಬುದಿಂತು ನಾನಾಲಿಂಗಂ॥
ನಿರುತಂ ಪ್ರಾಣಂಗಳವೋಲ್।
ನೆ(ನ)ರಪಂ ಪ್ರಿಯನೆಂಬುದಿಂತು ನಾನಾವಚನಂ॥ 89

ಇಂತುಪಮಾಕ್ರಮಮನಪ।
ರ್ಯ್ಯಂತಂ ಗುಣಗಣಮನಱಿದು ಪೇಱಿಸೆ ಕವೀಶರ್॥
ಸಂತತಮಿಂತಕ್ಕುಂ ಕಾಂ।
ತಾಂತಿಕಮತಿಶಯದ ಲಕ್ಷ್ಯಲಕ್ಷಣಯುಗದಿಂ॥ 90

1 C ಕಿ. | 2 B ಮಾನವರನ.

ಕಂ॥ ಮೇರೆಗಳೆದಿರೆ ವಿಶೇಷಮಿ।
ಚಾರಮನಧಿಕೋಕ್ತಿಯೊಳ್ ತಗುಳ್ಚುವುದಕ್ಕುಂ॥
ಸಾರತರಮತಿಶಯಾಲಂ।
ಕಾರಂ ಮತ್ತಿದಱ ಲಕ್ಷ್ಯಮಿಾ ತೆಱನ[1]ಕ್ಕುಂ॥ 91

ಗೈರಿಕರಸಾರ್ದ್ರಮುಂ ಸಿಂ[2]।
ದೂರದೆ ತಲೆವಱಿದುದಂ ಕರಂ ಕಂಡಾಂ ಸಂ॥
ಧ್ಯಾರಾಗದೊಳಱಿಯದೆ ಮದ।
ವಾರಣಮಂ ಸೋಂಕಿ ಕೆಲದೊಳೊಯ್ಯನೆ ಪೋದೆಂ॥ 92

ಮಲಯಜಚರ್ಚ್ಚಿತೆಯಂ ಕೇ।
ವಲಧವಳಾಭರಣೆಯುಂ ದುಕೂಲಾಂಬರೆಯುಂ॥
ಕೆಲದೊಳ್ನಿಲೆಯುಂ ಜ್ಯೋತ್ಸ್ನಾ।
ವಿಲಾಸದೊಳ್ಬಗೆದೆನಿಲ್ಲ ನಲ್ಲಳನಿನಿಸಂ॥ 93

ಆಶಾವಳಯಿತಲೋಕಾ।
ಕಾಶಮಿದೇನತಿವಿಶಾಲಮೋ ನಿಂನ ಯಶೋ॥
ರಾಶಿಯನಿಂದುದ್ಯುತಿಯನಿ।
ಕಾಶಮನೊಳಕೊಳ್ಗು ಮಳವಿಗೞಿದಿರ್ದ್ದುದುಮಂ॥ 94

ಸ್ತುತಿನಿಂದೆಗಳಿಂ ಸಮಿವ।
ಕ್ಷಿತಗುಣದೊಳ್ ಸದೃಶಮಾಗಿ ಪೇಳ್ವುದು ಪೆಱತಂ॥
ನುತಸದೃಶಯೋಗಿತಾಲಂ।
ಕೃತಿಲಕ್ಷಣಮಕ್ಕುಮಿಂತು ತದುದಾಹರಣಂ॥ 95

ಅಮರಾಧಿರಾಜಹುತವಹ।
ಯಮನೈರೃತವರುಣವಾಯುಯಕ್ಷೇಶಾನ॥
ಕ್ರಮದಿನವರೆಣ್ಬರಂತು।
ತ್ತಮನೈ ನೀಂ ನವಮಲೋಕಪಾಳನೆ ಅವರೊಳ್॥ 96

ಜಲದದ ನೆೞಲುಂ ಪ[3]ರಮುಂ।
ವಿಲಾಸಮುಂ ಬೆಳಗುವುದಿತವಿದ್ಯುಲ್ಲತೆಯುಂ॥
ನೆಲಸವು ಚಲಂಗಳಾದಂ।
ವಿಲಾಸಿನೀಜನದ ನಲ್ಮೆಯುಂ ಸಂಗಮುಮುಂ॥ 97

1 C ನೆಂದುಂ. | 3 A & B ಪರಪುಂ.
2 B ಸಿಂಧೂರದೆ.

ಕಂ॥ ಉಪಮಿತಭೇದೋಕ್ತಿಕ್ರಮ ।
ಮಪರಿಮಿತಾಖ್ಯಾಕೃತಿಪ್ರಯೋಗಾನುಗತಂ ॥
ನೃಪತುಂಗದೇವಮತದಿಂ ।
ದುಪಮಾಭೇದಂಗಳಿಂದೆ ತಱಿಸಲ್ಗಱಿವಂ ॥ 98

ವಿದಿತಾರ್ತ್ಥವಿಪರ್ಯ್ಯಾಸಾ ।
ಸ್ಪದಮೆ ದಲಾಕ್ಷೇಪಮೆಂಬಳಂಕಾರಂ ಮ ॥
ತ್ತದಱ ವಿಶೇಷವಿಭಾಗಮ ।
ನುದಾಹರಣಮಾರ್ಗ್ಗದಿಂ ಪ್ರಯೋಗಿಸಿ ತೋರ್ಪ್ಪೆಂ ॥ 99

ಮೃದುತರಮಾರ್ಗ್ಗದೆ ಕೆಂನಂ ।
ಮದನಶರಾನೀಕಮೊಯ್ಕನೊಲವಂ ಪಡೆಗುಂ ॥
ಹೃದಯಮನಳನಳವಿಂದುಱೆ ।
ವಿದಾರಿಸುವುಱಂತು ಕುಸುಮಮಯಮಲ್ತದಱಿಂ ॥ 100

ಧನಮಂ ನೆರಪದೆ ವಿದ್ಯಾ ।
ಧನಮಂ ಮಾಡದೆ ತಗುಳ್ದುನೆಗೞದೆ ತಪದೊಳ್ ॥
ಮನುಜತ್ವಮಫಲಮಾಯ್ತೆಂ ।
ತೆನಗೆಂಬುದನಱಿವುದತಿ(ಸು)ಶಯಾಕ್ಷೇಪಕಮಂ ॥ 101

ಸರಸಿಜವಿರೋಧಿ ಕಾಂತ್ಯಾ ।
ಕರಮಮೃತಮಯಂ ತ್ವದೀಯಮುಖಶಶಿಯುಂಟಾ ॥
ಗಿರೆ ಶಶಿಯದೇವುದೆಂಬುದು ।
ನಿರುತಂ ಶ್ಲೇಷಾನುವಿದ್ಧಮಪ್ಪಾಕ್ಷೇಪಂ ॥ 102

ವರಹಂಸಕದಂಬಕಮದು ।
ಶರದಂಬುದಮಲ್ತು ಮುಖರನೂಪುರಸಂಪಾ ॥
ದಿರವಂ ನೆಗೞ್ದಿಪ್ಪುದು ಬಂ ।
ಧುರಮದಱಿಂದಿದಱೊಳೆಂಬುದುಪಮಾಕ್ಷೇಪಂ ॥ 103

ಮದಕರಿಯೋ ಘನಸಮಯಾಂ ।
ಬುದಮೋ ಘನಮಲ್ತು ನೆ[1]ಗೞ್ವದದಱೊಳ್ ಸಪ್ತ ॥
ಚ್ಛದಗಂಧಸುರಭಿಪದಾಳಂ ।
ಮದಕರಿಯನೆ ನೆನೆಗೆ ಸಂಶಯಾಕ್ಷೇಪಕಮಂ ॥ 104

1 A & B ನೆಗೞ್ತಿ.

ಕಂ॥ ಮಾನಧನಾ ಪೊಗೞಿಸಲೇಂ ।
ದಾನಿಯೆ ನಿನ್ನಂತೆ ನಿಂನ ಕಸವರಮೆಳಿದುಂ ॥
ದೀನಾನಾಥರ ಕೆಯ್ಯದು ।
ದಾನಿಯುಮೆಂತೆಂಬುದಿಂತು ಹೇತ್ವಾಕ್ಷೇಪಂ ॥ 105

ವ್ಯತಿರೇಕವಿಕಲ್ಪವಿಃದಂ ।
ದತಿಶಯಧವಳೋಪದೇಶಮಾರ್ಗ್ಗಕ್ರಮದಿಂ ॥
ದತಿನಿಪುಣರಱಿದು ಕೊಳ್ಗನು ।
ಮತಿಯಿಂದಾಕ್ಷೇಪಮೆಂಬಳಂಕಾರಮುಮಂ ॥ 106

ಗೀತಿಕೆ॥ಪ್ರತಿಪದಾರ್ತ್ಥತತ್ತ್ವಭೇದದೊಳ್ ।
ಪ್ರತಿಷೇಧಮುಂ ನೆಗೞ್ಗುಮನಿತೆ ಮಾೞ್ಕೆಯಿಂ ॥
ದತಿಶಯಾಕ್ಷೇಪಗಣನಾವೃತಿ ।
ಗತಿನೃಪತುಂಗದೇವಮಾರ್ಗ್ಗದೊಳ್ ॥ 107

ಕಂ ॥ ನಾನಾರ್ತ್ಥಮೇಕರೂಪಾ ।
ಧೀನವಚೋರಚಿತಮಪ್ಪೊಡಕ್ಕುಂ ಶ್ಲೇಷಂ ॥
ಮಾನಿತಮುಳಂಕ್ರಿಯಾನುವಿ ।
ಧಾನಂ ಮತ್ತಿಂತು ತದುಪಲಕ್ಷ್ಯವಿಕಲ್ಪಂ ॥ 108

ಉದಯಾರೂಢಂ ಕಾಂತ್ಯಾ ।
ಸ್ಪದನನುರಕ್ತಾತ್ಮಮಂಡಲಂ ಕುಮುದಕರಂ ॥
ಮೃದುತರಕರಂಗಳಿಂದತಿ ।
ಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ ॥ 109

ವಿಪುಳತರಕಟಕನುದ್ಯ ।
ದ್ದ್ವಿಪಹಲಿ(ರಿ)ಮಹಿಷೀನಿಷೇವ್ಯನುನ್ನತಪಾದಂ ॥
ಮ್ಯ[1]ಪನೀತಶ್ರೀಫಲದಂ ।
ವಿಪರೀತಕನಪ್ಪನಂತು ಭೂಭೃನ್ನಾಥಂ ॥ 110

ನೆರೆದ ವಿಸಂವಾದಂ ಪಂ ।
ಜರಶುಕತತಿಯೊಳ್ಕಲಾಲಗೇಹಂಗಳೊಳಂ ॥
ಪರಚಕ್ರಭ್ರಾಂತಿಗಳ ।
ಧ್ವರದೊಳೆ ನೆಗೞ್ಗುಂ ಮಹಾಹವಧ್ವನಿನಿಯತಂ ॥ 111

1 C ಮುಪನೀತ.

ಕಂ ॥ ಅರಿಗೋತ್ರಭೇದಿ ವಿಬುಧೇ ।
ಶ್ವರನಲ್ಲರೆ ಧೃತಕಳಾಕಳಾಪಂ ದೋಷಾ ॥
ಕರನಲ್ಲಂ ವಿದಿತೋಮಾ ।
ವರನಾತ್ತಭುಜಂಗನಲ್ಲನೀ ಭೂಪಾಳಂ ॥ 112

ವರರೂಪಕಾದ್ಯಳಂಕಾ ।
ರರಚನೆಯೊಳ್ಮುಂನೆ ಪೇೞ್ದ ಬಂದಂ ಕೆಲವಂ ॥
ದೊರೆಕೊಳೆ ಬಗೆಗೀ ತೆಱದಿಂ ।
ನಿರಂತರವಿರುದ್ಧನಿಯಮಿತಶ್ಲೇಷೆಗಳಂ ॥ 113

ತಱಿಸಂದು ಸಲವು ತೆಱದಿಂ ।
ತೆ[1]ಱೆದಿರೆ ನೆಗೞ್ದುರ್ದ್ಧದೊಂದು ವಸ್ತುಸ್ಥಿತಿಯಂ ॥
ಮುಱಿಸಿ ಪೆಱತೊಂದು ಮಾೞ್ಕೆಯಿ ।
ನಱಿಪುವುದ್ರುಷ್ಟ್ವಾಕ್ಷೇಪೆಯೆಂಬುದಿಂತದಱ ತೆಱಂ ॥ 114

ನಡುವಗಲ ಬಿಸಿಲ್ತಂನಂ ।
ಸುಡೆ ವನಕರಿ ಕಮಳಬಂಧುವೊಳ್ದಿನಕರನೊಳ್ ॥
ಕಡುಗಾಯ್ಪಿನೆ ಸರಸಿಜಮಂ ।
ಕಿ[2]ಡಿಸಲ್ತಾಂ ಪೊಕ್ಕುದಾಗ ಬಗೆಗಾ ಕೊಳನಂ ॥ 115

ನೆಲಸಿ ಕಿವಿಯೊಳ್ಮದಾಯತ ।
ವಿಲೋಕ(ಪ)ದೊಳ್ಪೊಳೆವುದೊಳ್ಪನೆಂದೀ ಕರ್ಣೋ ॥
ತ್ಪಲಮುಮನಾಕ್ರಮಿಸುವುದಿದು ।
ವಿಲಾಸಿನೀ ನಿಂನ ಲೋಲಲೋಚನಯುಗಳಂ ॥ 116

ಬಗೆದಿಂಗಿತಚೇಷ್ಟಾಕಾ ।
ರಗತಂಗಳೆನಂತರಂಗದೊಳ್ಮಱಿಸಿದುದಂ ॥
ಮಿಗೆ ಸೂಚಿಸುವುದು ಸೂಕ್ಷ್ಮಾ ।
ನುಗತಾಳಂಕಾರಮಿಂತು ತದುದಾಹರಣಂ ॥ 117

ತಿಳಿಪಲಡಿಗೆಱಗಿದೋಪನ ।
ತಳಂಗಳ್ನೀಟದಿಂ ಪದಂಗಳೊಳೊಗೆದಾ ॥
ಪುಳಕಚಯಂಗಳ್ಕಳೆದುವು ।
ಮುಳಿಸಂ ನಲ್ಲಳ್ಗೆ ಬೆಳ್ಮುಗಂ ಗೆಯ್ದುರೆಯುಂ ॥ 118

1 B ನೆರೆದಿರೆ. 2 A & B ಕೆಡಿಸ.

ಕಂ ॥ ಪರುಷಾಳಾಪಮುಮತಿನಿ ।
ಷ್ಠುರವೀಕ್ಷಣಮುಖವಿಕಾರಮುಂ ಮುಱಿಸಿರೆಯುಂ ॥
ತರಳಾಪಾಂಗವ್ಯುಮಾಕೆಯ ।
ದರಹಸಿತಮುಮಱಿಯೆ ಪೇೞ್ಗುದೆ(ಮೆ)ಱಕಮನೆರ್ದೆಯೊಳ್ ॥ 119

ಗುಣಜಾತ್ಯಾದಿಗಳೊಳಗನು ।
ಗುಣಮಾಗಿರೆ ಪೇೞ್ದವಱ ವಿಕಳತೆಯುಂ ಸ ॥
ಯ್ತ್ತಣಿಸಿ ವಿಶೇಷಮನಱಿಪುವ ।
ಗಣನೆ ವಿಶೇಷಾನುಭಾವಸದಳಂಕಾರಂ ॥ 120

ಅಲರಂಬು ಕರ್ಬ್ಬುವಿಲ್ಕೋ ।
ಮಲಸರಸಿಜನಾಳತಂತುತಿರು ಮುತ್ತಿನಱಾ ॥
ಬಲದಿನಗಲ್ದರನೆಚ್ಚಾ ।
ತ್ರಿಲೋಕಮಂ ಕಂತು ಬಸಕೆ ಬರಿಸುವನೆಂತುಂ ॥ 121

ಸ್ಫುರಿಯಿಸದೆ ದಶನವಸನಾಂ ।
ತರಮಾರಕ್ತಂಗಳಾಗದೆನಸುಂ ಕಣ್ಗಳ್ ॥
ಭರಿತಭ್ರೂಕುಟಿಕಲಮಾ ।
ಗಿರದೆ ಮುಖಂ ಗೆಲ್ದನಿಂತುಮರಿನೃಪಬಲಮಂ ॥ 122

ಪರಪ(ವ)ಸಱ ಬಗೆಯೊಳೊಂದಂ ।
ದೊರೆಕೊಳಿಸುವುದಱಿಗತರ್ಕ್ಕತೋಪಸ್ಥಾನಂ ॥
ನಿರುತಂ ಸಮಾಹಿತಾಳಂ ।
ಕರಣಾಂತರಮುಕ್ಕುಮಿಂತು ತದುದಾಹರಣಂ ॥ 123

ಮುಳಿದಿರ್ದ್ದನಲ್ಲಳಲ್ಲಿಗೆ ।
ತಿಳಿಪಲ್ಪೋಪೆಂನ ಬಗೆಗೆ ದೊರೆಕೊಳೆ ಮುತ್ತಿಂ ॥
ತೆಳಮೆಱೆ ಗಗನಾಂತರದೊ ।
ಳ್ಪೊಳೆದತ್ತೆತ್ತಂ ವಸಂತಸಮಯೋತ್ತಂಸಂ ॥ 124

ತಡೆತಡೆದು ಕಾಂತನಲ್ಲಿಗೆ ।
ನಡೆಯಲ್ಬಗೆದೆನಗೆ ಕಾರಕಾರಿರುಳೊಳ್ ಸ ॥
ಯ್ತ್ತಡಮಡಿಕೆಗಳಂ ತೊಡೆದ ।
ತ್ತಡೆವಱಿಯದೆ ಪೊಳೆವ ಮಿಂಚುಮುಗಿಲೆಡೆಯೆಡೆಯೊಳ್ ॥ 125

ಕಂ॥ ತಱಿಸಂದು ಮನದೊಳೊಂದಂ ।
ಪೆಱತಂ ಮತ್ತದನೆ ಪೋಲ್ವುದಂ ಕುಱಿಪುಗಳಂ ॥
ಕುಱಿಮಾಡಿ ಮಾಡಿ ಪೇೞ್ವುದು ।
ನೆಱೆಯೆ ಸಮಾಸೋಕ್ತಿಯೆಂಬುದಿಂತದಱ ತೆಱಂ ॥ 126

ತಾಮರೆಯರಲ್ಗೊಳ್ ಸರಸನಿ ।
ಜಾಮೋದದೊಳೊಂದಿ ನಲಿದು ಮಕರಂದರಜೋ ॥
ವ್ಯಾಮುಗ್ಧದೊಳೀ ಮುಗುಳೊಳ ।
ಮಾ ಮೊಱೆಕ್ಕೆಯ್ನಱಿಸಿ ಸುೞಿವುದಳಿ ಕೆಲಕೆಲದೊಳ್ ॥ 127

ನೆರೆದತಿವಿರು(ದ)ಧ(ಗ್ಧ)ಗಣಿಕಾ ।
ಸುರತಾಸವಸೇವನಾಕೃತೋ(ತಾ)ದನನಾಗಿ ॥
ದ್ದಿರದೆ ತರುಣೀರತಾಂತರ ।
ಸರಾಗಮಂ ಪೇೞ್ವುದಲ್ಲಿ ತುಂಬಿಯ ನೆವದಿಂ ॥ 128

ದಾನಪರನಂ ನಿಜೋನ್ನತ ।
ಮಾನನನಾರೂಢವಿಪುಳವಂಶನನಂತೊಂ ॥
ದಾನೆಯುನಪಾಯಪಂಕದೊ ।
ಳೀನುಂ ತಳ್ವಿಲ್ಲದಿದ್ದುದಂ ಕಾಣಿಸಿದಂ ॥ 129

ತ್ಯಾಗಾದಿಗುಣಗಣೋದಯ ।
ಭಾಗಿಯನೇನಾನುಮೊಂದುಪಾಯಾಂತರಮಂ ॥
ನೀಗಲ್ಕೆಱೆಯದೆಯುಮುಪಮ ।
ನೀ ಗಣಿದದಿನಾನೆ ಮಾಡಿ ನುಡಿದಂ ಬಗೆಯಂ ॥ 130

ಬಗೆದರ್ತ್ಥಮನಱಿಪದೆ ಮೆ ।
ಲ್ಲಗೆ ತಿರ್ದ್ದುವ ಬಗೆಯುನದಱ ನೆವದಿಂ ಪೆಱತಂ ॥
ನಿಗದಿಸುವುದು ಪರ್ಯ್ಯಾಯೋ ।
ಕ್ತಿಗತಾಳಂಕಾರಮದಱ ಪಾಂಗಿಂತಕ್ಕುಂ ॥ 131

ನೀಮಿರ್ಬ್ಬ(ರ್ವ್ವ)ರುಮಂಸೆಗಮಿಂ ।
ತೀ ಮೊಱೆಗೊಳನಿಸು ಪೋೞ್ತು ನುಡಿವು(ಯು)ತ್ತಿರಮಾ ॥
ನಾಮೋದಕುಸುಮಸಮಿತಿಯ ।
ನಾ ಮರಗಳೊಳಾಯ್ದು ಕೊಯ್ದುಮಿಲ್ಲಿಗೆ ಬರ್ಪ್ಪೆಂ ॥ 132

ಕಂ॥ ಕೆಳದಿಯುಮಭಿಮತಮುಮನ್ನೊ ।
ಬ್ಬುೞಿಗೂಡೆ ವಿ[1]ದಗ್ಧ ಸುರತಸೇವನಮಂ ಮೊ ॥
ಕ್ಕಳಮುವರ್ಗೆ ಮಾಡಲೆಂದಾ ।
ಗಳೆ ಪೋಗಲ್ಬಗೆದು ನುಡಿದಳಿಂತೀ ಮಾತಂ ॥ 133

ಬಂದೊಂದಱೊಳೊಂದದುಮಂ ।
ತಂದೊಬ್ಬುೞಿ ಮಾಡಿ ತದ್ವಿಶೇಷಾಂತರಮಂ ॥
ಸಂದೇಹಮಿಲ್ಲದಱಿಪುವು ।
ದೊಂದೆ ವಿರೋಧಾಭಿಧಾನಮದುಮಿಂತಕ್ಕುಂ ॥ 134

ಶರದಾಗಮದೊಳ್ಕಳಹಂ ।
ಸರವಂ ಪೆರ್ಚ್ಚಿತ್ತು ಕಿವಿಗೆ ಸೊಗಯಿಸಿ ಪೀನಂ ॥
ವಿರಳತರಮಾಯ್ತು ಬರ್ಹಿಣ ।
ವಿರಾವಮುರುಮುದವಿರಾಮವಿರಸವಿರಾಗಂ ॥ 135

ಮಲಯಾನಿಲನೆಸಕದಿನುದಿ ।
ರ್ಚ್ಚಲರ್ಗಳ ಮಕರಂದಮಾಲೆಗಳ್ಪರೆದೆತ್ತಂ ॥
ನೆಲದೊಳ್ಬೞಿದಂ ಪಡೆದುವು ।
ವಿಲೋಚನಾಂಬುಗಳನಗ್ಗಳಂ ವಿರಹಿ[2]ಗಳಾ ॥ 136

ದೊರೆಕೊಳ್ವಂತಿರೆ ಮುಂನಂ ।
ವಿರೋಧಿಗತಮಾರ್ಗ್ಗಭೇದಮಂ ತೋಱಿದೆನಾ ॥
ದೆರದಿನುಪಮಾದಿಗಳೊಳಂ ।
ನಿರುತಮನುಕ್ತಮುಮನಱಿಗೆ ಲಕ್ಷ್ಯಾಂತರದೊಳ್ ॥ 137

ಪ್ರಸ್ತುತಮಲ್ಲದುದನೆ ಮಿಗೆ ।
ವಿಸ್ತಾರಿಸಿ ನೆಗೞೆ ಪೇೞ್ವೊಡಕ್ಕುಂ ಮತ್ತ ॥
ಪ್ರಸ್ತುತಮೆಂಬುದಳಂಕೃತಿ ।
ವಿಸ್ತರಮಿಂತಕ್ಕುಮದಱ ಲಕ್ಷ್ಯವಿಭಾಗಂ ॥ 138

ಮೃಗಗಣಮೆ ಸುಖಂ ಬಾೞ್ಗುಂ ।
ಸೊಗಯಿಸುವ ವನಾಂತರಾಳದೊಳ್ಬಹುತೃಣದೊಳ್ ॥
ಬಗೆದಳಿಪಿ ಸುೞಿದು ನೋಡದೆ ।
ಮೊಗಮಂ ವಸುಮದವಿರಾಮಕಲುಷಾಯ(ಯಿ)ತರಾ ॥ 139

1 B ವಿದಗ್ಧ. | 2 A & B ಗಳೊಳ್.

ಕಂ ॥ ಸಂತಂ ಮೃಗಗಣವೃತ್ತಿಯಂ ।
ನಿಂತಪ್ರಸ್ತುತಮನಱಿಪಿದಂ ಪರಸೇವಾ ॥
ಚಿಂತಾವಿಷಾದಿತಾಂತ ।
ಸ್ಸ್ವಾಂತಂ ಸಂತೈಸಲೆಂದು ತಂನ್ನ ತಾನೇ ॥ 140

ಗುಣದೋಷಾದಿಗಳಿಂದನು ।
ಗುಣಮಾಗಿರೆ ಪೇೞ್ದ ತದನುಸದೃಶದಿನೊಂದಂ ।
ಪ್ರಣಿಹಿತನಿದರ್ಶನಕ್ರಮ ।
ದೆಣಿಸುವುದಕ್ಕುಂ ನಿದರ್ಶನಾಲಂಕಾರಂ ॥ 141

ಅಮಳಿನಗುಣವೃತ್ತಿಗಳಿಂ ।
ಸಮುಪಸ್ಥಿತಸಕಳಜನಗತೋಚಿತಗುಣಮಂ ॥
ಸಮನಾಗಿಸುವರ್ಕ್ಕನಡಿ ।
ಕಮನೀಯಾಕಾರಬಿಂಬಮಂ ತಾಳ್ದುವವೊಲ್ ॥ 142

ಜನಮುೞ್ಗಿಯುದಂನೆಗಂ ಮುಂ ।
ನಂ ನಯಮುಱಿದಱಿಪಲಾರ್ಪೊಡದು ಮಂತ್ರಿಗುಣಂ ॥
ಜನವ್ಯಾ[1]ದಂನೆಗಲೆ ನಗ ।
ಧ್ವನಿವೋಲನುಕರಣವಾರ್ತ್ತೆ ಮಂತ್ರಿಯ ಗುಣಮೋ ॥ 143

ತಲೆಸೂಡಿ ಮುಂನೆ ಕಜ್ಜದ ।
ಫಲಮಂ ಬೆಸಗೊಂಡುಮೆ... ವನಲ್ಲಿಂ ಬೞಿಯಂ ॥
ತಲೆಯಂ ಕಿರಿಯಿಸಿ ದಿವಸಮ ।
ನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ ॥ 144

ಪ್ರತಿಕೂಲನಾಗಿ ನಿಲೆ ವಿಧಿ ।
ಮತನಯಮನುಕೂಲಮಾಗಿ ನಿಲೆಯುಂ ಕಾರ್ಯ್ಯ ॥
ಸ್ಥಿತಿಯಂ ಸಾಧಿಸಲಾಗದು ।
ಮೃತಕಕೃತೋಪಕೃತಿಯ ವೊಲನರ್ತ್ಥಾಯಾಸಂ ॥ 145

ಪದೆದುದಯಿಸಲೆಂದುಂ ಕಾ ।
ಲದೊಳಲ್ಲದುದಾರತೇಜಸೆರ್ಕ್ಕನುಮಲ್ಲಂ ॥
ಸದುದಿತಗುಣಸದಱಿಂ ನಯ ।
ವಿದನಪ್ಪಂ ಕಾಲಮಂ ನೆರಂ ತೋರ್ಕ್ಕೆ ನೃಪಂ ॥ 146

1 B ವಾದಾ.

ಕಂ ॥ ಪಡೆಯುಱಿಯಲಾದೊಡಱಿಯಂ ।
ಕಿಡಿಸುಗುಮಂತಃಕಳಂಕನೃಪಮಂಡಲಮಂ ॥
ತಡೆಯದೆ ತಮಸ್ಸ್ವಭಾವಂ ।
ಕಿಡಿಸುವವೊಲಱಿದು ರಾಹು ಶಶಿಮಂಡಲಮಂ ॥ 147

ಕಿಱಿದೆಂದೇಳಿಸಿ ಪಗೆಯಂ ।
ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ ॥
ನೆಱೆದಿಱಿಗುಂ ನೆಱೆದನುವಂ ।
ಮಱಸುವವೊಲ್ದಿವಸಕರನನಂಬುದನಿವಹಂ ॥ 148

ಬಳಗಿರ್ದ್ದ ವೈರಿಗಳ್ ಮೊ ।
ಕ್ಕಳಮಾಯುರ್ಪ್ಪೆರ್ಚ್ಚಲಧಿಕವಿಭವರ್ಕ್ಕಳನುಂ ॥
ತಳರದೊಡನಿರ್ದ್ದ ಬಡವಾ ।
ನಳನೆಂದುಂ ಪೆರ್ಚ್ಚಲೀಯ[ದಂ]ತಂಬುಧಿಯಂ ॥ 149

ಪರಪಕ್ಷಮುಳ್ಳಿನಂ ತನ ।
ಗಿರವುಬ್ಬಸಮದಱಿನಱಿವುದದನೇಗೆಯ್ದುಂ ॥
ಪರೆದು ಪುಡಿಯೆಲ್ಲಮಂ ನೀ ।
ನ್ನೆರೆದು ಕೆಸರ್ಮ್ಮಾಡದಂನೆಗಂ ನೆಲಸುಗುಮೇ ॥ 150

ಕುಱಿಗೊಂಡು ನೆಗೞ್ದನಿಚ್ಚೆಯು ।
ನಱಿಯದೆ ತಂನಿಚ್ಚೆಯಿಂದೆ ಕಜ್ಜಂ ಬೇೞ್ವಂ ॥
ದಱಿಸಲಿಸಲಾ[1]ಜನಾರ್ತ್ತನ ।
ತೆಱನಱಿಯದೆ ಮದ್ದುವೇೞ್ವ ಪಜ್ಜನ ತೆಱದಿಂ ॥ 151

ಪರಿಣಾಮಪಥ್ಯಮಂ ಸುಖ ।
ಪರಿಕರಮಂ ಮೆಚ್ಚದಂನರಾರೀ ಮಾತಂ ॥
ನಿರತಿಶಯರಸಸಮೇತಮ ।
ನರೋಚಕಂಮೆಚ್ಚದಂತೆ ಸೊಗಯಿಸುವುಣಿಸಂ ॥ 152

ಇಂತುದಿತಭೇದಮಂ ದೃ ।
ಷ್ಟಾಂತಾಳಂಕಾರಮಾರ್ಗ್ಗಮಂ ಕನ್ನಡದೊಳ್ ॥
ಸಂತತಗುಣಮಂ ಕೈಕೊ ।
ಳ್ವಂತಾಗಿರೆ ಬಗೆದು ಪೇೞ್ಗೆ ಪರಮಕವೀಶರ್ ॥ 153

1 B ನಾರನಾ.

ಕಂ॥ ಗುಣಜಾತ್ಯಾದಿಗಳಿಂದೊರೆ ।
ಯೆಣಿಸುವುದು ಸಹೋಕ್ತಿಯೆಂಬುದಕ್ಕುಂ ನಾನಾ ॥
ಗಣನಾವಿಶೇಷಮಾಗೀ ।
ಗಣಿದದಿನಾರೈದು ಕೊಳ್ಗೆ ಲಕ್ಷ್ಯಮನದಱಾ ॥ 154

ಅತಿಧವಳವಾಯ್ತು ಗುಣಸಂ ।
ತತಿಯೊಡನೆ ಯಶೋವಿತಾನಮಾಶಾಧೀನಂ ॥
ಸತತಂ ಪೆರ್ಚಿತ್ತು ನಿಜಾ ।
ಯತಿಯೊಡನೆ ಮಹಾವಿಭೂತಿ ಪರಮೋದಯನಾ ॥ 155

ಸಂಕೀರ್ಣಮೆಂಬುದುಕ್ತಾ ।
ಳಂಕಾರಸಮೂಹಸಂಕರಕ್ರಮಮಕ್ಕುಂ ॥
ಶಂಕಾವಿರಹಿತಚಿತ್ತರ ।
ದಂ ಕಾವ್ಯದೊಳಿಂತು ಪೇೞ್ಗೆ ಕವಿವೃಷಭರ್ಕಳ್ ॥ 156

ಅಪರಾಗಕಿ ಮುನಿಪತಿವೋ ।
ಲಪಗತಗುಣನಾಗಿಯುಂ ನಿಜಾಯತದೋಷಂ ॥
ವಿಪುಳಯಶೋಧನಲೋಭಂ ।
ನೃಪವೃಷಭನರಾತಿನಿಕರತರುದವದಹನಂ ॥ 157

ಪರಿವೃತ್ತಿಯೆಂಬುದಕ್ಕುಂ ।
ನಿರುಪಮಮರ್ತ್ಥಸ್ವರೂಪವಿನಿಮಯವಚನಂ ॥
ಪರಮಗುಣೋದಯಮದಱಾ ।
ಸ್ವರೂಪಮಂ ಬಗೆದು ಕೊಳ್ಗೆ ಮತ್ತೀ ತೆಱದಿಂ ॥ 158

ಅರಿಗೆ ದುರಾಪಹರಂಗಾಂ ।
ತರದೊಳಭೀತಂ ನಿಜಾರಿಸಮಿತಿಗಳಿಂದಂ ॥
ನೆರೆದಜಯಂಗೊಂಡಾಗಡೆ ।
ಸುರಾಂಗನಾಸುರತವಿಷಯಸುಖಮಂ ಕೊಟ್ಟಂ ॥ 159

ಅತಿಶಯಮಾಗಿರೆ ಗುಣಸಂ ।
ತತಿಯಂ ದೋಷಮನೆ ಪೇೞ್ದುವೊಲ್ಪೇೞ್ವುದು ನಿ ॥
ಶ್ಚಿತಶಬ್ದಾರ್ತ್ಥಂ ವ್ಯಾಜ ।
ಸ್ತುತಿಯೆಂಬುದುಮದಱ ಮಾೞ್ಕೆ ಮತ್ತಿಂತಕ್ಕುಂ ॥ 160

ಕಂ॥ ಜಲರಾಶಿಪ್ರಭವೆಯನವಿ ।
ಕಲಕೃಷ್ಣಗುಣಾನುರಕ್ತೆಯಂ ಮಿಗೆ ಲಕ್ಷ್ಮೀ ॥
ಲಲನೆಯನಾಂತುಂ ವಕ್ಷ ।
ಸ್ಥಲದೊಳ್ಪೇೞಿಸೆಂತುದಾರಚರಿತನೆ ಅಪ್ಪೈ ॥ 161

ಸತತಂ ಭುಜಂಗಭೋಗಾ ।
ಶ್ರಿತೆ ನಿಂನ ಕಳತ್ರಮೀ ಧರಾವಧು ಮತ್ತಂ ॥
ತತಿಶಯದೆ ಮಹಾಪುರುಷ ।
ಬ್ರತಮಂ ತಾಳ್ದುವಳುದಾರಚರಿತಕ್ರಮದಿಂ ॥ 162

ಕಾರಣಮಾಗಿರ್ಪ್ಪುದಳಂ ।
ಕಾರಂ ಹೇತೂಕ್ತಿಯೆಂಬುದದು ತಾಂ ನಾನಾ ॥
ಕಾರಂ ಜ್ಞಾ[1]ಪಕಸದಳಂ ।
ಕಾರಸುಮಾರ್ಗ್ಗಪ್ರಯೋಗಮೀ ತೆಱನದಱಾ ॥ 163

ಇಂದುಕಿರಣಂಗಳಿಂದಂ ।
ಚಂದನರಸದಿಂದೆ ಮಾಗಿಯಾ ನೀರಿಂದಂ ॥
ನಂದದು ಪರಿತಾಪಾನಳ ।
ನಿಂದಱಿದೆಂ ನಿಂನ ಮೆಯ್ಯ ಕಾಮಜ್ವರಮಂ ॥ 164

ಅಱಿವುಳ್ಳವರೊಳ್ಪರಸು(ಸ)ವು(ದು) ।
ದಱಿಂದಮಱಿಯದರೊಳಪ್ಪಪರಿಚಯದಿಂದಂ ॥
ನೆಱೆಯಿಂದ್ರಿಯಮಂ ಗೆಲ್ಲದು ।
ದಱಿಂದಮಕ್ಕುಂ ಜನಕ್ಕೆ ಪೀನಂ ಬೆಸನಂ ॥ 165

ಬೆಳೆದೊಱಗಿದ ಕಱಿಮೆಗಳುಂ ।
ತಿಳಿಗೊಳದೊಳಗಲರ್ದ ಸರಸಿಜಪ್ರತತಿಗಳುಂ ॥
ಕಳಹಂಸೆಗಳ್ಗೆ ಕೋಮಳ ।
ವಿಳಾಸವತಿಗಳ್ಗೆ ಪಡೆಗುಮೊಸಗೆಯನಾಗಳ್ ॥ 166

ತಿಳಿಗೊಳಗಳುಮಮಳಾಶಾ ।
ವಳಯಮುಮತಿಧವಳಜಳದಜಳಧರಪಥಮುಂ ॥
ತೊಳಪೆಳವೆಱೆಯುಂ ಕಳೆದುವು ।
ಮುಳಿಸಂ ಕಾಮಿಗಳ ಚಿತ್ತದೊಳ್ನೆಲಸಿದುದಂ ॥ 167

---

1 B ಈ ವಿಕಸ.

ಕಂ || ಕಾರಣಮನುಱಿಪೆ ನಿಜಸ್ಥಂ |
ಸ್ಫಾರಗುಣಾತಿಶಯದೊಳ್ತಗುಳ್ಚುವುದಕ್ಕುಂ ||
ಸಾರಂ ವಿಭಾವನಾಳಂ |
ಕಾರಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ || 168

ಸಮಱುಗೆಯ್ಯಿಲ್ಲದ ಮಱುಕಮು |
ಮಮರ್ದಿರೆ ಕೈಗೆಯ್ಯದೊಪ್ಪುವಂದಮುಮವಳಾ ||
ನೆವಮಿಲ್ಲದ ದರರ(ಹ)ಸಮುಂ |
ಸಮದಾಲಸಲಲಿತಗಮನಮುಂ ಸೊಗಯಿಸುಗುಂ || 169

ಗುಣದೊಳಮಱಿಪುವುದಿನಿಸವ |
ಗುಣಮಂ ದೋಷದೊಳಮಿನಿಸು ಗುಣಮಂ ತಂದಿ ||
ರ್ದ್ದಣಿಸುವುದು ಲೇಶಮೆಂಬುದು |
ಗಣಿದದಿನಿಂತಕ್ಕುಮವ(ದ)ಱ ಲಕ್ಷ್ಯವಿಭಾಗಂ || 170

ಮಾನಿಯುಮುದಾರಚರಿತನು |
ಮಾನತರಿಪುನಿಕರನುಂ ಮನಸ್ವಿಯುಮಂತಾ ||
ಮ್ಹಾನಸರನಾರುಮಂ ಮನ |
ಕೇನುಂ ಮುಟ್ಟಲ್ಲದಂತು ಬಗೆವುದು ದೋಷಂ || 171

ಕುಲಜನುಮಲ್ಲಂ ನಣ್ಪಿನ |
ಬಲಮುಂ ತನಗಿಲ್ಲ ಕಣ್ಗಮೇಳದನಾರೊ ||
ಳ್ನಲಸಿರನೆಲ್ಲಿಯುಮನವಂ |
ಚಲವೆಂದುಂ ಪತ್ತುವಿಡದದೊಂದುಂಟು ಗುಣಂ || 172

ಮಿಗೆ ಮನದ ಪೆಂಪುಮಂ ಕೈ |
ಮಿಗೆ ವಿಭವದ ಪೆಂಪುಮಂ ವಿಶೇಷಿಸಿ ಪೇಱ ||
ಲ್ಬಗೆವುದುದಾತ್ತಾಲಂಕಾ |
ರಗುಣೋದಯಮದಱಿಂತು ಸದುದಾಹರಣಂ || 173

ಚಲದೆಡೆಗೆ ಪಿರಿದು ರಜಮುಂ |
ನೆಲನುಂ ಪ್ರಿಯದೆಡೆಗೆ ಕಿಱಿದು ಕೊಳಲುಂ ಕಡಲುಂ ||
ಚಲಮುಂ ಪ್ರಿಯಮುಂ ಬಱಿ ಸಮ |
ಬಲಮಾಗಿರೆ ನೆ[1]ಗಳ್ವುಬಗೆಗೆ ಕಿಱಿದೇಂ ಪಿರಿದೇಂ || 174

1 B ನೆಗಳ್ಬ.

ಕಂ || ಅಱಿದಱಿಪಿ ಬಱಿಯನುಱಿಯದೆ |
ಪಱಿವರುಮಂತವಿಸಿಕೞಿಯದುೞಿವಳನಾದಂ ||
ಪಱಿಕೆಯ್ದು ತೆಱೆಲ್ತಿನುಱಿದಂ |
ತುಱಿದಮಹಾಪುರುಷರಱಿಯದುಱಿದಣೆ ಸಿರಿಯುಂ || 175

ಕಸವರಮೆಂಬುದು ನೆಱೆ ಸೈ |
ರಿಸಲಾರ್ಪೊಡೆ ಪರವಿ[1]ಚಾರಮುಂ ಧರ್ಮ್ಮಮುಮಂ ||
ಕಸವೇಂಕಸವರಮೇನು |
ಬ್ಬಸಮುಂಬಸಮಲ್ಲದಿರ್ದ್ದ ಮಾಡುವರೆಲ್ಲಂ || 176

ಪಾೞಿ ನಿಲೆ ನೆಗೞಿ ಬಾೞ್ವುದು |
ಬಾೞಿಂಬುದು ನಿಕ್ಕುವಂ ಗುಣಗ್ರಾಮಿಣಿಗಳ್ ||
ಪಾೞಿಗೆ ತೆಗೞೆ ಬಾೞ್ವೆ |
ಬಾೞೇನಾ ಚಂದ್ರತಾ[2]ರಮೋ ಮಾನಸರಾ || 177

ಪೊಲ್ಲಮೆಯುಂ ಗುಣಮುಂ ತಮ |
ಗಲ್ಲದೆ ಪುದುವಲ್ಲ ಮತ್ತೆ ತನಗುಂ ಪೆಱರ್ಗಂ ||
ನಿಲ್ಲದೆ ಜನಮುಂತಾಗಿಯು |
ಮೆಲ್ಲಂ ಮುನಿಸೊಸಗೆವೆರಸು ಪೞಿಗುಂ ಪೊಗೞ್ಗುಂ || 178

ಮಿಗೆ ಪೞಿವರೆನ್ನನೆಂನದೆ |
ಪೊಗೞ್ವರ್ನ್ನರೆದೆಲ್ಲರೆಂನನೆಂನದೆ ತಂನೊ ||
ಳ್ಬಗೆದುಭಯಲೋಕಹಿತದೊ |
ಳ್ನಿಗೞೆ ಜವಂ ಪೞಿಗೆ ಪೊಗೞ್ಗೆ ತನಗೇನದಱೊಳ್ || 179

ಪ್ರಣತಾರಿತ್ರುಟಿತಮುಕ್ತಾ |
ಗಣಗಣನೋತ್ತಂಸದಿಂ ಕಳಲ್ತುದುರೆ ಸಭಾಂ ||
ಗಣಮೊಪ್ಪೆ ವೀರನಾರಾ |
ಯಣನಾ ತಾರಕಿತನಭದ ವೊಲ್ ಸೊಗಯಿಸುಗುಂ || 180

ಪರಚಕ್ರಭೂಪರಟ್ಟಿದ |
ಕರಿಗಳ್ಬಿಡುತಪ್ಪ ಮದದ ಪೊನಲಿಂದೆತ್ತಂ ||
ನರಲೋಕಚಂದ್ರನಾ ಮಂ |
ದಿರದೊಳಗೊಳಗೆಲ್ಲಕಾಲಮುಂ ಕೆಸಱಕ್ಕುಂ || 181

1 B ವಿಭಾರ. | 2 ತಾರಮೋ.

ಕಂ ॥ ಅತಿಶಯಿತವಸ್ತುವಿಷಯಂ ।
ಪ್ರತೀತಿಯುಂ ಮಱಸಿ ನಿಱಸಿ ಪೇೞ್ವುದು ಪೇೞತಂ ॥
ಸತತಮುಪಹ್ನುತಿಸದಳಂ ।
ಕೃತಿಯುತ್ತಿಂತಕ್ಕು ಮದಱ ಲಕ್ಷ್ಯವಿಕಲ್ಪಂ ॥ 182

ಅಮೃತಮಯುಕಿರಣನೆಂಬುದು ।
ಮಮರದು ಶಿಶಿರಾಂಶುವೆಂಬುದುಂ ಶಶಿಗೆಂದುಂ ॥
ಸಮನಿಸಿ ವಿಷಕಿರಣನುಮನ ।
ಲಮರೀಚಿಯುಮೆಂದೆನಲ್ಕೆ ಮೋಹಾಪೋಹಂ ॥ 183

ಕುಸುಮಂಗಳೆಂಬ ಮಾತದು ।
ಪುಸಿ ದಹನಮಯಂಗಳಂಬುಗಳ್ಮನಸಿಜನಾ ॥
ಜಸಮೆೞೆಯೆ ಸುಡುವುದೆ(ವೆ)ರ್ದೆಯುಂ ।
ಬಿಸಿಯುವಿನ್ನೆಂದಿಂತೆ ಪೇೞೆ ಧರ್ಮ್ಮಾಪೋಹಂ ॥ 184

ಸ್ಮರನಸ್ತ್ರಸಮಿತಿಯದು ನಿ ।
ರ್ಭರಮಂಗಮನುರ್ಚ್ಚಿ ಪೋಗೆಯುಂ ಪೋಬೞೆಯುಂ ॥
ದೊಱೆಕೊಳಿಸಲಾಗದದಱಿಂ ।
ಶರತತಿಯಲ್ತೆಂಬುದಿಂತು ಧರ್ಮ್ಮಾಪೋಹಂ ॥ 185

ಸ್ಮರನೈದಂಬುಗಳಲ್ಲಿವು ।
ಶರಕೋಟಿಗಳಿಲ್ಲದಾಗಳಿಂತೀ ಲೋಕಂ ॥
ತರವತ್ತಿ ವಿರಹಿಗಣಮಂ ।
ನಿರುತಂ ಮರ್ದ್ದಿಸು[ವು]ವನೆ(ವೆ)ನೆ ಸುಗುಣಾಪೋಹಂ ॥ 186

ನವವಿಧರಸಂಗಳಂ ಮನ ।
ಕೆ ವರೆ ನಿರೂಪಿಸುವವಚನವಿರಚನೆ ರಸವ ॥
ತ್ಯವಿ(ಭಿ)ಧಾಳಂಕಾರಂ ಕುಱಿ ।
ತು ವಿಕಲ್ಪಿಸಿ ತೋರ್ಪ್ಪೆನದಱ ಲಕ್ಷ್ಯಕ್ರಮಮಂ ॥ 187

ವೀರಾದ್ಭುತಕರುಣಾಶೃಂ ।
ಗಾರಭಯಾನಕಸರೌದ್ರಬೀಭತ್ಸಮಹಾ ॥
ಸಾರತರಹಾಸ್ಯಶಾಂತಾ ।
ಧಾರಂ ನವವಿಧವಿಕಲ್ಪಮಾ ರಸಮಾರ್ಗ್ಗಂ ॥ 188

ರಾವಣನಂ ಕೊಂದು ಜಯ ।
ಶ್ರೀವಧುವಂ ತಾಳ್ದಿಮುಯ್ವಿನೊಳ್ವರಸೀತಾ ॥
ದೇವತೆಯುಂ ತೆರ್ಪ್ಪಂನೆಗ ।
ಮೋವದೆ ಪುರುಷಬ್ರತೋಚಿತಂ ವೀರರಸಂ ॥ 189

ಜಲನಿಧಿಯಂ ಪಾಯ್ದೊರ್ವ್ವನೆ ।
ನಿಲಿಸಿ ದಶಾನನನ ಪೊೞಲನಾ ಲಂಕೆಯನಾ ॥
ಕುಲಮಿಲ್ಲದಿಱಿದ(ದು)ನಿಂದಂ ।
ಕಲಿಯಾವಂ ಬಗೆದು ನೋೞ್ಪೊಡದ್ಭುತಮಾದಂ ॥ 190

ಕರೆಕರೆದು ಮನೋಧೃತಿಯಂ ।
ನೆರೆವಾಸೆಯೊಳಿರ್ದ್ದಳಲ್ಲದುೞಿದೊಡೆ ನಿಂನಾ ॥
ವಿರಹಾನಳನಾ ತಾಪದೆ ।
ಕರಗುಗುಮಿಂನಾಕೆಗಿನಿಸು ಕರುಣಿಸು ಮನದೊಳ್ ॥ 191

ಪುಳಕಿತಕಪೋಳಫಳಕಂ ।
ವಿಳಸಿತಮದಿರಾರುಣೇಕ್ಷಣಂ ಸ್ಫುರಿತೋಷ್ಠಂ ॥
ಕೆಳದೀ ನಿಂನ ಮುಖಂ ತಳ ।
ಮಳಗೊಳಿಸುಗುಮಿಂತು ನಿಭೃತಶೃಂಗಾರರಸಂ ॥ 192

ತಾಳತರುವಿತತಿಯೊಳ್ ಬೇ ।
ತಾಳಂಗಳ್ಮೞೆದು ತೆಱೆದು ಬಾಯ್ಗಳನಾ ಪಾ ॥
ತಾಳಬಿಲಂಗಳವೊಲ್ತಳ ।
ತಾಳಲಯಕ್ರಮದೆ ಕುಣಿಯೆ ಭಯಮಯನಾದಂ ॥ 193

ಕೊಂದು ಜಟಾಯುವನಾತಂ ।
ಮುಂದಿಟ್ಟು ಜನಕಸುತೆಯನೊಯ್ದುಂ(ಯ್ದಂ)ಮತ್ತಾ ॥
ಪಂದೆಯನಂತಕಮುಖದೊ[ಳ್] ।
ತಂದಿಟ್ಟಂದಲ್ಲದುೞಿಗುಮೇ ರೌದ್ರರಸಂ ॥ 194

ನವವಿವರಾವೃತಪೂತ ।
ದ್ರವತ್ವಗಾವೃತವಿಮಿಶ್ರಮಾಂಸೋಪಚಿತಂ ॥
ದೃ(ಧ್ರು)ವಮಸುಚಿತ್ರಭ್ರಮಿತ ।
ಕ್ರಿ ಮಹಂಮ್ಮೆಬಗೆವೊಡಿಂತು ಕಿಸುಗುಳಮಾದಂ ॥ 195

ಕಂ ॥ ಪರಪುರುಷಸೇವನಾಕೃತ ।
ಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್ ॥
ನೆರೆದಾಗಳ್ ಮಱೆಯಲ್ಬಗೆ ।
ದಿರ್ದುದು ನಗಿಸಿತ್ತು ಪೀನಮಭಿಸಾರಿಕೆಯಾ ॥ 196

...ಣದೊಳ್ಪರಿಚಿತಮಂ ।
ದ್ವಿಗುಣಮದೋರಂತೆ ಮುಟ್ಟಮಿದ್ದುದು ಮತ್ತಂ ॥
ವಿಗತವಿಕಾರಾಕಾರಂ ।
ಸೊಗಯಿಸುಗುಂ ನಿಂನ ರೂಪು ಶಾಂತಾಧಾರಂ ॥ 197

ಆರೂಢನಿಜಮನೋಹಂ ।
ಕಾರೋತ್ಕರ್ಷಪ್ರಕಾಶಮೂಜ್ಜಿತಸದಳಂ ॥
ಕಾರಂ ತದಿ......ವಿ ।
ಚಾರಮನೀ ತೆಱದಿನಱಿದು ಕೊಳ್ಗೆ ಕವೀಶರ್ ॥ 198

ಕಾಲ್ಲೆಂಬಿಸುಡಾಯುಧಮಂ ।
ಪುಲ್ಲಂಕಚ್ಚೆಲೆಱ ಪುತ್ತ ನಡಿಗೆಱಗೆಂನಾ ॥
ನಿಲ್ಲದೆತೊಲಗಿದಿರಿಂದಂ ।
ತಲ್ಲದೊಡೆಬ್ಬಾದ್ದುದಕ್ಕೈದುಗೆಯ್ನ್ಯಾನೀಗಳ್ ॥ 199

ಮಗುೞ್ದಂಮ......ಮಾತಂ ।
ನೆಗೞ್ದಿರೆ ಪೇೞ್ದುಗಳಕ್ಕುಮಾ ವ್ಯಾವೃತ್ತಿ ॥
ಸ್ವಗತಾಳಂಕಾರಂ ಬಗೆ ।
ಗಗಾಧಮನರದಱ ತೆಱನನೀ ಕುಱಿಪುಗಳಿಂ ॥ 200

ವಿರಹಂ ಪರಿತಾಪಮನಾ ।
ಪರಿತಾಪಮುಮಳಿಪನಳಿಪು...ವಲ್ಲಭನೊಳ್ ॥
ಬಗೆ(ರಿ)ದಿರ್ಪ್ಪಬಗೆಯನಾನೆರ ।
ದಿರವುಂ ಸುರತಾನುರಾಗಮಂ ಪೆರ್ಚಿಸುಗುಂ ॥ 201

ನುಡಿಯುಂ ತಗುಳ್ದಿ ನೋಟಂ ।
ನುಡಿಪರಿಚಯಮಂ ತಗುಳ್ದಿ ಪರಿಚಯಮಳಿಪಂ ॥
ತಡೆಯದೆ ತೆಗುಳ್ದಿ ಮನದಳಿ ।
ಪೊಡಗೊ......ದಂ ತಗುಳ್ಚುಗುಂ ಕಾಮಿಗಳಾ ॥ 202

ಕಂ ॥ ಪ್ರಿಯಕುಶಲಪೂರ್ವ್ವಕೋಚಿತ ।
ನಯವಿನಯೋದಾರರುಚಿತ(ರ)ವಚನಪ್ರಾಯಂ ॥
ಪ್ರಿಯತರಮೆಂಬಿದು ಸಕಳ ।
ಕ್ರಿಯಾನುಗಮಿತಾರ್ತ್ಥಮಿಂತುಟದುದಾಹರಣಂ ॥ 203

ಗು....ದಪರಕೆಯಂ ಬಂ ।
ಧುರಪುಣ್ಯಫಳಾನುಬಂಧಮಂ ನೆರೆದೆಂನೊ ॥
ಳ್ಪರಮಾನುಭಾವಭರಮಂ ।
ದೊರೆಕೊಂಡ(ಡು)ವದಿಂದು ಬರವಿನೊಳ್ನಿಂಮಡಿಯಾ ॥ 204

ದೊರೆಕೊಂಡು ಮನದ ಬಗೆಯಂ ।
ಪಿರಿದಾಗಿರೆ ಪಿರಿಯರೊಸಗೆಯಂ......ದುಂ ॥
ಪರಮಾಶೀರರ್ತ್ಥಾಳಂ ।
ಕರಣಾಂತರಮದಱ ಲಕ್ಷ್ಯಮಿಾ ತೆಱನಕ್ಕುಂ ॥ 205

ಆಯುಂ ಶ್ರೀಯುಂ ವಿಜಯಮು ।
ಮಾಯತಿಯುಂ ನೃಪತಿ ನಿನಗೆ ನಿಜಸಂತತಿಯುಂ ॥
ನ್ಯಾಯದೆ ಪೆರ್ಚ್ಚುವುದಕ್ಕೀ ।
ತೋಯಧಿಧರ[ಣೀಧ]ರಾಧರಸ್ಥಿತಿವರೆಗಂ ॥ 206

ಗೀತಿಕೆ॥ಭಾವಮೆಂಬುದಿಕ್ಕುಂ ಕವಿಗಳಾ ।
ಭಾವಿಸಿ ಮನದ ಬಗೆಯೊಂದಿದರ್ತ್ಥಂ ॥
ಕೇವಲಮದಱೊ[ಳ]ಳಂಕೃತಿ ।
ಭಾವಕಮೆಂಬುದಕ್ಕುಂ ನೃಪತುಂಗದೇವಮತದಿಂ ॥ 207

ಕಂ ॥ ಧ್ವನಿಯೆಂಬುದಳಂಕಾರಂ ।
ಧ್ವನಿಯಿಸುಗುಂ ಶಬ್ದದಿಂದಮರ್ತ್ಥದೆ ದೂಷ್ಯಂ ॥
ನೆನೆವುದಿದನಿಂತು ಕಮಳದೊ ।
ಳನಿಮಿಷಯುಗಮೊಪ್ಪಿ ತೋರ್ಪ್ಪದಿಂತಿದು ಚೋದ್ಯಂ ॥ 208

ವೃ ॥ ಅತಿಶಯಮಿತಿಹಾಸೋಪಾಶ್ರಯಂ ಮೋಕ್ಷ್ಕಥಾವಿ ।
ಶ್ರುತಚತುರವಿ[ಕಾ]ಶೋತ್ಪಾದಿತಾರ್ತ್ಥೋತ್ಕರಂ ಮೋ ॥
ಣತಿಕುಶಲಬಲೀಲಾಚಾರಲೋಕೋಪಕಾರೋ ।
ದಿತಪರಮಗುಣೈಕೋದಾರಧೀರಾಧಿಕಾರಂ ॥ 209

ವೃ ॥ ಪರಮಸುಖಪದಶ್ರೀಧರ್ಮ್ಮಕಾಮಾರ್ತ್ಥಮೋಕ್ಷ ।
ಸ್ಥಿರವಿಷಯವಿಶೇಷಾಖ್ಯಾನವಿಖ್ಯಾತತತ್ತ್ವಂ ॥
ಪುರಜನಪದಶೈಲಾದಿತ್ಯಚಂದ್ರೋದಯಾಸ್ತಂ ।
ತರ(ಸ)ವನ್ಯಗಗಣಾಖ್ಯಾವರ್ಣ್ಣನಾನಿರ್ಣ್ಣಯಾರ್ತ್ಥಂ ॥ 210

ಸಮುದಿತಕುಸುಮಾಮೋದೋದಯೋದ್ಯಾನಲೀಲಾ ।
ಕ್ರಮವಿಹಿತಜಲಕ್ರೀಡಾವಿನೋದಾದಿನೀಕಂ ॥
ಪ್ರಮದಮದನಮಾದ್ಯದ್ಭಾವನೋದ್ಯಾನರಾಮಂ ।
ರಮಣರಣಿ . . ಗೋಷ್ಠೀಬಂಧಸಂಧಿಪ್ರಬಂಧಂ ॥ 211

ವಿವಿಧವಿಭವಶೋಭಾರಂಭಲಂಭಪ್ರಲಂಭೋ ।
ದ್ಭವವಿಹಿತವಿವಾಹೋತ್ಸಾಹಸಾಕಲ್ಯಕಲ್ಪಂ ॥
ಪ್ರವರನೃಪಕುಮಾರಾತ್ಮೋದಯಾವಿಪ್ರಮೋದಾ ।
ಸವಸಮುದಿತಸೇವಾರಾಶಿವೃತ್ತಾಂತವೃತ್ತಂ ॥ 212

. . ವಿನಿಮಯನಾನಾಮಂತ್ರದೂತಪ್ರಯಾಣಾ ।
ಕ್ಷಯಸಮಯವಿಳಾಸೋಲ್ಲಾಸಿಸಂಗ್ರಾಮಿತಾಂಗಂ ॥
ಭಯವಿರಹಿತವೀರ್ಯ್ಯೌದಾರ್ಯ್ಯಗಂಭೀರಕಾರ್ಯ್ಯ ।
ಶ್ರಯವಿಶದಗುಣಶ್ರೀನಾಯಕೋತ್ಕರ್ಷವೇದ್ಯಂ ॥ 213

ವಿಲಸಿತಸದಳಂಕಾರಾದಿಸಂಸಾಧಿತಾರ್ತ್ಥಂ ।
ಕುಲವಿದಿತಪದೋದ್ಯತ್ಕೋಮಳಾಳಾಪಶೀಲಂ ॥
ಸುಲಲಿತಗುಣನಾನಾವೃತ್ತಜಾತಿಪ್ರವೃತ್ತಾ ।
ಸ್ಖಲಿತರಸವಿಶೇಷೋಪಾಶ್ರಯಶ್ರೀನಿವೇಶಂ ॥ 214

ನಯವಿದುದಿತಯುಕ್ತಿವ್ಯಕ್ತಿಲೋಕಪ್ರತೀತ್ಯಾ ।
ಶ್ರಯಸಕಳಕಳಾಲೀಲಾಕರಾಲ್ಪೋಪಜಲ್ಪಂ ॥
ನಿಯತಸಮಯಸಾರಾಸಾಧನೀಯಾದಿತಾರಾ ।
ನ್ವಯಪರಮತಪೋನುಷ್ಠಾನನಿಷ್ಠಾರ್ತ್ಥಸಿದ್ಧಂ ॥ 215

ವಿಗತಮಳಮಪಾತ್ರಾರಾತಿರಾ(ಸಾ)ರ್ತ್ಥಾರ್ತ್ಥವೀರಂ ।
ಸ್ಥಗಿತಮಮಿತನಾನಾಶಬ್ದವೀಚಿಪ್ರಸಂ(ಪಂ)ಚಂ ॥
ನಿಗದಿತಗುಣರತ್ನೈಕಾಕರಾ(ರಂ)ಸಾಗರಂಪೋಲ್ ।
ಸೊಗಯಿಸಿ ಧರಿಣೀ . . . . ಚರಾಕ್ರಾಂತಮಕ್ಕುಂ ॥ 216

ಗೀತಿಕೆ॥ ಇಂತು ಮಿಕ್ಕ ವರ್ಣ್ಣನೆಗಳ್ ।
ಸಂತತಮೊಂದಾಗಿ ಪೇಳ್ದ ಕಾವ್ಯಂ ಧರೆಯೊಳ್ ॥
ಸಂತತಿ ಕೆಡದೆ . ನಿಲ್ಕುಮಾಕ ।
ಲ್ಪಾಂತಂಬರಮಮೋಘವರ್ಷ್ಷಯಶಂಬೋಲ್ ॥ 217

ವೃ ॥ ಸಕಳಲೌಕಿಕಸಾಮಯಿಕೋರುವೈ ।
ದಿಕವಿಶೇಷವಿವೇಕಪರಾಯಣಂ ॥
ಪ್ರಕಟಿತೋಕ್ತಿವಿವಿಕ್ತಿಕಳಾಕಳಾ ।
ಪಕಮಪಾಹಿತಸಾಹಿತವಿದ್ಯೆಯೊಳ್ ॥ 218

ಅತಿಶಯಪ್ರವಿ(ತಿ)ಭಾವಿಭವಂ ಮಹಾ ।
ಚತುರವೃತ್ತಿನಿತಾಂತಮನಾಕುಳಂ ॥
ಪ್ರತಿವಿತರ್ಕ್ಕಿತಲಕ್ಷಣಲಕ್ಷ್ಯಮಾ ।
ಶ್ರಿತಮಹಾನೃಪತುಂಗಸಭಾಸದಂ ॥ 219

ಭಾವಿಸಲ್ಪಗೆದವಂ ಮಿಗೆ ಜಾಣನಶೇಷಭಾ ।
ಷಾವಿಶೇಷವಿಷಯಾತಿಶಯಾಮಳಕೌಶಳಂ ॥
ದೇವತಾಗುರುಗುಣೋದಯವೃದ್ಧಜನೋಪಸಂ ।
ಸೇವನಾಪರನಪಾಕೃತವೈಕೃತಚಾಪಳಂ ॥ 220

ಪರಮಕಾರ(ರು)ಣಿಕನಪ್ಪನಪಾಕೃತದೋಷನಾ ।
ದರಮನಾಗಿಸುವನಪ್ಪನಶೇಷಜನಂಗಳೊಳ್ ॥
ಪರಗುಣಾಸ್ತ(ಸ)ಹನನಲ್ಲದನಾತ್ಮಗುಣೋದಯಾಂ ।
ತರಸರೂಪನ . . . . . . ಪಾರಪರಾಯಣಂ ॥ 221

ಬಗೆದು ಮೇಣ್ಪರಮಧರ್ಮ್ಮಮನರ್ತ್ಥಿಯಿನನ್ವಯ ।
ಪ್ರಗಣಿತಾಭ್ಯುದಯಮೋಕ್ಷಸುಖಾಶ್ರಯಹೇತುವಂ ॥
ನೆಗೞೆ ಮೇಣುದಿತನಿರ್ಮ್ಮಳಕೀರ್ತ್ತಿವಿತಾನಮಂ ।
ಜಗದಗಾಧವಿವರೋದರದೀಪವಿಕಲ್ಪಮಂ ॥ 222

ಗೀತಿಕೆ॥ ಕೂಡೆ ಪೇಳ್ದ ನುತಕಾವ್ಯಮನಿಂತಭಿಮಾನಿತಾಸಿರ ।
ಗೀಡಿತಮಹಾಪುರುಷವ್ರತನಿಶ್ಚಿತಂ ॥
ಕೂಡದಂತೆ ಪೆಱರೊ ಮೆ(ಳ್ಕೆ)ಚ್ಚೆನೊಳ್ ತೆಱನಪ್ಪೊಡಂ ।
ನೋಡದಂ ಕುಱಿತಾವನಮೇನುಮಂ ॥ 223

ವೃ ॥ ಅಂತು ಬಿಳ್ದುತೆಱದಿಂ ವರಗೀತಗುಣೋದಯೈ ।
ಕಾಂತೆ . . . . . . .ವಿಷಯಾಶಯರಾಗಿ ನಿರಾಕುಳಂ ॥
ಸಂತತಂ ನುಡಿಗಳೊಳ್ ಬಗೆ ಪೆರ್ಚ್ಚಿರೆ ಪೇಳ್ದುವರ್ ।
ಸಂತಸಂಬಡಿಸುವರ್ ನೃಪತುಂಗಸಭಾ[ಸದರ್] ॥ 224

ಗೀತಿಕೆ॥ಪಾರ್ತ್ಥಿವಲೋಕನಪ್ಪನೆಂದುಂ ಕವಿ ವರ್ಣ್ಣಿಕುಂ ।
ಸ್ವಾರ್ತ್ಥಚಯಂ ನುತಸರಸ್ವತೀ ॥
ತೀರ್ತ್ಥಾವತಾರಮಾರ್ಗ್ಗನೆಸಕಂ ।
. . . . ॥ 225

ವೃ ॥ ಕುಲಜಾತಿದೇಶವಿಶದಂ ವಿನಯೋಪಚಾರಂ ।
ನಿಲಯೈಕವೃತ್ತಿ. . . . . ॥
ವಿಲಸದ್ಗುಣಾಗುಣವಿವರ್ತ್ತಿಗುರೂಪದೇಶಾ ।
ಮಲಿನಾವಬೋಧವಿದಿತಾಖಿಳಚೋದ್ಯವಿ[೦]ದೇಂ ॥ 226

ಮದಮಾನಮೋಹಭಯಲೋಭವಿಷಾದಹರ್ಷಾ ।
ಭ್ಯುದಿತಾಂತರಂಗರಿಪುವರ್ಗ್ಗಜಯಾವತಾರಂ ॥
ವಿದಿತ . . . . . .ವಿಭವಭಾವಿತವಿಶ್ವಲೋಕಂ ।
ಬುಧಗೋತ್ರಕಾವನನುನೀತಗೃಹೀತವಾಕ್ಯಂ ॥ 227

ಪರಮಾನುಭಾವನಭಿಮಾನಿವಿನೋದಶೀಲಂ ।
ಪರನತ್ಯುದಾರಚರಿತೋದಯನೇಕರೂ[ಪ]ಂ ॥
ಸರಸಾಶ್ರಯಪ್ರವರಮೂರ್ತ್ತಿಪರೋ. . . . . .ಂ ।
ನಿರುತಂ ಗುಣೋದಯನಕಾರಣಧುರ್ಯ್ಯಮಿತ್ರಂ ॥ 228

ಅಸಹಾಯಸಾಹಸವಿನೋದಿವಿವಿಕ್ತಚಿತ್ರ ।
ಪ್ರಸಹಪ್ರಕಾಶಿತಮಹೋದಯತತ್ತ್ವಸತ್ತ್ವ ॥
ವ್ಯಸನವ್ಯಪೇತಮುಪನೀತಕಳಾಕಲಾಪಂ ।
ಶಶಿ(ಸಿ)ಖಂಡನಿರ್ಮ್ಮಲಯಶೋವಿವಿಧಾವತಂಸಂ ॥ 229

ಪರಿವೃತನೃಪತುಂಗದೇವಮಾರ್ಗ್ಗಂ ।
ತರಗತಬೋಧವಿಶೇಷಯಾನಪಾತ್ರಂ ॥
ಪರಮಗುಣಪರೀತಕಾವ್ಯರತ್ನಾ ।
ಕರದುರುಪಾರಮನೆಯ್ದುಗುಂ ಮಹಾತ್ಮಂ ॥ 230

ಕಂ ॥ ದ್ವಿಪ್ರಾಸಂ ಸುಭಗದ್ವಂ ।
ದ್ವಪ್ರಾಸಂ ಕಾವ್ಯರಚನೆಘಟ(ಗುಚಿ)ತಮ(ಮೆ)[ನಿ]ಪ್ಪಾ ॥
ತ್ರಿಪ್ರಾಸಂ[ಸಲಿಯಂತಾ] ।
[ದಿಪ್ರಾಸಂ]ಬೇಱೆ ನಾಲ್ಕುತೆಱನಾಗಿಕ್ಕುಂ ॥ 231
ಅರಸರೊಳೆಲ ನೀಂ ಸರಸಮ ।
ನರಸಿಯ ಮೋಲಾಡುತಿರ್ಪ್ಪೆ ನಿನಗಿದು ಗುಣಮೇ ॥
ಅರಸರ್ ಸರಸಮನಱಿವರೆ ।
ಸರಸಮನಾಡರಸರಲ್ಲದವರೊಳ್ ಮಗಳೇ ॥ 232
ಬಂದೊಂದಱ ಸೌಂದರ್ಯ್ಯಮ ।
ನೊಂದೊಂದೀಕ್ಷಿಸಲೊಡರ್ಚ್ಚೆ ನಾಸಿಕಮುಡ್ಡಂ ॥
ಬಂದಂದಮನೀಕ್ಷಿಸಿ ಪೆಱ ।
ನಿಂ[ದಂ]ದೀಕ್ಷಿಸು[ವು]ವವಳ ನಿಡಿಯೆಸಳ್ಗಣ್ಗಳ್ ॥ 233
ನುಡಿಸಿದನೆಂನಂ ನಲ್ಲಂ ।
ಬಿಡಿಸಿದನೆಂನಂತರಂಗದನುತಾಪಮನೊ ॥
ಲ್ದುಡಿಸಿದನೊಳ್ಳುಳ್ಳುಡೆಯುಂ ।
ತುಡಿಸಿದನೆನಗಱಿಕೆಯುಪ್ಪ ಮಣಿಭೂಷಣಮಂ ॥ 234
ಗೀತಿಕೆ॥ತಾರಾಪತಿವರ್ತ್ತಿಕೀರ್ತ್ತಿವಿಸಾರಾ ।
. . . .ಪ್ರಭಯಾ ನಿಜತನುಪೂರಾ ॥
ಪೂರಾಶ್ರಿತಹೃತ್ಕ್ಲೇಶವಿದೂರಾ ।
ದೂರೀಕೃತಬಲವಿಸ್ತಾರಾ ॥ 235
ವ ॥ ಇವು ಕ್ರಮದಿಂ ದ್ವಿಪ್ರಾಸ ದ್ವಂದ್ವಪ್ರಾಸ ತ್ರಿಪ್ರಾಸ ಅಂತಾದಿಪ್ರಾಸ ಈ ನಾಲ್ಕು ಬೇಱೆ ಅನ್ಯಮಾರ್ಗ್ಗಲಕ್ಷಣಂ ॥
ವೃ ॥ ನಿರವದ್ಯಾನ್ವಯಮುದ್ಘಮುದ್ಧತಮ[ಹಾಕ್ಷೀ]ರಾಬ್ಧಿಡಿಂಡೀರಪಾಂ ।
ಡುರಮಾಕ್ರಾಂತಸಿ(ಸು)ಶೈಲಸಾಗರಧರಾಶಾಚಕ್ರವಾಳಾಂಬರಂ ॥
ಪರಮಶ್ರೀವಿಜಯಪ್ರಭೂತಿಜಯಶ[೦]ಸ್ತ್ರೀಬಾಲವೃದ್ಧಾಹಿತಂ ।
ಪರಮಾನಂದಿತಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ ॥ 236

ಇದು ಪರಮಸರಸ್ವತೀತೀರ್ತ್ಥಾವತಾರನೃಪತುಂಗದೇವಾನುಮತಮಪ್ಪ
ಕವಿರಾಜಮಾರ್ಗ್ಗದೊಳರ್ತ್ಥಾಲಂಕಾರಂ ತೃತೀಯಪರಿಚ್ಛೇದಂ ॥

ಕವಿರಾಜಮಾರ್ಗ್ಗಾಲಂಕಾರಂ ಸಮಾಪ್ತಂ ॥

ADDENDA ET CORRIGENDA.

Introduction.

Page.	Line.	
16,	31,	For "hold" read "holds."
"	"	for "antiquitys" read "antiquity."
19,	34,	for "adptations" read "adaptations."

Roman Text.

8,	8,	for "guḷisida" read "goḷisida."
15,	30,	before "kâraka" insert "vṛi ‖."

Kannaḍa Text.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
9,	8,	ಗುಳಿಸಿದ	ಗೊಳಿಸಿದ.
10,	17,	ಕೂಱಿನೂ	ಕೂಱಿನುಂ.
12,	5,	ದು ದೋಷಂ	ದು(ದ)ದೋಷಂ.
13,	27,	ದೆಂತುಂ	ದೆಂತು.
"	"	ಯಥಾ	ಯಾಥಾ.
14,	27,	ಬಳಿ	ಬಱಿ.
15,	8,	ಪೇಳ್ದೊ	ಪೇಱಿದ್ದೊ.
18,	8,	ಕಱಣಿಪ್ಪು	ಕರುಣಿಪ್ಪು.
44,	23,	ವೀಧಿ	ವೀಥಿ.
47,	16,	ಲಲಿತ	ಲಳಿತ.
55,	20,	ತೋಕ	ತ್ಕೋಕ.
71,	23,	ಗಣಗಣನೋತ್ತಂಸ	ಗ(ಗು)ಣಗಣನೋ(ನುತ್ತಂಸ
"	"	ಕಳಲ್ತು	ಕಱಿಲ್ತು(ಲ್ದು).
72,	24,	ತ್ರ್ಯವಿ(ಭಿ)ಧಾ	ತ್ರ್ಯ(ದ್ವಿ)ವಿಧಾ.
74,	20,	ಸ್ವಗತಾ	ಸ್ವ(ತ್ವ)ಗತಾ.
"	7,	ದಾದಿನೀಕಂ	ದಾದಿ(ಶ್ವ)ನೀಕಂ.